19 ವರ್ಷಗಳಿಂದ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

ನವದೆಹಲಿ 28° 38°

www.dehalivaarthe.com

EDITION: NEW DELHI - CIRCULATION IN UP & HARYANA STATES | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 19 | ಸಂಚಿಕೆ 304 | ನವದೆಹಲಿ | ಬೆಲೆ ₹ 8 | ಶನಿವಾರ, ಮೇ. 7, 2022

## ಒಳಪುಟಗಳಲ್ಲಿ

ಅಮರನಾಥ ಯಾತ್ರೆ ಮಾರ್ಗದಲ್ಲಿ ದಾಳಿಗೆ ಸಂಚು: ಮೂವರು ಭಯೋತ್ಪಾದಕರ ಹತ್ಯೆ - ಪು.4

ಆದಿಶಂಕರರ ಅದ್ವೈತ ತತ್ವವೇ ಭಾರತದ ಆಧಾರಸ್ತಂಭ: ಸಚಿವ ಡಾ.ಅಶ್ವತ್ಥನಾರಾಯಣ ಅಭಿಮತ - ಪು.5

## ದೀದಿ ನಾಡಲ್ಲಿ ಬಿಜೆಪಿ ಮುಖಂಡನ ನಿಗೂಢ ಸಾವು; ಸಿಬಿಐ ತನಿಖೆಗೆ ಅಮಿತ್ ಶಾ ಆಗ್ರಹ




**ಕೋಲ್ಕತ್ತಾ: ಮೇ7:** ಕೋಲ್ಕತ್ತಾದಲ್ಲಿ ನಿಗೂಢವಾಗಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾದ ಬಿಜೆಪಿ ಕಾರ್ಯಕರ್ತನ ಸಾವಿನ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕೆಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಆಗ್ರಹಿಸಿದ್ದಾರೆ. ಅವರು ಕೋಲ್ಕತ್ತಾ ನಗರಕ್ಕೆ ಭೇಟಿ ನೀಡುವ ಕೆಲ ಗಂಟೆಗಳ ಮೊದಲು ಬಿಜೆಪಿ ಕಾರ್ಯಕರ್ತ ನಿಗೂಢವಾಗಿ ಸಾವನ್ನಪ್ಪಿದ್ದರು. ಈ ಪ್ರಕರಣದ ಬಗ್ಗೆ ಅಮಿತ್ ಶಾ ಅವರು ಪಶ್ಚಿಮ ಬಂಗಾಳ ಸರ್ಕಾರಕ್ಕೆ ವರದಿ ಕೇಳಿದ್ದಾರೆ.

ಬಿಜೆಪಿಯ ಯುವ ಘಟಕದ ಸದಸ್ಯ ಅರ್ಜುನ್ ಚೌರಾಸಿಯಾ ಉತ್ತರ ಕೋಲ್ಕತ್ತಾದ ತನ್ನ ಮನೆಯ ಸಮೀಪವಿರುವ ಕಟ್ಟಡವೊಂದರಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಅಮಿತ್ ಶಾ ಅವರನ್ನು ಕೋಲ್ಕತ್ತಾಕ್ಕೆ ಸ್ವಾಗತಿಸಲು ಯೋಜಿಸಲಾದ ಕಾರ್ಯಕ್ರಮ ವೊಂದರಲ್ಲಿ ಅರ್ಬೈಜುನ್ಕ್ ಚೌರಾಸಿಯಾ ರ್‍ಯಾಲಿಯನ್ನು ಮುನ್ನಡೆಸಬೇಕಿತ್ತು. 'ಬಿಜೆಪಿ ಯುವ ಮೋರ್ಚಾ ನಾಯಕ ಅರ್ಜುನ್ ಚೌರಾಸಿಯಾ ಅವರ ಹತ್ಯೆಯ ಹಿಂದೆ ಇರುವವರಿಗೆ ಶಿಕ್ಷೆಯಾಗುವುದನ್ನು ನಾವು ಖಚಿತಪಡಿಸುತ್ತೇವೆ. ಈ ರಾಜಕೀಯ ಹಿಂಸಾಚಾರದ ಬಗ್ಗೆ ಗೃಹ ಸಚಿವಾಲಯವು ಅತ್ಯಂತ ಕಳವಳ ವ್ಯಕ್ತಪಡಿಸಿದೆ ಮತ್ತು ಪಶ್ಚಿಮ ಬಂಗಾಳ ಸರ್ಕಾರದಿಂದ ವರದಿ ಕೇಳಿದೆ' ಎಂದು ಚೌರಾಸಿಯಾ ಅವರ ಕುಟುಂಬವನ್ನು ಭೇಟಿಯಾದ ನಂತರ ಅಮಿತ್ ಶಾ ಸುದ್ದಿಗಾರರಿಗೆ ತಿಳಿಸಿದರು. ಕಳೆದ ವರ್ಷ ಬಿಜೆಪಿ ರಾಜ್ಯ ಚುನಾವಣೆಯಲ್ಲಿ ಸೋತ ನಂತರ ಅಮಿತ್ ಶಾ ಮೊದಲ ಬಾರಿಗೆ ಬಂಗಾಳದ ರಾಜಧಾನಿಗೆ ಭೇಟಿ ನೀಡಿದ್ದರಿಂದ ಎರಡೂ ಪಕ್ಷಗಳ ನಾಯಕರು ಮತ್ತು ಕಾರ್ಯಕರ್ತರು ಚೌರಾಸಿಯಾ ಅವರ ಮನೆಯ ಹೊರಗೆ ಗಂಟೆಗಳ ಕಾಲ ಪ್ರತಿಭಟನೆ ನಡೆಸಿದರು. ಈ ವೇಳೆ ಪರಿಸ್ಥಿತಿ ಉದ್ವಿಗ್ನಗೊಂಡಿತು.

'ನಿನ್ನೆ ತೃಣಮೂಲ ಸರ್ಕಾರ ತನ್ನ ಒಂದು ವರ್ಷದ ಅಧಿಕಾರಾವಧಿ ಪೂರೈಸಿದೆ. ಇಂದು ರಾಜ್ಯದಲ್ಲಿ ರಾಜಕೀಯ ಕೊಲೆಗಳು ಆರಂಭವಾಗಿವೆ. ಅರ್ಜುನ್ ಚೌರಾಸಿಯಾ ಹತ್ಯೆಯನ್ನು ಬಿಜೆಪಿ ಖಂಡಿಸುತ್ತದೆ. ದುಃಖಿತ ಕುಟುಂಬವನ್ನು ಭೇಟಿ ಮಾಡಿದ್ದೇನೆ, ಅವರ ಅಜ್ಜಿಗೂ ಥಳಿಸಲಾಗಿದೆ. ಘಟನೆಯ ಬಗ್ಗೆ ಸಿಬಿಐ ತನಿಖೆಗೆ ಬಿಜೆಪಿ ಆಗ್ರಹಿಸುತ್ತದೆ' ಎಂದು ಅಮಿತ್ ಶಾ ಹೇಳಿದರು. ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಅವರನ್ನು ಹತ್ಯೆ ಮಾಡಿದೆ ಎಂದು ಬಿಜೆಪಿ ಆರೋಪಿಸಿದ್ದು ಆರೋಪವನ್ನು ಟಿಎಂಸಿ ಬಲವಾಗಿ ನಿರಾಕರಿಸಿದೆ. ಮಮತಾ ಬ್ಯಾನರ್ಜಿ ಬಿಜೆಪಿ ಪಕ್ಷದ ಆರೋಪವನ್ನು ಆಧಾರರಹಿತ ಎಂದು ನಿರಾಕರಿಸಿದ್ದಾರೆ. ಪೊಲೀಸರು ಈ ಬಗ್ಗೆ ತನಿಖೆ ನಡೆಸಲಿ ಎಂದು ತೃಣಮೂಲ ಸಂಸದ ಸಂತಾನು ಸೇನ್ ಹೇಳಿದ್ದಾರೆ.

## ಆಗಸ್ಟ್ ಒಳಗೆ ಹೊಸ ಆರ್.ಟಿ.ಸಿಗಳ ವಿತರಣೆ: ಕಂದಾಯ ಇಲಾಖೆಗೆ ಸಿಎಂ ಸೂಚನೆ



**ಬೆಂಗಳೂರು, ಮೇ 6:** ರಾಜ್ಯದ ಎಲ್ಲಾ ಕಂದಾಯ ವಿಭಾಗಗಳ ತಲಾ 100 ಗ್ರಾಮಗಳಲ್ಲಿ ಹೊಸ ಆರ್.ಟಿ.ಸಿಗಳನ್ನು ಆಗಸ್ಟ್ ಮಾಹೆಯೊಳಗೆ ವಿತರಿಸಲು ಕ್ರಮ ವಹಿಸಬೇಕು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ..

2022-23 ನೇ ಸಾಲಿನ ಆಯವ್ಯಯ ಘೋಷಣೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಕಂದಾಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು.

ಕೃಷಿ ಜಮೀನು ಮತ್ತು ಇತರೆ ಸ್ವತ್ತುಗಳ ಡ್ರೋನ್ ಆಧಾರಿತ ಸರ್ವೆ ಕಾರ್ಯವನ್ನು ಕೈಗೊಂಡು ದಾಖಲೆಗಳ ಡಿಜಿಟಲೀಕರಣವಾಗಬೇಕು. ಪೋಡಿ ಕೆಲಸಗಳು ಸೂಕ್ತವಾಗಿ ಆಗಬೇಕು.ವಿವಿಧ ಸಾಮಾಜಿಕ ಭದ್ರತಾ ಪಿಂಚಣಿ ಯೋಜನೆಗಳಡಿ 59.45 ಲಕ್ಷ ಫಲಾನುಭವಿಗಳಿಗೆ ನೀಡುತ್ತಿರುವ ಮಾಶಾಸನ ಹೆಚ್ಚಳವಾಗಿದೆ. ಅವಿವಾಹಿತ, ವಿಚ್ಛೇದಿತ ಮಹಿಳೆಯರಿಗೆ ಹಾಗೂ ಲಿಂಗತ್ವ ಅಲ್ಪಸಂಖ್ಯಾತರಿಗೆ 1.32 ಲಕ್ಷ ಫಲಾನುಭವಿಗಳಿಗೆ ಅನುಕೂಲವಾಗಲಿದೆ. ಯೋಜನೆಗಳನ್ನು ಫಲಾನುಭವಿಗಳಿಗೆ ತಲುಪಿಸುವಲ್ಲಿ ಉತ್ತಮ ಕೆಲಸವಾಗಿರುವ ಬಗ್ಗೆ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಆರ್.ಟಿ.ಸಿ ಗಳನ್ನು ಅಧಿಕೃತವಾಗಿ ನೀಡದಿದ್ದರೆ ವ್ಯಾಜ್ಯಗಳು ಬಗೆಹರಿಯುವುದಿಲ್ಲ. ಈ ಬಗ್ಗೆ ಪರಿಶೀಲನಾ ಕಾರ್ಯವನ್ನು ಹಂತ ಹಂತವಾಗಿ ಮಾಡಬೇಕು. ಭೂ ವಿವಾದಗಳ ಪ್ರಕರಣಗಳಿಂದ ಜನರಿಗೆ ತೊಂದರೆಯಾಗದಂತೆ ಅಧಿಕಾರಿಗಳು ಸೂಕ್ತ ಗಮನ ಹರಿಸಬೇಕಲ್ಲದೇ ಹಳೆ ವ್ಯವಸ್ಥೆಯಲ್ಲಿ ಪ್ರತಿದಿನಕ್ಕೆ 3-4 ನೋಂದಣಿಯಾಗುತ್ತಿದೆ. ರಾಜ್ಯದ ಪ್ರತಿ ವಿಭಾಗದಲ್ಲಿ ನಾಲ್ಕು ಅಥವಾ ಐದು ತಾಲ್ಲೂಕಗಳಲ್ಲಿ ನೋಂದಣಿ ಪ್ರಕ್ರಿಯೆಯನ್ನು ಕೈಗೊಳ್ಳಲು ಸೂಚಿಸಿದರು.

ಸಬ್ ರಿಜಿಸ್ಟ್ರಾರ್ ಕಚೇರಿ ಸ್ಥಾಪನೆ: ಸಾರ್ವಜನಿಕರಿಗೆ ಸೌಕರ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಬೆಂಗಳೂರಿಗೆ ಹೆಚ್ಚಿನ ಉಪನೋಂದಣಾಧಿಕಾರಿಗಳ ಕಚೇರಿಯನ್ನು ಸ್ಥಾಪಿಸುವ ಬಗ್ಗೆ ಕ್ರಮ ವಹಿಸಬೇಕು ಎಂದೂ ಮುಖ್ಯಮಂತ್ರಿ ಬೊಮ್ಮಾಯಿ ಸೂಚಿಸಿದರು.

## ವಿದೇಶಿ ವಸ್ತುಗಳ ಮೋಹ ಬಿಡಿ: ಪ್ರಧಾನಿ ಕಿವಿಮಾತು



**ಪುಣೆ, ಮೇ 6–** ಭಾರತವು ಸ್ವಾತಂತ್ರ್ಯದ 75ನೇ ವರ್ಷದ ಸಂಭ್ರಮಾಚರಣೆಯಲ್ಲಿದೆ. ಈಗಲಾದರು ವಿದೇಶೀ ವಸ್ತುಗಳಿಗೆ ದಾಸರಾಗುವುದನ್ನು ಬಿಟ್ಟು ಬಿಡಿ ಎಂದು ಪ್ರಧಾನಿ ನರೇಂದ್ರ ಮೋದಿ ದೇಶವಾಸಿಗಳಿಗೆ ಕರೆ ನೀಡಿದ್ದಾರೆ.

ವೋಕಲ್ ಫಾರ್ ಲೋಕಲ್ ಮಂತ್ರಕ್ಕೆ ಒತ್ತು ನೀಡಿ, ವಿದೇಶೀ ವಸ್ತುಗಳ ಬಳಕೆಯನ್ನು ಆದಷ್ಟು ಕಡಿಮೆ ಮಾಡಿ ಎಂದವರು ಪುನರುಚ್ಚರಿಸಿದರು. ಜೈನ್ ಇಂಟರ್‌ನ್ಯಾಷನಲ್ ಟ್ರೇಡ್ ಆರ್ಗನೈಸೇಶನ್‌ನ 'ಜೆ ಐಟಿಒ ಕನೆಕ್ಟ್ 2022'ವ್ಯಾಪಾರ ಮೇಳವನ್ನು ವಿಡಿಯೊ ಲಿಂಕ್ ಮೂಲಕ ಮೋದಿಜಿ ಉದ್ಘಾಟಿಸಿದರು.

ವಿದೇಶೀ ಉತ್ಪನ್ನಗಳ ಮೇಲಿನ ಅವಲಂಬನೆ ತೀರಾ ಕಡಿಮೆಯಾಗಬೇಕು, ರಫ್ತಿಗೆ ಹೊಸ ಜಾಗಗಳನ್ನು ಹುಡುಕಬೇಕು ಮತ್ತು ಈ ಬಗ್ಗೆ ಸ್ಥಳೀಯ ಮಾರುಕಟ್ಟೆಗಳಲ್ಲಿ ಜಾಗೃತಿ ಮೂಡಿಸಬೇಕು, ನಮ್ಮ ಉತ್ಪನ್ನಗಳೂ ಪರಿಸರಕ್ಕೆ ಹಾನಿ ಮಾಡದಂತಿರಬೇಕು ಮತ್ತು ಲೋಪ ಮುಕ್ತವಾಗಿರಬೇಕು ಎಂದು ಪ್ರಧಾನಿ ಕರೆಯಿತ್ತರು.

## ಅರಣ್ಯ ನಾಶ ತಡೆ ಕ್ರಿಯಾಯೋಜನೆ ರೂಪಿಸಿ: ಮುಖ್ಯಮಂತ್ರಿ ಸೂಚನೆ



**ಬೆಂಗಳೂರು, ಮೇ 6:** ರಾಜ್ಯದಲ್ಲಿ ಅರಣ್ಯ ಜೀವಿಶಾಸ್ತ್ರ ವ್ಯವಸ್ಥೆಯ ಮೇಲೆ ಉಂಟಾಗಿರುವ ದುಷ್ಪರಿಣಾಮಗಳನ್ನು ಸರಿದೂಗಿಸಲು ಐಐಎಸ್ಸಿ ಸಂಸ್ಥೆಯ ತಜ್ಞರ ನೆರವಿನೊಂದಿಗೆ ಕ್ರಿಯಾ ಯೋಜನೆ ರೂಪಿಸುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೂಚಿಸಿದ್ದಾರೆ.

2022-23ನೇ ಸಾಲಿನ ಆಯವ್ಯಯ ಘೋಷಣೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಇಂದು ನಡೆದ ಅರಣ್ಯ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತ ನಾಡಿದರು.

ಕ್ರಿಯಾಯೋಜನೆ ಸಿದ್ದಪಡಿಸಿ ಜಿಲ್ಲೆಗಳಿಗೆ ಕಾಲಮಿತಿ ನಿಗದಿಪಡಿಸಿ ಅನುಷ್ಠಾನದ ರೂಪುರೇಷೆಗಳನ್ನು ಸಿದ್ಧಪಡಿಸುವ ಜತೆಗೆ ವಿಶ್ವ ಬ್ಯಾಂಕ್ ನೆರವಿನ ಪ್ಲಾಸ್ಟಿಕ್ ನಿರ್ವಹಣೆ ಯೋಜನೆಗೆ ದೊಡ್ಡ ಮೊತ್ತದ ಅನುದಾನ ನಿಗದಿಪಡಿಸಲಾಗಿದೆ. ಪ್ಲಾಸ್ಟಿಕ್ ನಿಯಂತ್ರಣಕ್ಕೆ ನಿರ್ದಿಷ್ಟ ಯೋಜನೆಯನ್ನು ರೂಪಿಸಬೇಕು. ವ್ಯಾಪಕ ಪ್ರಚಾರ ನೀಡಬೇಕು. ಸಾರ್ವಜನಿಕರನ್ನು ತೊಡಗಿಸಿ ಕೊಳ್ಳಬೇಕು. ಫಲಿತಾಂಶವನ್ನು ಜನರಿಗೆ ತಿಳಿಸುವಂತೆ ಸೂಚಿಸಿದರು.

ಮರಗಳ ಕಡಿತಲೆ ಮತ್ತು ಸಾಗಾಣಿಕೆ ಸರಳೀಕರಣ ಯೋಜನೆಯಡಿ ಖಾಸಗಿ ಭೂಮಿಗಳಲ್ಲಿ ರೈತರು ಬೆಳೆದಿರುವ ಮರಗಳನ್ನು ಕಡಿಯುವ ಮತ್ತು ಸಾಗಣಿಕೆ ಮಾಡಲು ಅನುಮತಿ ಪ್ರಕ್ರಿಯೆ ಸರಳೀಕರಣ ಮಾಡುವುದು, ದುರ್ಬಳಕೆಯಾಗದಂತೆ ಕ್ರಮ ವಹಿಸುವುದು. ಹಳಿಯಾಳ, ದಾಂಡೇಲಿಗಳಲ್ಲಿನ ಟಿಂಬರ್ ಮಾರುಕಟ್ಟೆ ಮೇಲೆ ನಿಯಂತ್ರಿಸಬೇಕು ಎಂದು ಹೇಳಿದ್ದಾರೆ.

ಸಭೆಯಲ್ಲಿ ಅರಣ್ಯ ಸಚಿವ ಉಮೇಶ್ ಕತ್ತಿ, ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಅಭಿವೃದ್ಧಿ ಆಯುಕ್ತೆ ಹಾಗೂ ಅಪರ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಆರ್ಥಿಕ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್, ಯೋಜನಾ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಡಾ: ಶಾಲಿನಿ ರಜನೀಶ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಅರಣ್ಯ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಆರ್. ಕೆ.ಸಿಂಗ್, ವಿಜಯ್ ಕುಮಾರ್ ಗೋಗಿ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಮಾಜಿ ಸಿಎಂ ಎಸ್.ಎಂ.ಕೃಷ್ಣ ಹುಟ್ಟುಹಬ್ಬಕ್ಕೆ ಶುಭಕೋರಿದ ಸಿಎಂ ಬೊಮ್ಮಾಯಿ, ಆರ್.ಅಶೋಕ್



**ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಾಜಿ ಮುಖ್ಯಮಂತ್ರಿ ಎಸ್ ಎಂ ಕೃಷ್ಣ ಅವರನ್ನು ಭೇಟಿ ಮಾಡಿ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ಸಂದರ್ಭ ಕಂದಾಯ ಸಚಿವ ಆರ್ ಅಶೊಕ, ಶಾಸಕ ಎಂ ಕೃಷ್ಣಪ್ಪ ಉಪಸ್ಥಿತರಿದ್ದರು.**

ಬೆಂಗಳೂರು: ಮೇ 06– ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ಹುಟ್ಟು ಹಬ್ಬದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕಂದಾಯ ಸಚಿವ ಆರ್. ಅಶೋಕ್ ಅವರು ಸದಾಶಿವ ನಗರದಲ್ಲಿರುವ ಮನೆಗೆ ಭೇಟಿ ಮಾಡಿ ಶುಭ ಕೋರಿದ್ದಾರೆ

ಈ ವೇಳೆ ಮಾತನಾಡಿದ ಅವರು, ಮಂಡ್ಯ ಭಾಗದಲ್ಲಿ ಬಿಜೆಪಿ ಸಮಾವೇಶ ವಿಚಾರ ಚರ್ಚೆಯಲ್ಲಿದೆ. ಪಕ್ಷದಲ್ಲಿ ಚರ್ಚೆ ಮಾಡಿ ನಂತರ ತೀರ್ಮಾನ ಮಾಡುತ್ತೇವೆ. ರಾಜ್ಯದ ಎಲ್ಲಾ ಭಾಗದಲ್ಲೂ ಬಹಳ ಜನ ಪಕ್ಷಕ್ಕೆ ಬರುತ್ತಿದ್ದಾರೆ. ಕೋಲಾರ, ಮಂಡ್ಯ ಸೇರಿ ಎಲ್ಲಾ ಭಾಗದಿಂದ ಬರುತ್ತಿದ್ದಾರೆ.

ಬ್ಯಾಚ್ ಪ್ರಕಾರ ಸೇರ್ಪಡೆ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಾರಂಭ ಆಗುತ್ತದೆ ಎಂದು ಹೇಳಿದರು. ಬಹಳ ದೊಡ್ಡ ಪ್ರಮಾಣದಲ್ಲಿ ಪಕ್ಷದ ಮೇಲೆ ಒಲವು ಯುವಕರಲ್ಲಿದೆ. ಮಂಡ್ಯ ಜಿಲ್ಲೆಯಲ್ಲಿ ಯುವ ನಾಯಕತ್ವ ಹೊರ ಹೊಮ್ಮುವ ಸಾಧ್ಯತೆ ಇದೆ.

ಬಿಜೆಪಿ ಪರವಾಗಿ ಮಂಡ್ಯದಲ್ಲಿ ಶಕ್ತಿಯ ಅಲೆ ಕಾಣಲಿದೆ.

ಮಂಡ್ಯದಲ್ಲಿ ಎಸ್.ಡಿ. ಜಯರಾಂ ಅವರ ಮಗ ಸೇರಿ ಹಲವರ ಜೊತೆ ಮಾತಾಡುತ್ತಿದ್ದೇವೆ. ಯಾರು ಪಕ್ಷದ ಬಗ್ಗೆ ಒಲವು ತೋರಿಸುತ್ತಾರೋ ಅವರೆಲ್ಲರ ಜೊತೆ ಮಾತಾಡುತ್ತೇವೆ ಎಂದರು.

ಸಚಿವ ಆರ್. ಅಶೋಕ್ ಮಾತನಾಡಿ, ಮಾಜಿ ಶಾಸಕ ಮಾಲೂರು ಮಂಜುನಾಥ್ ಬಿಜೆಪಿ ಸೇರ್ಪಡೆಗೆ ವಿರೋಧ ಇಲ್ಲ, ತೀರ್ಮಾನ ಆಗಿದೆ, ನಾಳೆ ಸೇರ್ಪಡೆ ಆಗುತ್ತಾರೆ. ಹೈಕಮಾಂಡ್ ಯಾರಿಗೆಲ್ಲಾ ಒಪ್ಪಿಗೆ ಕೊಟ್ಟಿದೆಯೋ ಅವರೆಲ್ಲಾ ಸೇರುತ್ತಾರೆ. ವರ್ತೂರು ಪ್ರಕಾಶ್ ಕೂಡಾ ಸೇರ್ಪಡೆ ಆಗುತ್ತಾರೆ ಮಂಡ್ಯ ಸಂಸದರ ಸೇರ್ಪಡೆ ಬಗ್ಗೆ ಕಾದು ನೋಡಿ ಎಂದು ಹೇಳಿದರು.

## ಕೇದಾರನಾಥದಲ್ಲಿ ಮೊದಲ ದಿನವೇ ಭಕ್ತ ಸಾಗರ



ಡೆಹ್ರಾಡೂನ್, ಮೇ 6: ದೇಶದ ಪುರಾಣ ಪ್ರಸಿದ್ದ ದೇವಾಲಯಗಳಲ್ಲಿ ಒಂದಾದ ಉತ್ತರಾಖಂಡದಲ್ಲಿರುವ ಕೇದಾರನಾಥ ದೇವಾಲಯದ ಬಾಗಿಲನ್ನು ಆರು ತಿಂಗಳ ನಂತರ ಶುಕ್ರವಾರ (ಮೇ 6) ಮುಂಜಾನೆ 6.25ಕ್ಕೆ ತೆರೆಯಲಾಗಿದೆ. ಬಾಗಿಲು ತೆರೆಯುವ ಮುನ್ನ ಭಕ್ತರನ್ನು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಸ್ವಾಗತಿಸಿದ್ದಾರೆ.

ದೇವಾಲಯದ ಬಾಗಿಲು ತೆರೆಯುವ ವೇಳೆ ಸಿಎಂ ಧಾಮಿ ಸೇರಿದಂತೆ ಸರಕಾರದ ಕ್ಯಾಬಿನೆಟ್ ಸಚಿವರು ಮತ್ತು ಹಿರಿಯ ಅಧಿಕಾರಿಗಳು ಅಲ್ಲಿ ಹಾಜರಿದ್ದರು. "ಚಾರ್ ಧಾಮ್ ಯಾತ್ರೆಗೆ ಬರುವ ಭಕ್ತರಿಗೆ ಸುರಕ್ಷಿತ ಪ್ರಯಾಣವನ್ನು ನಮ್ಮ ಸರಕಾರ ಖಾತ್ರಿ ಪಡಿಸುತ್ತದೆ"ಎಂದು ಸಿಎಂ ಈ ಸಂದರ್ಭದಲ್ಲಿ ಹೇಳಿದ್ದಾರೆ. ದ್ವಾದಶ ಜ್ಯೋತಿರ್ಲಿಂಗ ದೇವಾಲಯಗಳಲ್ಲೊಂದಾದ ಕೇದಾರನಾಥ ದೇವಾಲಯದಲ್ಲಿ ಮೊದಲ ದಿನವೇ ಭಾರೀ ಸಂಖ್ಯೆಯಲ್ಲಿ ಭಕ್ತರು ಜಮಾಯಿಸಿದ್ದಾರೆ. ಕೋವಿಡ್ ಶಿಷ್ಟಾಚಾರದ ಕಾರಣಕ್ಕಾಗಿ ಬದರೀನಾಥ ಹೊರತು ಪಡಿಸಿ ಮೂರು ಕ್ಷೇತ್ರಗಳಲ್ಲಿ ಹನ್ನೆರಡು ಸಾವಿರ ಭಕ್ತರಿಗೆ ಮತ್ತು ಬದರೀನಾಥದಲ್ಲಿ ಹದಿನೈದು ಸಾವಿರ ಭಕ್ತರ ಭೇಟಿಗೆ ಅವಕಾಶ ನೀಡಲಾಗಿದೆ.

## ಪಿಎಸ್ಐ ಹಗರಣದಲ್ಲಿ ಕಾಂಗ್ರೆಸ್‌ನ ಹಿರಿಯ ನಾಯಕರು; ಸದ್ಯದಲ್ಲೇ ವಿವರ ಬಹಿರಂಗ: ಸಚಿವ ಆರಗ ಜ್ಞಾನೇಂದ್ರ ಹೊಸ ಬಾಂಬ್



**ಕಲಬುರಗಿ, ಮೇ. 6:** ಪಿಎಸ್ ಐ ಪರೀಕ್ಷೆ ಅಕ್ರಮ ಹಗರಣದಲ್ಲಿ ಈಗಾಗಲೇ ಕಾಂಗ್ರೆಸ್ಸಿನ ಮರಿನಾಯಕರು ಸಿಲುಕಿಹಾಕಿ ಕೊಂಡಿದ್ದು ಸಿಐಡಿ ಅವರನ್ನು ಬಂಧಿಸಿದೆ. ಕಾಂಗ್ರೆಸ್ಸಿನ ಹಿರಿನಾಯಕರಿಗೆ ಈಗ ನಡುಕು ಶುರುವಾಗಿದೆ. ಯಾವ್ಯಾವ ಹಿರಿ ನಾಯಕರು ಸಿಲುಕಿದ್ದಾರೆ ಎಂಬುದು ಶೀಘ್ರದಲ್ಲೇ ಹೊರಬೀಳಲಿದೆ.

ಯಾರು ಎಷ್ಟೇ ದೊಡ್ಡವರಾಗಿದ್ದರೂ ಅಕ್ರಮ ಎಸಗಿದವರನ್ನು ಬಿಡುವದಿಲ್ಲ. ಕಂಬಿ ಎಣಿಸುವಂತೆ ಮಾಡುತ್ತೇವೆ ಎಂದು ಸಚಿವ ಆರಗ ಜ್ಞಾನೇಂದ್ರ ತಿರುಗೇಟು ನೀಡಿದ್ದಾರೆ. ಕಲಬುರ್ಗಿಯಲ್ಲಿಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪಿಎಸ್‌ಐ ನೇಮಕಾತಿ ಪರೀಕ್ಷೆ ಹಗರಣದಲ್ಲಿ ಕೈ ಹಾಕಿರುವವರು ಮುಟ್ಟಿಕೊಳ್ಳುವಂತೆ ಉತ್ತರ ನೀಡುತ್ತೇವೆ. ಅವರು ಎಷ್ಟೇ ದೊಡ್ಡವರಿದ್ದರೂ ಸರ್ಕಾರ ಬಿಡುವುದಿಲ್ಲ ಎಂದು ಎಚ್ಚರಿಕೆ ನೀಡಿದರು. ಪಿಎಸ್‌ಐ ನೇಮಕಾತಿಗೆ ಸಂಬಂಧಿಸಿದಂತೆ ನಿತ್ಯ ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್‌ನವರು ಆರೋಪ ಮಾಡ್ತಾರೆ.

ದಾಖಲೆ ಕೊಡಿ ಎಂದರೆ ಓಡಿ ಹೋಗ್ತಾರೆ. ನೋಟೀಸ್ ನೀಡಿದರೂ ಕಾಂಗ್ರೆಸ್‌ನವರು ಬಂದು ತನಿಖಾಧಿಕಾರಿಗಳಿಗೆ ದಾಖಲಾತಿ ನೀಡುತ್ತಿಲ್ಲ. ಬಹಿರಂಗ ಆರೋಪಗಳ ಮೂಲಕ ತನಿಖೆಯ ದಾರಿ ತಪ್ಪಿಸೋದು ಮಾತ್ರ ಅವರಿಗೆ ಗೊತ್ತು ಎಂದು ಗೃಹ ಸಚಿವ ಅರಗ ಜ್ಞಾನೇಂದ್ರ ತಿರುಗೇಟು ನೀಡಿದರು.

ಪಿಎಸ್‌ಐ ನೇಮಕಾತಿಹಗರಣದಲ್ಲಿ ಕಾಂಗ್ರೆಸ್ ನಾಯಕರೇ ಸಿಕ್ಕಿಬಿದ್ದಿದ್ದಾರೆ. ಅವರ ಬುಡಕ್ಕೇ ನೀರು ಬರುತ್ತಿದೆ. ಹೀಗಾಗಿ ತನಿಖೆಯ ಹಾದಿ ತಪ್ಪಿಸುವ ಪ್ರಯತ್ನ ಕಾಂಗ್ರೆಸ್‌ನವರು ಮಾಡುತ್ತಿದ್ದಾರೆ ಎಂದು ಗೃಹ ಸಚಿವರು ತಿಳಿಸಿದರು.

ಹಗರಣವನ್ನು ಬೇರು ಮಟ್ಟದಿಂದ ತನಿಖೆ ನಡೆಯುತ್ತಿದೆ. ವಿಶೇಷ ಅಭಿಯೋಜಕರನ್ನು ನೇಮಿಸಿದ್ದು ತನಿಖೆ ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದೆ ಎಂದು ಸಚಿವರು ಪುನರುಚ್ಚರಿಸಿದರು..

## ನ್ಯಾಯಾಲಯದ ಆದೇಶ ಹಿನ್ನಲೆ: ಬಿಗಿ ಭದ್ರತೆ ನಡುವೆ ವಾರಣಾಸಿ ಜ್ಞಾನವಾಪಿ ಮಸೀದಿ ಸಮೀಕ್ಷೆ


**ವಾರಣಾಸಿ, ಮೇ 6–** ನ್ಯಾಯಾಲಯದ ಆದೇಶದಂತೆ ಭಾರತೀಯ ಪುರಾತತ್ವ ಸರ್ವೇಕ್ಷಣಾ ಮಂಡಳಿ ಪ್ರಸಿದ್ಧಯಾತ್ರಾ ಸ್ಥಳವಾಗಿರುವ ವಾರಣಾಸಿಯ ಕಾಶಿ ವಿಶ್ವನಾಥ್-ಜ್ಞಾನವಾಪಿ ಸಂಕೀರ್ಣದಲ್ಲಿರುವ ಮಾ ಶೃಂಗಾರ್ ಗೌರಿ ಸ್ಥಳದ ವೀಡಿಯೊಗ್ರಫಿ ಸಮೀಕ್ಷೆ ಮತ್ತು ಪರಿಶೀಲನೆಗೆ ಮುಂದಾಗಿದೆ.

ಮಸೀದಿ ವ್ಯಾಪ್ತಿಯಲ್ಲಿ ಈ ಸರ್ವೇ ಕಾರ್ಯಕ್ಕೆ ವಿರೋಧಿಸಿ ನೂರಾರು ಮುಸ್ಲಿಮರು ಪ್ರತಿಭಟನೆ ನಡೆಸಿದ್ದು, ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಯಿತು. ಜ್ಞಾನವಾಪಿ ಮಸೀದಿಯ ಆಡಳಿತ ಸಮಿತಿಯು ಸ್ಥಳೀಯ ನ್ಯಾಯಾಲಯದ ತೀರ್ಪನ್ನು ವಿರೋಧಿಸುವುದಾಗಿ ಈಗಾಗಲೇ ಎಚ್ಚರಿಸಿತ್ತು. ಈ ಹಿನ್ನಲೆ ಕೆಲ ಕಾಲ ಪ್ರತಿಭಟನೆ ವಾತಾವರಣ ನಿರ್ಮಾಣವಾಯಿತು. ಮುನ್ನೆಚ್ಚರಿಕೆಯಾಗಿ ಬಿಗಿ ಭದ್ರತೆಯನ್ನು ಮಸೀದಿ ಸುತ್ತ ನೇಮಿಸಲಾಗಿದೆ.

ಇಂತಹ ಆತಂಕದ ಪರಿಸ್ಥಿತಿಯ ನಡುವೆ ಮಸೀದಿ ಸುತ್ತುಮತ್ತು ಭಾರೀ ಪೊಲೀಸ್ ಬಂದೋಬಸ್ತ್ ನಡೆಸಿದ್ದು, ನ್ಯಾಯಾಲಯದಿಂದ ನೇಮಕವಾದ ತಂಡ ಮಧ್ಯಾಹ್ನ ಸಮೀಕ್ಷೆ ಕೆಲಸವನ್ನು ಆರಂಭಿಸಿದೆ. ಈ ನಡುವೆ ಜಿಲ್ಲಾಡಳಿತ ಇಂತೇಜಾಮಿಯಾ ಸಮಿತಿ, ಅಧರ್ಮಿಗಳಿಗೆ ಮಸೀದಿಯನ್ನು ಪ್ರವೇಶಿಸಲು ಅನುಮತಿಸುವುದಿಲ್ಲ ಎಂದು ಘೋಷಿಸಿತು. ಈ ನಡುವೆ ತಾವು ಈ ಸಮೀಕ್ಷೆಗೆ ಶಾಂತಿ ರೀತಿಯಲ್ಲೇ ವಿರೋಧಿಸುತ್ತೇವೆ ಎಂದು ತಿಳಿಸಿದೆ.

ಜ್ಞಾನವಾಪಿ ಮಸೀದಿಯು ಪ್ರಸಿದ್ಧ ಕಾಶಿ ವಿಶ್ವನಾಥ ದೇವಾಲಯದೊಂದಿಗೆ ಹೊಂದಿಕೊಂಡಿದೆ. ಜ್ಞಾನವಾಪಿ ಮಸೀದಿಯನ್ನು ಕಾಶಿ ವಿಶ್ವನಾಥ ದೇವಾಲಯದ ಭಾಗ ಕೆಡವಿ ನಿರ್ಮಿಸಲಾಗಿದೆ. ಹೀಗಾಗಿ ಈ ಭೂಮಿಯನ್ನು ಮಂದಿರಕ್ಕೆ ಮರಳಿ ನೀಡಬೇಕು ಎಂದು ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿದ್ದರು.

ಈ ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಲಯ ಬಳಿಕ ಭಾರತೀಯ ಪುರಾತತ್ವ ಇಲಾಖೆಗೆ ಸಮೀಕ್ಷೆಗೆ ಅವಕಾಶ ನೀಡಲಾಗಿದೆ.




ದೆಹಲಿ ಮೂಲದ ರಾಖಿ ಸಿಂಗ್, ಲಕ್ಷ್ಮಿ ದೇವಿ, ಸೀತಾ ಸಾಹು ಮತ್ತು ಇತರರು 2021 ರ ಏಪ್ರಿಲ್ 18 ರಂದು ಜ್ಞಾನವಾಪಿಯ ಹೊರಗೋಡೆಯಲ್ಲಿರುವ ಶೃಂಗಾರ್ ಗೌರಿ, ಗಣೇಶ, ಹನುಮಾನ್ ಮತ್ತು ನಂದಿಯಲ್ಲಿ ದೈನಂದಿನ ಪೂಜೆ ಮತ್ತು ಆಚರಣೆಗಳಿಗೆ ಅನುಮತಿ ನೀಡುವಂತೆ ಕೋರಿ ಪ್ರಕರಣವನ್ನು ದಾಖಲಿಸಿದ್ದಾರೆ. ಮಸೀದಿ. ವಿಗ್ರಹಗಳಿಗೆ ಯಾವುದೇ ಹಾನಿ ಮಾಡದಂತೆ ವಿರೋಧಿಗಳು ತಡೆಯಲು ಪ್ರಯತ್ನಿಸಿದರು.

ಜ್ಞಾನವಾಪಿ ಮಸೀದಿಯ ಎರಡೂ ನೆಲಮಾಳಿಗೆಗಳನ್ನು ಸಹ ಸಮೀಕ್ಷೆ ನಡೆಸಲಾಗುವುದು, ಅದರಲ್ಲಿ ಒಂದು ನೆಲಮಾಳಿಗೆಯ ಕೀ ಆಡಳಿತದ ಬಳಿ ಮತ್ತು ಇನ್ನೊಂದರ ಕೀ ಮಸೀದಿಯ ನಿರ್ವಹಣೆಯಲ್ಲಿದೆ. ಸಂಪೂರ್ಣ ಸಮೀಕ್ಷೆಗೆ ಮೂರ್ನಾಲ್ಕು ದಿನ ಬೇಕಾಗುವ ನಿರೀಕ್ಷೆ ಇದೆ. ಈ ಸಮಯದಲ್ಲಿ ಸಂಪೂರ್ಣ ಪ್ರಕ್ರಿಯೆಯನ್ನು ವೀಡಿಯೊ ಗ್ರಾಫ್ ಮತ್ತು ಛಾಯಾಚಿತ್ರ ಕೂಡ ಮಾಡಲಾಗುತ್ತದೆ.

ಇನ್ನು ಸಮೀಕ್ಷೆ ಆರಂಭವಾದ ಹಿನ್ನಲೆ ಮಸೀದಿ ಸುತ್ತಮುತ್ತ ಬಿಗಿ ಭದ್ರತೆ ಜೊತೆಗೆ ಭದ್ರತಾ ಸಮಸ್ಯೆ ಹಿನ್ನಲೆ ಜ್ಞಾನವಾಪಿ ಸಂಕೀರ್ಣವನ್ನು ಹೋರ್ಡಿಂಗ್ಗಳಿಂದ ಮುಚ್ಚಲಾಗಿದೆ. ಇನ್ನು ಇಂದು ಶುಕ್ರವಾರವಾದ್ದರಿಂದ ಮಸೀದಿಯಲ್ಲಿ ನಮಾಜ್ಗಾಗಿ ಕೂಡುತ್ತಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನಿಯಮಗಳ ಪ್ರಕಾರ, ಸುಮಾರು 100 ನಮಾಜಿಗಳಿಗೆ ಮಾತ್ರ ಅವಕಾಶವಿದೆ. ಶುಕ್ರವಾರ ಮಧ್ಯಾಹ್ನ ಒಮ್ಮೆ ಮಾತ್ರ 'ನಮಾಜ್' ನಡೆಯುತ್ತದೆ.

ಮಸೀದಿಯಲ್ಲಿ ಅಡ್ವೊಕೇಟ್ ಕಮಿಷನರ್ ಅಜಯ್ ಕುಮಾರ್ ನೇತೃತ್ವದ ತಂಡ ಪರಿಶೀಲನೆ ನಡೆಸಲಿದ್ದಾರೆ. ಈ ವೇಳೆ ಅರ್ಜಿದಾರ ರಾಖಿ ಸಿಂಗ್ ಮತ್ತು ಇತರ ನಾಲ್ವರು ಸೇರಿದಂತೆ ವಕೀಲರಾಗಿದ್ದಾರೆ. ಎರಡೂ ಪಕ್ಷಗಳ ಸಮ್ಮುಖದಲ್ಲಿ ಶೃಂಗಾರ್ ಗೌರಿ ಸ್ಥಳಕ್ಕೆ ಭೇಟಿ ನೀಡುವಂತೆ ವಕೀಲ ಕಮಿಷನರ್ಗೆ ನ್ಯಾಯಾಲಯ ಸೂಚಿಸಿತ್ತು. ತಂಡವು ಸ್ಥಿತಿಗತಿಯ ವರದಿಯನ್ನು ಸಿದ್ಧಪಡಿಸಿ, ಮುಂದಿನ ವಿಚಾರಣೆಯ ದಿನವಾದ ಮೇ 10 ರಂದು ನ್ಯಾಯಾಲಯದ ಮುಂದೆ ಸಲ್ಲಿಸಲು ಸೂಚಿಸಲಾಗಿದೆ.

## ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮಗಳು



**7ನೇ ಮೇ, 2022 ಶನಿವಾರ**

| | |
|---|---|
| ಬೆಳಿಗ್ಗೆ 10.30 | ಬಸವ ವೇದಿಕೆ, ಬೆಂಗಳೂರು, ಇವರ ವತಿಯಿಂದ ಆಯೋಜಿಸುರವ ಬಸವ ಜಯಂತಿ ಸಮಾರಂಭ ಹಾಗೂ 'ಬಸವಶ್ರೀ ಪ್ರಶಸ್ತಿ ಮತ್ತು ವಚನ ಸಾಹಿತ್ಯ ಶ್ರೀ ಪ್ರಶಸ್ತಿ ಪ್ರದಾನ ರಜತ ಮಹೋತ್ಸವ ಸಂಭ್ರಮ-2022 ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಂಗಳೂರು. |
| ಮಧ್ಯಾಹ್ನ12.15 | ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು, ಇವರ ವತಿಯಿಂದ ಆಯೋಜಿಸಿರುವ ಸಂಚಾರ ಪಶು ಚಿಕಿತ್ಸಾ ಘಟಕಗಳ ಲೋಕಾರ್ಪಣೆ (ಮಾನ್ಯ ಶ್ರೀ ಪರ್ಷೋತ್ತಮ ರೂಪಾಲ, ಮಾನ್ಯ ಮೀನುಗಾರಿಕೆ, ಪಶು ಸಂಗೋಪನೆ ಹಾಗೂ ಹೈನುಗಾರಿಕೆ ಸಚಿವರು, ಬಾರತ ಸರ್ಕಾರ ಇವರು ಬಾಗವಹಿಸಲಿರುವರು). ಸ್ಥಳ: ವಿಧಾನ ಸೌಧದ ಮುಖ್ಯದ್ವಾರದ ಮುಂಭಾಗ |
| ಮಧ್ಯಾಹ್ನ12.30 | ಪಶು ಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಬೆಂಗಳೂರು, ಇವರ ವತಿಯಿಂದ ಆಯೋಜಿಸಿರುವ ಇಲಾಖೆಯ ಪ್ರಗತಿಯ ಕುರಿತು ಕಿರುಚಿತ್ರ ಪ್ರದರ್ಶನ, ಫಲಾನುಭವಿಗಳಿಗೆ ವಿವಿಧ ಸವಲತ್ತುಗಳ ವಿತರಣೆ ಹಾಗೂ ಸಾರ್ವಜನಿಕ ಕಾರ್ಯಕ್ರಮ (ಮಾನ್ಯ ಶ್ರೀ ಪರ್ಷೋತ್ತಮ ರೂಪಾಲ, ಮಾನ್ಯ ಮೀನುಗಾರಿಕೆ, ಪಶು ಸಂಗೋಪನೆ ಹಾಗೂ ಹೈನುಗಾರಿಕೆ ಸಚಿವರು, ಬಾರತ ಸರ್ಕಾರ ಇವರು ಬಾಗವಹಿಸಲಿರುವರು). ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನ ಸೌಧ |
| ಸಂಜೆ 4.00 | ಕಾಯ್ದಿರಿಸಲಾಗಿದೆ |
| ಸಂಜೆ 6.30 | Signing of MoU between Government of karnataka and Toyota Group Comanies Venue: ITC Gardenia, Bangalore. |

## ನಿತ್ಯ ಪಂಚಾಂಗ 7-5-2022 ಶನಿವಾರ



**ಶ್ರೀ ಶುಭಕೃತ್ ನಾಮ ಸಂವತ್ಸರ, ಉತ್ತರಾಯಣ ಶಿಶಿರ-ವಸಂತ ಋತು**

ವೈಶಾಖ ಶುದ್ಧ, ಷಷ್ಠಿ, ಪುನರ್ವಸು ನಕ್ಷತ್ರ, ರವೀಂದ್ರನಾಥ ಠಾಗೋರ್ ಪುಣ್ಯದಿನ, ಸಾಲಿಗ್ರಾಮ ಯೋಗನರಸಿಂಹ ರಥ, ಯರಗೋಳ ಪುಣ್ಯದಿನ.

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | 4.30 – 6.00 | 12.00 – 1.30 | 3.00 – 4.30 |
| ಸೋಮ | 7.30 – 9.00 | 10.30 – 12.00 | 1.30 – 3.00 |
| ಮಂಗಳ | 3.00 – 4.30 | 9.00 – 10.30 | 12.00 – 1.30 |
| ಬುಧ | 12.00 – 1.30 | 7.30 – 9.00 | 10.30 – 12.00 |
| ಗುರು | 1.30 – 3.00 | 6.00 – 7.30 | 9.00 – 10.30 |
| ಶುಕ್ರ | 10.30 – 12.00 | 3.00 – 4.30 | 7.30 – 9.00 |
| ಶನಿ | 9.00 – 10.30 | 1.30 – 3.00 | 6.00 – 7.30 |

# ಸಿಎಂ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ತೋಟಗಾರಿಕೆ ಇಲಾಖೆ ಸಭೆ



ಬೆಂಗಳೂರು, ಮೇ 06: 2022- 23ನೇ ಆಯವ್ಯಯದಲ್ಲಿ ಘೋಷಣೆಯಾಗಿರುವ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ಇಂದು ತೋಟಗಾರಿಕೆ ಇಲಾಖೆ ಸಭೆ ಜರುಗಿತು. ಸಭೆಯಲ್ಲಿ ತೋಟಗಾರಿಕೆ ಸಚಿವ ಎನ್.ಮುನಿರತ್ನ, ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಅಭಿವೃದ್ಧಿ ಆಯುಕ್ತೆ ಹಾಗೂ ಅಪರ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಆರ್ಥಿಕ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಐ.ಎಸ್. ಎನ್. ಪ್ರಸಾದ್, ಯೋಜನಾ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಡಾ: ಶಾಲಿನಿ ರಜನೀಶ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ತೋಟಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದರ್ ಕುಮಾರ್ ಕಟಾರಿಯಾ, ನಿರ್ದೇಶಕ ಕೆ.ನಾಗೇಂದ್ರ ಪ್ರಸಾದ್, ತೋಟಗಾರಿಕೆ ಇಲಾಖೆ ಹಾಗೂ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.



ಮಂಡ್ಯದ ನಗರಸಭೆಯ ಹಳೆಯ ತರಕಾರಿ ಮಾರುಕಟ್ಟೆ ಪ್ರಾಂಗಣದಲ್ಲಿ ಸುಸಜ್ಜಿತವಾದ ಹೊಸ ತರಕಾರಿ ಮಾರುಕಟ್ಟೆ ನಿರ್ಮಾಣ ಕಾಮಗಾರಿಯ ಭೂಮಿ ಪೂಜೆಯನ್ನು ಶಾಸಕ ಎಂ ಶ್ರೀನಿವಾಸ್ ನೆರವೇರಿಸಿದರು. ಈ ಸಂದರ್ಭದಲ್ಲಿ ನಗರ ಸಭಾ ಅಧ್ಯಕ್ಷ ಎಚ್. ಎಸ್. ಮಂಜು, ಉಪಧ್ಯಕ್ಷೆ ಇಶ್ರತ್ ಫಾತಿಮ್,ಆಯುಕ್ತ ಎಸ್. ಲೋಕೇಶ್ ಹಾಗೂ ಎಲ್ಲಾ ವಾರ್ಡ್ ನ ನಗರಸಭಾ ಸದಸ್ಯರು ಹಾಜರಿದ್ದರು.

# ಕರಾರಸಾ ನಿಗಮದ ಕೇಂದ್ರ ಕಚೇರಿಗೆ ರಾಜ್ಯ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಶಿವಣ್ಣ ಭೇಟಿ

**ಬೆಂಗಳೂರು, ಮೇ.6:** ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ 16 ವಿಭಾಗಗಳಿಂದ ಒಟ್ಟು 169 ಬಸ್ಸು ನಿಲ್ದಾಣಗಳಿದ್ದು, 299 ಕಾರ್ಮಿಕ ಸ್ವಚ್ಛತಾ ಕೆಲಸಗಾರರು/ ಸಫಾಯಿ ಕರ್ಮಚಾರಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಕೆಲವೊಂದು ಬಸ್ ನಿಲ್ದಾಣಗಳಲ್ಲಿ ಟೆಂಡರ್ ಮೂಲಕ ಆಯ್ಕೆಯಾಗಿರುವ ಗುತ್ತಿಗೆದಾರರು ಸಫಾಯಿ ಕರ್ಮಚಾರಿಗಳಿಗೆ/ ಸ್ವಚ್ಛತಾ ಕೆಲಸಗಾರರಿಗೆ ಸಮವಸ್ತ್ರ, ಕನಿಷ್ಠ ವೇತನ ನೀಡದೇ ಇರುವುದು ಹಾಗೂ ಆರೋಗ್ಯ ತಪಾಸಣೆ ಮಾಡದಿರುವ ಕುರಿತು ಮಾನ್ಯ ಆಯೋಗದ ಗಮನಕ್ಕೆ ಬಂದಿರುವುದಾಗಿ ಮಾನ್ಯ ಅಧ್ಯಕ್ಷರು ತಿಳಿಸಿದರು.

ಶ್ರೀ. ವಿ.ಅನ್ಬುಕುಮಾರ್ ಭಾಆಸೇ, ವ್ಯವಸ್ಥಾಪಕ ನಿರ್ದೇಶಕರು, ಕೆಎಸ್ ಆರ್‌ಟಿಸಿರವರು ಮಾನ್ಯ ಅಧ್ಯಕ್ಷರಿಗೆ ವಿವರಿಸುತ್ತಾ, ನಿಗಮವು ನೇರವಾಗಿ ಸಫಾಯಿ ಕರ್ಮಚಾರಿ ಗಳನ್ನು/ ಸ್ವಚ್ಛತಾ ಕೆಲಸಗಾರರು/ ಕಾರ್ಮಿಕರನ್ನು ನೇಮಿಸಿಕೊಂಡಿರುವುದಿಲ್ಲ. ಆದರೆ, ಪ್ರಧಾನ ಉದ್ಯೋಗದಾತ ಮತ್ತು ಸಾಮಾಜಿಕ ಹೊಣೆಗಾರಿಕೆಯಡಿ ನಿಗಮವು ಒಟ್ಟು 299 ಸಫಾಯಿ ಕರ್ಮಚಾರಿಗಳು/ ಸ್ವಚ್ಛತಾ ಕೆಲಸ ಗಾರರು/ ಕಾರ್ಮಿಕರಿಗೆ 02 ಜೊತೆ ಸಮವಸ್ತ್ರ ವನ್ನು ನಿಗಮದ ವತಿಯಿಂದ ನೀಡುವುದಾಗಿ ತಿಳಿಸಿದರು. ಹಾಗೂ 03 ತಿಂಗಳಿಗೊಮ್ಮೆ ಸದರಿ



ಕಾಮಿಕರುಗಳಿಗೆ ಆರೋಗ್ಯ ತಪಾಸಣೆಗೆ ವ್ಯವಸ್ಥೆ ಮಾಡುವ ಕಾರ್ಯಕ್ಕೆ ಆದೇಶಿಸಿದರು.ಮುಂದುವರೆದು, ನಿಗಮದ ವಿಭಾಗ ಮಟ್ಟದ ಕಾರ್ಮಿಕ ಕಲ್ಯಾಣಾಧಿಕಾರಿಗಳು ತಮ್ಮ ವಿಭಾಗದ ವ್ಯಾಪ್ತಿಯ ಬಸ್ಸು ನಿಲ್ದಾಣಗಳಿಗೆ ಆಗ್ಗಿಂದಾಗ್ಗೆ ಭೇಟಿ ನೀಡಿ ಈ ಬಗ್ಗೆ ಪರಿಶೀಲನೆ ನಡೆಸಿ ವರದಿ ಸಲ್ಲಿಸಲು ಸೂಚಿಸಿದರು.

ಗುತ್ತಿಗೆದಾರರು ಕಾಲಕಾಲಕ್ಕೆ ಇ.ಎಸ್.ಐ, ಪಿ.ಎಫ್ ಪಾವತಿಸಿರುವ ಬಗ್ಗೆ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಅಂದರೆ ಪಿ.ಎಫ್/ಇ. ಎಸ್.ಐ ಕಛೇರಿ ಅಧಿಕಾರಿಗಳು ಗಮನವಹಿಸಿ ಪರಾಮರ್ಶೆ ನಡೆಸುವುದು ಮತ್ತು ಎಲ್ಲಾ ಸಂಸ್ಥೆಗಳ ಅಧಿಕಾರಿಗಳು ಒಟ್ಟುಗೂಡಿ ಕಾರ್ಯ ನಿರ್ವಹಿಸಿದ್ದಲ್ಲಿ ಸಫಾಯಿ ಕರ್ಮಚಾರಿಗಳು/ ಸ್ವಚ್ಛತಾ ಕೆಲಸಗಾರರ ಹಕ್ಕುಗಳನ್ನು ರಕ್ಷಣೆ ಮಾಡಲು ಸಾಧ್ಯವಿರುವುದಾಗಿ ತಿಳಿಸಿದಾಗ, ಆಯೋಗದ ಮಾನ್ಯ ಅಧ್ಯಕ್ಷರು ಸಹಮತ ವ್ಯಕ್ತಪಡಿಸಿದರು.

ಮಾನ್ಯ ಆಯೋಗದ ಅಧ್ಯಕ್ಷರು,ಮುಂದುವರೆದು ಮಾತನಾಡುತ್ತಾ, ಎರಡು ತಿಂಗಳ ಅವಧಿಯ ನಂತರ ಮತ್ತೊಮ್ಮೆ ಪರಿಶೀಲನೆ ನಡೆಸುವುದಾಗಿ ತಿಳಿಸಿದರು. ವ್ಯವಸ್ಥಾಪಕ ನಿರ್ದೇಶಕರು ಆಯೋಗದ ಸಲಹೆ ಸೂಚನೆಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಂಡು ಮತ್ತಷ್ಟು ಸುಧಾರಣೆ ತರುವುದಾಗಿ ಹಾಗೂ ಗುತ್ತಿಗೆದಾರಿಗೂ ಸಹ ಈ ಬಗ್ಗೆ ಸೂಕ್ತ ಆದೇಶ ನೀಡುವುದಾಗಿ ತಿಳಿಸಿದರು.

ಈ ಸಭೆಯಲ್ಲಿ ಶ್ರೀಮತಿ ಚಂದ್ರಕಲಾ, ಆಯೋಗದ ಕಾರ್ಯದರ್ಶಿ, ಶ್ರೀ ರಮೇಶ ನಾಯ್ಕ್, ಹಿರಿಯ ಕಾರ್ಮಿಕ ನಿರೀಕ್ಷಕರು, ಕಾರ್ಮಿಕ ಇಲಾಖೆ, ಶ್ರೀ ಜಯಶಂಕರ್,

ಎನ್ಪೋರ್ಸ್‌ಮೆಂಟ್ ಅಧಿಕಾರಿ, ಇಕಈಔ, ಶ್ರೀ ರವಿ ನಾಯಕ್, ಸಹಾಯಕ ನಿರ್ದೇಶಕರು ESI ಹಾಗೂ ಕೆಎಸ್‌ಆರ್‌ಟಿಸಿ ಯ ಅಧಿಕಾರಿಗಳು ಉಪಸ್ಥಿತರಿದ್ದರು.

# ಶ್ರೀ ಶಂಕರಾಚಾರ್ಯರು ಭಾರತೀಯ ಸಮಾಜದ ಅದ್ವಿತಿಯ ಸುಧಾರಕರು: ರಮೇಶ ಕಳಸದ

**ವಿಜಯಪುರ ಮೇ6:** ಶ್ರೀ ಶಂಕರಾಚಾರ್ಯರು ಭಾರತೀಯ ಸಮಾಜದ ಓರ್ವ ಅದ್ವಿತೀಯ ಸಮಾಜ ಸುಧಾರಕರಾಗಿದ್ದು, ಸಮಾಜಕ್ಕೆ ಇವರ ಕೊಡುಗೆ ಸದಾ ಸ್ಮರಣೀಯವಾಗಿದೆ ಎಂದು ಅಪರ ಜಿಲ್ಲಾಧಿಕಾರಿಗಳಾದ ರಮೇಶ ಕಳಸದ ಅವರು ಹೇಳಿದರು.

ನಗರದ ಕಂದಗಲ್ ಶ್ರೀ ಹನುಮಂತರಾಯ ರಂಗಮಂದಿರದಲ್ಲಿ ಮೇ 6ರಂದು ಜಿಲ್ಲಾಡಳಿತವತಿಯಿಂದ ಆಯೋಜಿಸಿದ್ದ ಶ್ರೀ ಶಂಕರಾಚಾರ್ಯರ ಜಯಂತಿಯ ವೇದಿಕೆಯ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅದ್ವೈತ ಸಿದ್ಧಾಂತದ



ಪ್ರತಿಪಾದಕರಾಗಿದ್ದ ಶಂಕರಾಚಾರ್ಯರರು ನೀಡಿದ ಸಂದೇಶಗಳನ್ನು ಜನತೆಯ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿದರು.

ಕಾರ್ಯಕ್ರಮದಲ್ಲಿ ಬಿಡಿಎ ಅಧ್ಯಕ್ಷರಾದ ಶ್ರೀ ಹರಿ ಗೊಳಸಂಗಿ, ಡಿವೈಎಸ್ಪಿ ಲಕ್ಷ್ಮಿ ?ಮ ನಾರಾಯಣ, ಸಮಾಜದ ಅಧ್ಯಕ್ಷರಾದ ಮಹೇಶ ಗಂಗಾಧರ ದೇಶಪಾಂಡೆ, ಜಿಪಂ ಮುಖ್ಯ ಯೋಜನಾಧಿಕಾರಿ ನಿಂಗಪ್ಪ ಗೋಠೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ನಾಗರಾಜ ಬಿ ಸೇರಿದಂತೆ ಇತರರು ಇದ್ದರು. ವಿಜಯಪುರ ಬ್ರಹ್ಮಶ್ರೀ ಅದ್ವೈತ ಚೈತನ್ಯ (ಪುನೀತ್ ಮಹಾರಾಜ) ಅವರು ಇದೆ ಸಂದರ್ಭದಲ್ಲಿ ವಿಶೇಷ ಉಪನ್ಯಾಸ ನೀಡಿದರು. ಮಮದಾಪುರ ಅವರು ನಿರೂಪಿಸಿದರು.

**ಭಾವಚಿತ್ರದ ಮೆರವಣಿಗೆ:** ಇದಕ್ಕೂ ಮೊದಲು ನಗರದ ಪ್ರಮುಖ ರಸ್ತೆಗಳಲ್ಲಿ ಅಚ್ಚುಕಟ್ಟಾಗಿ ನಡೆದ ಶ್ರೀ ಶಂಕರಾಚಾರ್ಯರ ಭಾವಚಿತ್ರದ ಮೆರವಣಿಗೆಗೆ ನಗರದ ಲಕ್ಷ್ಮಿದೇವಸ್ಥಾನದ ಮುಂಭಾಗದಲ್ಲಿ ಅಪರ ಜಿಲ್ಲಾಧಿಕಾರಿಗಳು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ನ್ಯಾಯವಾದಿ ವಿದ್ಯಾವತಿ ಅಂಕಲಗಿ, ಗಿರೀಶ ಕುಲಕರ್ಣಿ ಸೇರಿದಂತೆ ಇನ್ನೀತರ ಮುಖಂಡರು, ಹಿರಿಯರು, ಸಮಾಜದ ಬಾಂಧವರು ಉಪಸ್ಥಿತರಿದ್ದರು.

# ಬೆಂಗಳೂರು ವಿವಿ ಮತ್ತು ಸ್ಪೇನ್ ದೇಶದ ಕೌನ್ಸಲ್ ಜನರಲ್‌ರೊಂದಿಗೆ ಶೈಕ್ಷಣಿಕ ಒಡಂಬಡಿಕೆ ಒಪ್ಪಂದ



**ಬೆಂಗಳೂರು, ಮೇ.6:** ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ಮತ್ತು ಸ್ಪೇನ್ ದೇಶದ ಹಾನರರಿ ಕೌನ್ಸಲ್ ಜನರಲ್ ಶ್ರೀಮತಿ. ಸುರಭಿ ಶರ್ಮ ಇವರ ಮಧ್ಯ ದಿನಾಂಕ: 05.05.2022 ರಂದು ಶೈಕ್ಷಣಿಕ ಸಹಕಾರದ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಲಾಯಿತು. ಈ ಸಂದರ್ಭದಲ್ಲಿ ಪ್ರೊ. ಲಿಂಗರಾಜ ಗಾಂಧಿ ಅವರು ಮಾತನಾಡುತ್ತಾ ಇದು ಮಹತ್ವದ ಸಂದರ್ಭ ಆಗಿದ್ದು ಈ ಒಡಂಬಡಿಕೆಯಿಂದ ರಾಷ್ಟ್ರೀಯ ಶಿಕ್ಷಣ ನೀತಿ 2020ರ ಆಶಯಗಳಿಗೆ ಸ್ಪಂಧನೆದೊರಕ್ಕಿದ್ದು ಶೈಕ್ಷಣಿಕ ರಂಗದಲ್ಲಿ ಒಂದು ವಿಶಿಷ್ಟವಾದ ಪ್ರಯತ್ನವಾಗಿದೆ ಎಂದು ತಿಳಿಸಿದರು. ಇದು ಎರಡು ದೇಶಗಳ ಸಂಸ್ಕೃತಿ, ಶೈಕ್ಷಣಿಕ ಅಭಿವೃದ್ಧಿ, ವಾಣಿಜ್ಯ ಮತ್ತು ಉದ್ಯೋಗ ರಂಗಗಳಲ್ಲಿ ಹೆಚ್ಚಿನ ಪರಿಣಾಮ ಬೀರಲಿದೆ ಎಂದು ತಿಳಿಸಿದರು. ಪ್ರಸ್ತುತ ಒಡಂಬಡಿಕೆಯಿಂದ ಸ್ಪೇನ್ ದೇಶದ ಒಬ್ಬರು ಭಾಷಾ ಶಿಕ್ಷಕರು ವಿಶ್ವವಿದ್ಯಾನಿಲಯದಲ್ಲಿ ನಿಗದಿತ ಅವಧಿಗೆ ವಿದ್ಯಾರ್ಥಿಗಳಿಗೆ ಸ್ಪ್ಯಾನಿಷ್ ಭಾಷೆ ಬೋಧಿಸುವಲ್ಲಿ ಸಹಕಾರಿಯಾಗಲಿರುವರು ಎಂದು ಹೇಳಿದರು.. ಸುರಭಿ ಶರ್ಮರವರು ಮಾತನಾಡಿ ಬೆಂಗಳೂರು ನಗರದಲ್ಲಿ ಸ್ಪೇನ್ ದೇಶದ ಕಂಪನಿಗಳು ಸಾಕಷ್ಟು ಸಂಖ್ಯೆಯಲ್ಲಿದ್ದು ಅಂತಹ ಕಂಪನಿಗಳಲ್ಲಿ ವಿದ್ಯಾರ್ಥಿಗಳಿಗೆ ಉದ್ಯೋಗ ದೊರಕುವಲ್ಲಿ ಸಹಾಯಕವಾಗಲಿದೆ ಎಂದು ಹೇಳಿದರು. ಶ್ರೀ. ಸಿ.ಎನ್. ಶ್ರೀಧರ, ಕೆ.ಎ.ಎಸ್., ಕುಲಸಚಿವರು (ಆಡಳಿತ) ಮತ್ತು ಪ್ರೊ. ವಿ. ಲೋಕೇಶಾ ಕುಲಸಚಿವರು (ಮೌಲ್ಯಮಾಪನ) ಮತ್ತು ಜಾಗತಿಕ ಭಾಷೆಗಳ ಅಧ್ಯಕ್ಷೆ ಪ್ರೊ. ಜ್ಯೋತಿ ವೆಂಕಟೇಶ್ ರವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಬೆಂಗಳೂರು ವಿಶ್ವವಿದ್ಯಾಲಯದ ನೂತನ ವಿತ್ತಾಧಿಕಾರಿಯವರಾಗಿ ಶ್ರೀ ಮಂಜುನಾಥ ಹೆಗಡೆ, ಅವರು ಪ್ರಭಾರ ವಿತ್ತಾಕಾರಿಯವರಾದ ಶ್ರೀಮತಿ ಆರ್. ಜಯಲಕ್ಷ್ಮಿ ಅವರಿಂದ ಅಧಿಕಾರ ಸ್ವೀಕರಿಸಿದರು.



ಕರ್ನಾಟಕ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಸಂಘ ಆರೋಗ್ಯಕ್ಕೆ ಬೆಂಗಳೂರು ಇವರ ವತಿಯಿಂದ ಇತ್ತೀಚೆಗೆ ಸರ್ಕಾರಿ ಸೇವೆಯಿಂದ ವಯೋ ನಿವೃತ್ತಿ ಹೊಂದಿದ ಐ ಪಿ ಶಾಂತರಾಜ ಇವರಿಗೆ ಬೆಂಗಳೂರಿನ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನ ಕಬ್ಬನ್ ಪಾರ್ಕ್ ಬೆಂಗಳೂರು ಇಲ್ಲಿ ಅಭಿನಂದಿಸಲಾಯಿತು

# ಶಿಕ್ಷಕರ ವಿವಿಧ ಬೇಡಿಕೆಗಳ ಶೀಘ್ರ ಅನುಷ್ಠಾನಕ್ಕೆ ಆಗ್ರಹಿಸಿ ರಾಜ್ಯಾಧ್ಯಕ್ಷ ಅಶೋಕ್ ಸಜ್ಜನ್ ಮನವಿ



**ದಾರವಾಡ, ಮೇ6:** ಕರ್ನಾಟಕ ಸರಕಾರಿ ಗ್ರಾಮೀಣ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದಿಂದ, ರಾಜ್ಯಾದ್ಯಕ್ಷರಾದ ಅಶೋಕ ಸಜ್ಜನ ಅವರ ನೇತೃತ್ವದಲ್ಲಿ, ರಾಯಚೂರು, ಬೀದರ ಜಿಲ್ಲೆಯ ಉಸ್ತುವಾರಿ ಸಚಿವರಾದ ಶಂಕರ ಪಾಟೀಲ ಮುನೇನಕೊಪ್ಪ ಅವರ ಮೂಲಕ, ಶಿಕ್ಷಕರ ವಿವಿಧ ಬೇಡಿಕೆಗಳು ಶೀಘ್ರವಾಗಿ ಏಳನೇ ವೇತನ ಆಯೋಗ ಸಮಿತಿಯನ್ನು ರಚನೆ ಮಾಡಬೇಕು, NPS ತೆಗೆದು ಹಾಕಿ ಹಳೆ ಪಿಂಚಣಿ ಯೋಜನೆ ಜಾರಿಗೆ ತರಬೇಕು, ಗ್ರಾಮೀಣ ಪರಿಹಾರ ಭತ್ಯೆಯನ್ನು ರಾಜ್ಯದ ಸಮಸ್ತ ಗ್ರಾಮೀಣ ಶಿಕ್ಷಕರಿಗೆ ಮಂಜೂರು ಮಾಡಬೇಕು, ಶಿಕ್ಷಕರು ತಮ್ಮ ತಮ್ಮ ಜಿಲ್ಲೆಯಿಂದ ನಾಲ್ಕುನೂರು ಐನೂರು ಕಿ.ಮಿ. ದೂರವಿರುವ ಶಿಕ್ಷಕರಿಗೆ ಅವರಿಗೆ ಒಮ್ಮೆ ಅವರ ಜಿಲ್ಲೆಗೆ ಹೋಗಲು ವರ್ಗಾವಣೆಯಲ್ಲಿ ಅವಕಾಶ ಮಾಡಬೇಕು, ಶಿಕ್ಷಕರಿಗೆ ಬೇಸಿಗೆ ರಜೆಯನ್ನು ಜೂನ್ 1 ರ ವರೆಗೆ ಮುಂದುವರೆಸಲು ಮತ್ತು ಕಲಿಕಾ ಚೇತರಿಕೆ ತರಬೇತಿಯನ್ನು ಜೂನ್ ತಿಂಗಳಿನಲ್ಲಿ ಆರಂಭಿಸಲು, ಮಾನ್ಯ ಶಿಕ್ಷಣ ಸಚಿವರಾದ ಬಿ.ಸಿ. ನಾಗೇಶ ಅವರಿಗೆ ಮನವಿ ಸಲ್ಲಿಸಲಾಯಿತು, ಎಲ್.ಐ.ಲಕ್ಕಮ್ಮನವರ, ನವಲಗುಂದ ತಾಲೂಕಿನ ಅದ್ಯಕ್ಷರಾದ ಎಸ್.ಸಿ.ಹೊಳೆಯಣ್ಣವರ, ಸಲಹಾ ಸಮಿತಿಯ ಗೋವಿಂದ ಜುಜಾರೆ ಡಿಟಿ ಬಂಡಿವಡ್ಡರ್ ಇದ್ದರು.

# ಮಠಗಳು ಸಂಸ್ಕಾರ ಕೊಡುವ ಕೇಂದ್ರಗಳಾಗಲಿ: ರಂಭಾಪುರಿಶ್ರೀ



**ನೆಲಮಂಗಲ, ಮೇ6:** ಧರ್ಮ ಸಂಸ್ಕೃತಿ ಪರಂಪರೆಗಳ ಆದರ್ಶ ನಾಡು ಭಾರತ. ಮಠ ಧರ್ಮಗಳು ಬೇರೆಯಾದರೂ ಗುರಿ ಮಾತ್ರ ಒಂದೇ. ಮಠಗಳು ಜನಸಮುದಾಯಕ್ಕೆ ಸಂಸ್ಕಾರ ಕೊಡುವ ಕೇಂದ್ರಗಳಾಗಿ ಕಾರ್ಯ ಮಾಡಬೇಕೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಅವರು ನಗರದಲ್ಲಿ ನೂತನವಾಗಿ ನಿರ್ಮಾಣಗೊಂಡ ಶ್ರೀ ಮಹಂತಿನ ಮಠದ ಭವ್ಯ ಕಟ್ಟಡ ಉದ್ಘಾಟಿಸಿ ಚಂದ್ರಮೌಳೇಶ್ವರ ಗದ್ದುಗೆ ಪ್ರತಿಷ್ಠಾಪಿಸಿ ಆಶೀರ್ವಚನ ನೀಡುತ್ತಿದ್ದರು.

ಇಂದಿನ ಆಧುನಿಕ ಯುಗದಲ್ಲಿ ಸಂಸ್ಕಾರದ ಕೊರತೆಯಿಂದಾಗಿ ಮಾನಸಿಕ ಶಾಂತಿ ನೆಮ್ಮದಿಯಿಲ್ಲ. ವೈಚಾರಿಕತೆ ಬೆಳೆದಂತೆ ದೇವರು ಧರ್ಮದಲ್ಲಿ ಶ್ರದ್ಧೆ ಕಡಿಮೆಯಾಗುತ್ತಿದೆ. ಇಂಥ ಸಂದರ್ಭದಲ್ಲಿ ನಾಡಿನ ಧಾರ್ಮಿಕ ಕೇಂದ್ರಗಳು ಮತ್ತು ಮಠಗಳು ಸಮಾಜದ ಸ್ವಾಸ್ಥ್ಯ ಕಾಪಾಡಲು ಯೋಗ್ಯ ಸಂಸ್ಕಾರ ಮಾರ್ಗದರ್ಶನ ಕೊಡುವ ಅಗತ್ಯ ಬಹಳಷ್ಟಿದೆ. ವೀರಶೈವ ಧರ್ಮದಲ್ಲಿ ಜ್ಞಾನ ಕ್ರಿಯಾತ್ಮಕ ಚಿಂತನೆಯೊಂದಿಗೆ ಸಾಮಾಜಿಕ ಕಳಕಳಿಯನ್ನು ಹೊಂದಿದೆ. ಶ್ರೀ ಜಗದ್ಗುರು ರೇಣುಕಾಚಾರ್ಯರು ಶಕ್ತಿ ವಿಶಿಷ್ಟಾದ್ವೈತ ಸಿದ್ಧಾಂತದಲ್ಲಿ ಜೀವ ಶಿವನಾಗುವ, ಅಂಗ ಲಿಂಗವಾಗುವ, ಭವಿ ಭಕ್ತನಾಗುವ, ಪದಾರ್ಥ ಪ್ರಸಾದವನ್ನಾಗಿಸುವ ವಿಶಿಷ್ಠ ಅಂಶಗಳನ್ನು ಪ್ರತಿಪಾದಿಸಿದೆ. ಶ್ರೀ ಮಹಂತಿನ ಮಠ ರಂಭಾಪುರಿ ಪೀಠದ ಶಾಖಾ ಮಠವಾಗಿದ್ದು ಮಠದ ರೇಣುಕ ಶಿವಾಚಾರ್ಯರು ಮತ್ತು ಭಕ್ತರು ಸೇರಿ ಭವ್ಯ ಸುಂದರ ಕಟ್ಟಡ ನಿರ್ಮಾಣ ಮಾಡಿರುವುದು ತಮಗೆ ಹರುಷ ತಂದಿದೆ ಎಂದರು.

**– ಸಿ.ಎಚ್. ಬಾಳನಗೌಡ್ರ, ವಾರ್ತಾ ಸಂಯೋಜನಾಧಿಕಾರಿ, ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠ, ಬಾಳೆಹೊನ್ನೂರು**







Managing Editor : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ಯತ್ನಾಳ್ ವಿರುದ್ಧ ಎಸಿಬಿಗೆ ಕಾಂಗ್ರೆಸ್ ನಿಯೋಗ ದೂರು

**ಬೆಂಗಳೂರು, ಮೇ. 6–** 2,500 ಕೋಟಿ ನೀಡಿದರೆ ನನಗೂ ಸಿಎಂ ಸ್ಥಾನವನ್ನು ಕೊಡಿಸುತ್ತೇವೆ ಎಂದು ಹೇಳಿಕೆ ನೀಡಿದ್ದ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಅವರನ್ನು ಕೂಡಲೇ ತನಿಖೆಗೆ ಒಳಪಡಿಸಿ ಎಂದು ಕಾಂಗ್ರೆಸ್ ನಿಯೋಗ ಎಸಿಬಿಗೆ ದೂರು ನೀಡಿದೆ.

ಮನೋಹರ್ ನೇತೃತ್ವದ ನಿಯೋಗ ಎಸಿಬಿಗೆ ದೂರು ನೀಡಿದ್ದು, ಯತ್ನಾಳ್ ಅವರನ್ನು ಕೂಡಲೇ ತನಿಖೆಗೆ ಒಳಪಡಿಸಿ ಪ್ರಕರಣ ದಾಖಲಿಸಿಕೊಳ್ಳಬೇಕು ಎಂದು ಆಗ್ರಹಿಸಿದೆ.

ತಮ್ಮ ದೂರಿನಲ್ಲಿ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬಹಿರಂಗ ಸಭೆಯಲ್ಲಿ 2,500 ಕೋಟಿ ಹಣ ನೀಡಿದರೆ ಮುಖ್ಯಮಂತ್ರಿ ಸ್ಥಾನ ಹಾಗೂ ಮಂತ್ರಿ ಸ್ಥಾನ ದೊರಕುತ್ತದೆ. ಅದಕ್ಕೆ ದೆಹಲಿಯಿಂದ ಅನೇಕರು ನನ್ನನ್ನು ಸಂಪರ್ಕಿಸಿದ್ದಾರೆ ಎಂದು ಹೇಳಿ ಬಿಜೆಪಿಯ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರ ಹೆಸರನ್ನು ಪ್ರಸ್ತಾಪಿಸಿದ್ದಾರೆ. ಅತ್ಯಂತ ಗಂಭೀರವಾಗಿರುವ ಹೇಳಿಕೆಯನ್ನು ಪರಿಗಣಿಸಬೇಕು ಎಂದು ಮನವಿ ಮಾಡಿದೆ.



ಯತ್ನಾಳ್ ಅವರು ಅನೇಕ ಬಾರಿ ಭ್ರಷ್ಟಾಚಾರದ ಬಗ್ಗೆ ದಾಖಲೆಗಳಿವೆ ಎಂದು ಬಹಿರಂಗಪಡಿಸಿದ್ದಾರೆ. ಆದರೆ ಭ್ರಷ್ಟಾಚಾರ ನಿಗ್ರಹದಳ ಇದುವರೆವಗೂ ಸಹ ಸ್ವಯಂ ಪ್ರೇರಿತವಾಗಿ ದೂರನ್ನು ದಾಖಲಿಸಿ ಕೊಂಡಿರುವುದಿಲ್ಲ. ಈಗ ನಾವು ಖುದ್ದಾಗಿ ದೂರನ್ನು ನೀಡುತ್ತಿದ್ದೇವೆ.

ಇದರ ಬಗ್ಗೆ ಕೂಡಲೇ ಪ್ರಕರಣ ದಾಖಲಿಸಿಕೊಂಡು ಭ್ರಷ್ಟಾಚಾರ ತಡೆ ಕಾಯ್ದೆ ಅಡಿ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ತನಿಖೆಗೆ ಒಳಪಡಿಸಿ ಭ್ರಷ್ಟಾಚಾರದ ಬಗ್ಗೆ ಕೈಗೊಂಡ ಕ್ರಮದ ಮಾಹಿತಿಯನ್ನು ಒದಗಿಸಿಕೊಡಬೇಕು ಎಂದು ದೂರಿನಲ್ಲಿ ಮನವಿ ಮಾಡಿದೆ.

# ಬಿಜೆಪಿ ಮುಖಂಡ ತಜೀಂದರ್ ಪಾಲ್ ಹೆಚ್ಚಿನ ವಿಚಾರಣೆಗಾಗಿ ದೆಹಲಿಗೆ

**ನವದೆಹಲಿ, ಮೇ.6–** ಪಂಜಾಬ್ ಪೊಲೀಸರಿಂದ ಬಂಧನಕ್ಕೊಳಗಾಗಿದ್ದ ದೆಹಲಿ ಬಿಜೆಪಿ ಮುಖಂಡ ತಜೀಂದರ್ ಪಾಲ್ ಸಿಂಗ್ ಬಗ್ಗಾ ಅವರನ್ನು ದೆಹಲಿ ಪೊಲೀಸರು ಮತ್ತೆ ರಾಷ್ಟ್ರ ರಾಜಧಾನಿಗೆ ಕರೆದೊಯ್ದಿದ್ದಾರೆ.

ಹರಿಯಾಣ ಪೊಲೀಸರು ದೆಹಲಿ ಪೊಲೀಸರಿಗೆ ಹಸ್ತಾಂತರಿಸಿದ ನಂತರ ಬಗ್ಗಾನನ್ನು ಪುನಃ ರಾಷ್ಟ್ರ ರಾಜಧಾನಿಗೆ ಕರೆದುಕೊಂಡು ಹೋಗಲಾಗಿದೆ. ಬಗ್ಗಾ ಅಪಹರಿಸಿದ ಆರೋಪದ ಮೇಲೆ ದೆಹಲಿ ಪೊಲೀಸರು ಪಂಜಾಬ್ ಪೊಲೀಸರ ವಿರುದ್ಧ ಎಫ್ಐಆರ್ ದಾಖಲಿಸಿದ್ದಾರೆ.



ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಅವರ ಮೇಲೆ ಬೆದರಿಕೆ ಹಾಕಿದ ಆರೋಪದ ಮೇಲೆ ಪಂಜಾಬ್ ಪೊಲೀಸರು ಬಿಜೆಪಿ ಮುಖಂಡ ತಜೀಂದರ್ ಪಾಲ್ ಸಿಂಗ್ ಬಗ್ಗಾ ಅವರನ್ನು ಅವರ ಜನಕಪುರಿ ನಿವಾಸದಲ್ಲಿ ಶುಕ್ರವಾರ ಬೆಳಿಗ್ಗೆ ಬಂಧಿಸಿದ್ದಾರೆ.

ಬಿಜೆಪಿ ನಾಯಕರ ಆಕ್ರೋಶದ ನಂತರ, ಈ ವಿಷಯವು ಮೂರು ರಾಜ್ಯಗಳ ಪೊಲೀಸ್ ಪಡೆಗಳನ್ನು ಒಳಗೊಂಡ ನಾಟಕೀಯ ಹಗ್ಗ ಜಗ್ಗಾಟಕ್ಕೆ ಕಾರಣವಾಗಿದೆ. ಬಗ್ಗಾವನ್ನು ಮೊಹಾಲಿಗೆ ಕೊಂಡೊಯ್ಯುತ್ತಿದ್ದ ಪಂಜಾಬ್ ಪೊಲೀಸ್ ತಂಡವನ್ನು ಹರಿಯಾಣ ಪೊಲೀಸರು ಮಾರ್ಗ ಮಧ್ಯದಲ್ಲಿ ತಡೆದರು. ಬಗ್ಗಾ ತಂದೆಯ ದೂರಿನ ಆಧಾರದ ಮೇಲೆ ದೆಹಲಿ ಪೊಲೀಸರು ಅಪಹರಣ ಪ್ರಕರಣವನ್ನೂ ದಾಖಲಿಸಿದ್ದಾರೆ.

# ನಿಗದಿಯಂತೆ ಮೇ.16ರಿಂದ ಶಾಲೆಗಳು ಪ್ರಾರಂಭ; ಬಿ.ಸಿ.ನಾಗೇಶ್

**ಬೆಂಗಳೂರು, ಮೇ 6–** ರಾಜ್ಯದಲ್ಲಿ ನಿಗದಿಯಂತೆ ಮೇ 16 ರಿಂದ ಶಾಲೆಗಳು ಪ್ರಾರಂಭವಾಗುತ್ತವೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಶಿಕ್ಷಣ ಸಚಿವ ಬಿ.ಸಿ ನಾಗೇಶ್ ಹೇಳಿದರು.

ಬೆಂಗಳೂರಿನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ಕೆಲ ಭಾಗಗಳಲ್ಲಿ ಬಿಸಿಲಿನ ತಾಪಮಾನ ಏರುತ್ತಿರುವುದ ರಿಂದ ಶಾಲೆಗಳ ಆರಂಭವನ್ನು ಮುಂದೂಡುವ ಯಾವುದೇ ತೀರ್ಮಾನ ಮಾಡಿಲ್ಲ. ನಿಗದಿಯಂತೆ ಮೇ 16 ರಂದು ಶಾಲೆಗಳು ಆರಂಭವಾಗುತ್ತವೆ ಎಂದರು.

ಮುಂದಿನ ದಿನಗಳಲ್ಲಿ ತಾಪಮಾನ ಏರಿಕೆಯ ಬಗ್ಗೆ ಹವಾಮಾನ ಇಲಾಖೆಯಿಂದ ಯಾವುದೇ ಮುನ್ಸೂಚನೆಗಳು ಬಂದಿಲ್ಲ ಎಂದು ಅವರು ಸ್ಪಷ್ಟಪಡಿಸಿ, ಶೈಕ್ಷಣಿಕ ವರ್ಷದ ಆರಂಭವನ್ನು ವಿಳಂಬಗೊಳಿಸುವಂತೆ ಸರ್ಕಾರವನ್ನು ಯಾವುದೇ ಮನವಿಗಳು ಬಂದಿಲ್ಲ ಎಂದರು.




ಕೊರೊನಾ ಕಾರಣದಿಂದ ಕಳೆದ 2 ವರ್ಷಗಳಲ್ಲಿನ ಕಲಿಕಾ ನಷ್ಟವನ್ನು ಸರಿದೂಗಿಸಲು ರಾಜ್ಯ ಸರ್ಕಾರ ಬೇಸಿಗೆ ರಜೆಯನ್ನು ಕಡಿತ ಗೊಳಿಸಿ ಮೇ 16 ರಿಂದ ಶಾಲೆ ಆರಂಭ ಮಾಡುವ ತೀರ್ಮಾನವನ್ನು ಈಗಾಗಲೇ ಮಾಡಿದೆ. ಇದರಲ್ಲಿ ಬದಲಾವಣೆ ಇಲ್ಲ ಎಂದರು.

# ನನ್ನ ಜನ್ಮ ದಿನ ಆಚರಣೆ ಬೇಡ: ಬೆಂಬಲಿಗರಿಗೆ ಡಿ.ಕೆ.ಶಿವಕುಮಾರ್ ಮನವಿ

**ಬೆಂಗಳೂರು, ಮೇ.6–** ಯಾರೂ ಕೂಡ ತಮ್ಮ ಜನ್ಮದಿನ ಆಚರಿಸಬಾರದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಪಕ್ಷದ ನಾಯಕರು, ಕಾರ್ಯಕರ್ತರು, ಅಭಿಮಾನಿಗಳಿಗೆ ಮನವಿ ಮಾಡಿದ್ದಾರೆ.

ಮಾಧ್ಯಮ ಹೇಳಿಕೆ ನೀಡಿರುವ ಅವರು, ತಮ್ಮ ಜನ್ಮದಿನವನ್ನು ಆಚರಿಸಬಾರದು. ಫ್ಲೆಕ್ಸ್, ಕಟೌಟ್, ಭಿತ್ತಿಚಿತ್ರ, ಪೋಸ್ಟರ್ ಯಾವುದನ್ನೂ ಹಾಕಬಾರದು ಎಂದು ಮನವಿ ಮಾಡಿದ್ದಾರೆ. ಈ ತಿಂಗಳು 12 ರಿಂದ 18 ರವರೆಗೆ ತಾವು ಊರಿನಲ್ಲಿ ಇರುವುದಿಲ್ಲ. ರಾಜಸ್ಥಾನದ ಉದಯಪುರದಲ್ಲಿ ನಡೆಯುವ ಕಾಂಗ್ರೆಸ್ ಚಿಂತನ ಶಿಬಿರದಲ್ಲಿ ಪಾಲ್ಗೊಳ್ಳಲು ತೆರಳಲಿದ್ದೇನೆ. ಹೀಗಾಗಿ ಜನ್ಮದಿನ ಮೇ 15 ರಂದು ಯಾರಿಗೂ ಸಿಗುವುದಿಲ್ಲ. ಆ ದಿನ ಯಾರೂ ಕೂಡ ಶುಭಾಶಯ ಹೇಳಲು, ಅಭಿನಂದಿಸಲು ಮನೆ ಬಳಿ ಬರಬಾರದು ಎಂದು ವಿನಮ್ರವಾಗಿ ವಿನಂತಿಸುತ್ತೇನೆ. ಇದನ್ನು ಯಾರೂ ತಪ್ಪಾಗಿ ಭಾವಿಸಬಾರದು ಎಂದು ಶಿವಕುಮಾರ್ ಅವರು ಹೇಳಿದ್ದಾರೆ. ಇನ್ನು ಜನ್ಮದಿನ ನಿಮಿತ್ತ ಯಾರೂ ಕೂಡ ಮಾಧ್ಯಮಗಳಲ್ಲಿ ಶುಭಾಶಯಗಳ ಜಾಹೀರಾತು ನೀಡಬಾರದು. ಒಂದೊಮ್ಮೆ ಕೊಡಲೇಬೇಕು ಎಂದೆನಿಸಿದರೆ ಮುಂದೆ ಬಿಜೆಪಿ ಸರಕಾರದ ವಿರುದ್ಧ ಕಾಂಗ್ರೆಸ್ ಹಮ್ಮಿಕೊಳ್ಳುವ ಹೋರಾಟ, ಪ್ರತಿಭಟನೆಗಳ ಬಗ್ಗೆ ಜಾಹೀರಾತು ನೀಡಬೇಕೆಂದು ವಿನಂತಿಸುತ್ತೇನೆ. ಅದನ್ನೇ ನೀವು ನನಗೆ ಸಲ್ಲಿಸುವ ಜನ್ಮದಿನದ ಶುಭಾಶಯ ಎಂದು ಪರಿಗಣಿಸುತ್ತೇನೆ ಎಂದು ಶಿವಕುಮಾರ್ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.




# ನಿತೀಶ್ ಕುಮಾರ್–ಪ್ರಶಾಂತ್ ಕಿಶೋರ್ ನಡುವೆ 'ಬಿಹಾರ ಅಭಿವೃದ್ಧಿ'ಯ ಕದನ

**ಪಾಟ್ನಾ: ಮೇ 06–** ಬಿಹಾರ ಅಭಿವೃದ್ಧಿ ಬಗ್ಗೆ ಯಾರ ಅಭಿಪ್ರಾಯವೂ ಮುಖ್ಯವಲ್ಲ . ಸತ್ಯ ಮುಖ್ಯವೆಂದು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಚುನಾವಣಾ ಚತುರ ಪ್ರಶಾಂತ್ ಕಿಶೋರ್ ಹೇಳಿಕೆಯನ್ನ ಟೀಕಿಸಿ ಉತ್ತರಿಸಿದ್ದಾರೆ.

ಬಿಹಾರದಲ್ಲಿ ನಿತೀಶ್ ಕುಮಾರ್ ಅವರ 15 ವರ್ಷಗಳ ಆಡಳಿತವನ್ನು ಟೀಕಿಸಿ, ರಾಜ್ಯವನ್ನು ಪುನರುಜ್ಜೀವನಗೊಳಿಸಲು ಹೊಸ ಚಿಂತನೆ ಮತ್ತು ಹೊಸ ಪ್ರಯತ್ನ? ವನ್ನು ತರುವ ಉದ್ದೇಶವಿದೆ ಎಂದು ಪ್ರಶಾಂತ್ ಕಿಶೋರ್ ಹೇಳಿಕೆ ನೀಡಿದ್ದ ಬೆನ್ನಲ್ಲೇ ಮುಖ್ಯಮಂತ್ರಿ ನಿತೀಶ್ ಕುಮಾರ್ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಪ್ರತಿಕ್ರಿಯೆ ನೀಡಿದರು.

ಬಿಹಾರದಲ್ಲಿ ನಾವು ಒಳ್ಳೆಯದನ್ನು ಮಾಡಿದ್ದೇವೆಯೋ ಇಲ್ಲವೋ ಎಂಬುದು ನಿಮಗೆ ತಿಳಿದಿದೆ. ಯಾರೊಬ್ಬರ ಅಭಿಪ್ರಾಯ ಮುಖ್ಯವಲ್ಲ. ಸತ್ಯ ಯಾವುದು ಮುಖ್ಯ. ನಮ್ಮ ಕೆಲಸ ಜನರಿಗೆ ತಿಳಿದಿದೆ. ಯಾವ ಕೆಲಸ ಮಾಡಲಾಗಿದೆ ಮತ್ತು ಎಷ್ಟು ಕೆಲಸ ಮಾಡಲಾಗಿದೆ ಎಂಬುದು ನಿಮಗೆಲ್ಲರಿಗೂ ತಿಳಿದಿದೆ ಎಂದು ನಿತೀಶ್ ಕುಮಾರ್ ಹೇಳಿದರು.



ಪ್ರಶಾಂತ್ ಕಿಶೋರ್ ಪ್ರತಿಕ್ರಿಯೆ: ನಿತೀಶ್ ಜಿ ಹೇಳಿದ್ದು ಸರಿ. ಮಹತ್ವದ ಸತ್ಯವೆಂದರೆ ಲಾಲು ಪ್ರಸಾದ್ ಯಾದವ್ ಮತ್ತು ನಿತೀಶ್ ಕುಮಾರ್ ಅವರ 30 ವರ್ಷಗಳ ಆಡಳಿತದ ನಂತರವೂ ಬಿಹಾರ ಅತ್ಯಂತ ಬಡ ಮತ್ತು ಹಿಂದುಳಿದ ರಾಜ್ಯವಾಗಿದೆ ಎಂದು ಅವರು ಪೋಸ್ಟ್ ಮಾಡಿದ್ದಾರೆ. ಗುರುವಾರ ತಾವು ಹೇಳಿದ್ದನ್ನೇ ಮತ್ತೆ ಪ್ರಸ್ತಾಪಿಸಿದ್ದಾರೆ.

# ತೂಡಿ ದರ್ಗಾ- ಕೋಬಾಳ ರಸ್ತೆ ನಿರ್ಮಾಣ ಯೋಜನೆಗೆ ಶಾಸಕ ಡಾ. ಅಜಯ್ ಸಿಂಗ್ ಚಾಲನೆ



**ಕಲಬುರಗಿ, ಮೇ.6:** ಜೇವರ್ಗಿ ಮತಕ್ಷೇತ್ರದಲ್ಲಿ ಬರುವ ಕೂಡಿ ದರ್ಗಾದಿಂದ ಕೋಬಾಳ ವರೆಗಿನ 2. 10ಕಿಮೀ ಉದ್ದದ ರಸ್ತೆ ನಿರ್ಮಾಣ ಕಾಮಗಾರಿಗೆ ಜೇವರ್ಗಿ ಶಾಸಕರು ಹಾಗೂ ವಿಧಾನಸಬೆ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಡಾ. ಅಜಯ ಸಿಂಗ್ ಅವರು ಕೂಡಿ ದರ್ಗಾದಲ್ಲಿ ನಡೆದ ಸಮಾರಂಭದಲ್ಲಿ ಗುದ್ದಲಿ ಪೂಜೆ ನೆರವೇರಿಸಿ ಕಾಮಗಾರಿಗೆ ಚಾಲನೆ ನೀಡಿದರು.

ಸದರಿ ರಸ್ತೆ ಕಾಮಗಾರಿಎ ರಾಜ್ಯ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಯಡಿಯಲ್ಲಿ ಪ್ಯಾಕೇಜ್ ಸಂಖ್ಯೆ 15– 40 ಅಡಿಯಲ್ಲಿ 1. 30 ಕೋಟಿ ರುಪಾಯಿ ಮೀಸಲಿಡಲಾಗಿದೆ. ಈ ಕಾಮಗಾರಿ ಪೂರ್ಣಗೊಂಡಲ್ಲಿ ಈ ಭಾಗದ ಗ್ರಾಮೀಣ ಜನರ ಸುಗಮ ಸಾರಿಗೆ ಸಂಪರ್ಕಕ್ಕೆ ಹೆಚ್ಚಿನ ಅನುಕೂಲವಾಗಲಿದೆ.



ಮಳವಳ್ಳಿ ಮಂಡ್ಯ ಜಿಲ್ಲೆಯ ಬುದ್ಧ ವಿಹಾರಕ್ಕೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಶುಕ್ರವಾರ ಭೇಟಿ ನೀಡಿದರು

## ಅಲಹಾಬಾದ್ ಹೈಕೋರ್ಟ್ ಆದೇಶ

# ಮಸೀದಿಗಳಲ್ಲಿ ಧ್ವನಿವರ್ಧಕಗಳ ಅಳವಡಿಕೆ ಮೂಲಭೂತ ಹಕ್ಕಲ್ಲ

**ಅಲಹಾಬಾದ್: ಮೇ 06 –** ಮಸೀದಿಗಳಲ್ಲಿ ಧ್ವನಿವರ್ಧಕಗಳನ್ನು ಅಳವಡಿಸುವಂತೆ ಕೋರಿ ಸಲ್ಲಿಸಲಾಗಿದ್ದ ಅರ್ಜಿಯನ್ನು ಅಲಹಾಬಾದ್ ಹೈಕೋರ್ಟ್ ವಜಾಗೊಳಿಸಿದೆ.

ಮಸೀದಿಗಳಲ್ಲಿ ಧ್ವನಿವರ್ಧಕಗಳನ್ನು ಅಳವಡಿಸುವುದು ಮೂಲಭೂತ ಹಕ್ಕಲ್ಲ? ಎಂದು ನ್ಯಾಯಾಲಯ ಹೇಳಿದೆ. ನ್ಯಾಯಮೂರ್ತಿ ವಿವೇಕ್ ಕುಮಾರ್ ಬಿರ್ಲಾ ಮತ್ತು ನ್ಯಾಯಮೂರ್ತಿ ವಿಕಾಸ್ ಅವರಿದ್ದ ವಿಭಾಗೀಯ ಪೀಠವು ಬುಧವಾರ



ಈ ಆದೇಶ ನೀಡಿದ್ದು, ??ಮಸೀದಿಗಳಲ್ಲಿ ಧ್ವನಿವರ್ಧಕಗಳನ್ನು ಬಳಸುವುದು ಸಾಂವಿಧಾನಿಕ ಹಕ್ಕು ಅಲ್ಲ ಎಂದು ಕಾನೂನು ಹೇಳುತ್ತದೆ ಎಂದಿದ್ದಾರೆ.

ಡಿಸೆಂಬರ್ 3, 2021 ರಂದು ಬದೌನ್ ಜಿಲ್ಲೆಯ ಬಿಸೌಲಿ ಉಪ–ವಿಭಾಗೀಯ ಮ್ಯಾಜಿಸ್ಟ್ರೇಟ್ (ಖಆಃ) ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಇರ್ಫಾನ್ ಎಂಬ ವ್ಯಕ್ತಿ ಆಜಾನ್ ಗಾಗಿ ಧೋರನ್ ಪುರ ಗ್ರಾಮದ ನೂರಿ ಮಸೀದಿಯಲ್ಲಿ ಧ್ವನಿವರ್ಧಕವನ್ನು ಸ್ಥಾಪಿಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿದಾರರು ತಮ್ಮ ಮನವಿಯಲ್ಲಿ, ಎಸ್ ಡಿಎಂ ನ ಆದೇಶವು ಕಾನೂನುಬಾಹಿರ ಮತ್ತು ಇದು ಮೂಲಭೂತ ಹಕ್ಕುಗಳು ಮತ್ತು ಕಾನೂನು ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ಹೇಳಿದರು.

# ಆನೆಬೇಟೆ ಪ್ರಕರಣಗಳು: ತನಿಖಾ ತಂಡ ರಚಿಸಿದ ಮದ್ರಾಸ್ ಹೈಕೋರ್ಟ್

**ಚೆನ್ನೈ,ಮೇ.6–** ಆನೆಗಳ 19 ಬೇಟೆ ಪ್ರಕರಣಗಳ ತನಿಖೆಗಾಗಿ ಮದ್ರಾಸ್ ಹೈಕೋರ್ಟ್ ಮಂಗಳವಾರ ವಿಶೇಷ ತನಿಖಾ ತಂಡ ರಚಿಸಿದೆ.

ಸಿಬಿಐ ಪೊಲೀಸ್ ವರಿಷ್ಠಾಧಿಕಾರಿ ನಿರ್ಮಲಾ ದೇವಿ ನೇತೃತ್ವದ ಎಸ್‌ಐಟಿಯಲ್ಲಿ ಸಿಬಿಐ ಉಪ ಪೊಲೀಸ್ ವರಿಷ್ಠಾಧಿಕಾರಿ ಸಂತೋಷ್ ಕುಮಾರ್, ಮಾಜಿ ಮುಖ್ಯ ವನ್ಯಜೀವಿ ವಾರ್ಡನ್ ಶೇಖರ್ ಕುಮಾರ್ ನೀರಜ್, ಉಪ ಅರಣ್ಯ ಸಂರಕ್ಷಣಾಧಿಕಾರಿ ಆರ್ ರಾಜಮೋಹನ್ ಮತ್ತು ಐಪಿಎಸ್ ಅಧಿಕಾರಿ ಮೋಹನ್ ನವಾಜ್ ಇದ್ದಾರೆ. ತನಿಖೆ ವ್ಯಾಪ್ತಿಗೆ ಬಂದಿರುವ ಪ್ರಕರಣಗಳಲ್ಲಿ ಹೆಚ್ಚಿನವು 2013 ಮತ್ತು 2018 ರ ನಡುವೆ ನಡೆದಿವೆ. ಇವುಗಳು ಇತ್ಯರ್ಥವಾಗದೆ ಉಳಿದಿವೆ.

**ಕೇರಳ ಅರಣ್ಯ ಇಲಾಖೆಯು ಎಸ್‌ಐಟಿಗೆ ಸೇರಲು ಉತ್ಸುಕವಾಗಿತ್ತು ಏಕೆಂದರೆ ಹೆಚ್ಚಿನ ದಂತ ವ್ಯಾಪಾರ ಮತ್ತು ಬೇಟೆಯಾಡುವಿಕೆಯು ಅಂತರರಾಜ್ಯ ಸಂಪರ್ಕವನ್ನು ಹೊಂದಿತ್ತು. ಆದರೆ ಇಲಾಖೆ ಕಳೆದ ಕೆಲವು ವಿಚಾರಣೆಗಳಲ್ಲಿ ಹಾಜರಾಗಲು ವಿಫಲವಾಗಿದೆ.**

ನ್ಯಾಯಮೂರ್ತಿಗಳಾದ ವಿ ಭಾರತಿದಾಸನ್ ಮತ್ತು ಎನ್ ಸತೀಶ್ ಕುಮಾರ್ ಅವರ ವಿಭಾಗೀಯ ಪೀಠವು ಮೇ 15 ರಿಂದ ತನಿಖೆಯನ್ನು ಪ್ರಾರಂಭಿಸಲು ಮತ್ತು ಜೂನ್ 10 ರೊಳಗೆ ಪ್ರಾಥಮಿಕ ವರದಿ ಸಲ್ಲಿಸುವಂತೆ ಎಸ್‌ಐಟಿಗೆ ಆದೇಶಿಸಿದೆ. ವನ್ಯಜೀವಿ ಅಪರಾಧ ನಿಯಂತ್ರಣ ಬ್ಯೂರೋ (ಡಬ್ಲ್ಯುಸಿಸಿಬಿ) 2019 ರ ವರದಿಯು, ವಿಶೇಷವಾಗಿ ಕೊಯಮತ್ತೂರು ವಿಭಾಗದಲ್ಲಿ ಕಡಿಮೆ ವರದಿಯಾಗಿರುವ ಬೇಟೆಯ ನಿದರ್ಶನಗಳನ್ನು ಎತ್ತಿ ತೋರಿಸಿದೆ. ಕೊಯಮತ್ತೂರು ವಿಭಾಗದ ಸಿಗೂರ್ ವ್ಯಾಪ್ತಿಯಲ್ಲಿ ಮೂರು ಆನೆಗಳನ್ನು ಒಂದೇ ಆರೋಪಿಗಳು ಮೂರು ವಿಭಿನ್ನ ಸಂದರ್ಭಗಳಲ್ಲಿ ಕೊಂದ ಪ್ರಕರಣಕ್ಕೆ ಸಂಬಂಧಿಸಿದಂತೆ,ಕೇವಲ ಒಂದು ಪ್ರಕರಣವನ್ನು ದಾಖಲಿಸಲಾಗಿದೆ ಎನ್ನಲಾಗಿದೆ.



ಆರೋಪಿಗಳೆಂದು ಎರಡು ಅಥವಾ ಮೂರು ವ್ಯಕ್ತಿಗಳ ಹೆಸರನ್ನು ಮಾತ್ರ ಉಲ್ಲೇಖಿಸಲಾಗಿದೆ. ಕಳ್ಳಬೇಟೆಯಲ್ಲಿ ಭಾಗಿಯಾಗಿರುವ ವ್ಯಕ್ತಿಗಳ ಬಗ್ಗೆ ಅವರ ಹೇಳಿಕೆಯು ಸ್ಪಷ್ಟವಾಗಿದ್ದರೂ, ಅವರ ಹೆಸರನ್ನು ಆರೋಪಿಗಳ ಪಟ್ಟಿಯಲ್ಲಿ ಸೇರಿಸ ಲಾಗಿಲ್ಲ ಎಂದು ವರದಿಯು ಹೇಳುತ್ತದೆ,

ಕಳಪೆ ತನಿಖೆ ಕಳ್ಳಬೇಟೆಗೆ ಕಾರಣವಾಯಿತು. ಹತ್ತು ವರ್ಷಗಳಿಂದ ಕೊಯಮತ್ತೂರು ಮತ್ತು ತಮಿಳುನಾಡಿನ ಇತರ ಅರಣ್ಯ ವಿಭಾಗಗಳಲ್ಲಿ ಹೆಚ್ಚು ಆನೆಗಳು ಬಲಿಯಾಗಿವೆ ಎನ್ನಲಾಗಿದೆ.

2015ರಲ್ಲಿ ಸಿಗೂರ್ ವ್ಯಾಪ್ತಿಯಲ್ಲಿ ಆರೋಪಿಬಾಬು ಜೋಸ್ ನೀಡಿದ ಹೇಳಿಕೆಯಲ್ಲಿ ಅವರು 16 ಜೋಡಿ ದಂತಗಳನ್ನು ಸಂಗ್ರಹಿಸಿದ್ದಾರೆ ಎಂದು ತೋರಿಸಿದೆ, ಅಂದರೆ ಎಂಟು ಆನೆಗಳನ್ನು ಕೊಲ್ಲಲಾಗಿದೆ. ಅದರಂತೆ, ಕನಿಷ್ಠ ಎಂಟು ಪ್ರಕರಣಗಳು ದಾಖಲಾಗಿರಬೇಕು, ದುರಂತವೆಂದರೆ ಈ ಪ್ರಕರಣಗಳು ದಾಖಲಾಗಿಲ್ಲ. ಇದಲ್ಲದೆ, ತಮಿಳುನಾಡಿನ ಬಾಬು ಜೋಸ್ ಅವರಿಂದ ಎಲ್ಲಾ ದಂತಗಳನ್ನು (300 ಕೆಜಿಗಿಂತ ಹೆಚ್ಚು) ಖರೀದಿಸಿದ ಅಜಿ ಬ್ರೈಟ್ ಹೆಸರನ್ನು ಯಾವುದೇ ಕಳ್ಳಬೇಟೆ ಪ್ರಕರಣಗಳಲ್ಲಿ ಸೇರಿಸಲಾಗಿಲ್ಲ ಎಂದು ವರದಿ ಹೇಳುತ್ತದೆ.

ಆರಂಭದಲ್ಲಿ, ಕೇರಳ ಅರಣ್ಯ ಇಲಾಖೆಯು ಎಸ್‌ಐಟಿಗೆ ಸೇರಲು ಉತ್ಸುಕವಾಗಿತ್ತು ಏಕೆಂದರೆ ಹೆಚ್ಚಿನ ದಂತ ವ್ಯಾಪಾರ ಮತ್ತು ಬೇಟೆಯಾಡುವಿಕೆಯು ಅಂತರರಾಜ್ಯ ಸಂಪರ್ಕವನ್ನು ಹೊಂದಿತ್ತು. ಆದರೆ ಇಲಾಖೆ ಕಳೆದ ಕೆಲವು ವಿಚಾರಣೆಗಳಲ್ಲಿ ಹಾಜರಾಗಲು ವಿಫಲವಾಗಿದೆ. ಏತನ್ಮಧ್ಯೆ, ಸಮಿತಿಯಲ್ಲಿ ಒಳಗೊಂಡಿರುವ ಅಧಿಕಾರಿಗಳ ಆಯ್ಕೆಗೆ ಅರ್ಜಿದಾರರ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿದ ನಂತರ ರಾಜ್ಯಾದ್ಯಂತ ಕಳೆದ ಒಂದು ವರ್ಷದಲ್ಲಿ ನಡೆದ ಆನೆಗಳ ಸಾವಿನ ತನಿಖೆಗಾಗಿ ತಮಿಳುನಾಡು ಅರಣ್ಯ ಇಲಾಖೆ ರಚಿಸಿದ್ದ ಸಮಿತಿಗೆ ಮದ್ರಾಸ್ ಹೈಕೋರ್ಟ್ ತಡೆ ನೀಡಿದೆ.

# ಸಿಐಡಿಯಿಂದ ಭ್ರಷ್ಟ ತಿಮಿಂಗಿಲಗಳ ರಕ್ಷಣೆ: ಭಾಸ್ಕರ್ ರಾವ್ ಆರೋಪ

**ಬೆಂಗಳೂರು: ಮೇ 06 –** ಪಿಎಸ್‌ಐ ನೇಮಕಾತಿ ಹಗರಣದ ತನಿಖೆಯನ್ನು ಸಿಐಡಿಗೆ ನೀಡಿರುವುದರ ಹಿಂದೆ ಸತ್ಯ ಹೊರಬರುವುದನ್ನು ತಡೆಯುವ ಹುನ್ನಾರವಿದೆ ಎಂದು ಆಮ್ ಆದ್ಮಿ ಪಾರ್ಟಿ ಮುಖಂಡ ಹಾಗೂ ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಹೇಳಿದರು.




ಪ್ರೆಸ್‌ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಭಾಸ್ಕರ್ ರಾವ್, ಬಿಜೆಪಿ ನಾಯಕರೇ ಆರೋಪಿಗಳಾಗಿರುವ ಹಗರಣವನ್ನು ಬಿಜೆಪಿ ಸರ್ಕಾರದ ಅಡಿಯಲ್ಲಿ ಕಾರ್ಯನಿರ್ವಹಿಸುವ ಸಿಐಡಿಯಿಂದಲೇ ತನಿಖೆ ಮಾಡಿಸುವುದು ಹಾಸ್ಯಾಸ್ಪದ. ಈ ತನಿಖೆಗೆ ಯಾವ ಬೆಲೆಯೂ ಇಲ್ಲ. ಅನುಮಾನಾಸ್ಪದ ಅಭ್ಯರ್ಥಿಯ ತನಿಖೆ ವೇಳೆ ಬಿಜೆಪಿ ನಾಯಕರ ಹೆಸರು ಕೇಳಿಬಂದರೆ, ಆ ಅಭ್ಯರ್ಥಿಯ ವಿಚಾರಣೆಯನ್ನೇ ಕೈಬಿಡಲಾಗುತ್ತಿದೆ. ಇಡೀ ಹಗರಣವನ್ನು ಮುಚ್ಚಿ ಹಾಕಿ, ಬಿಜೆಪಿ ನಾಯಕರನ್ನು ಬಚಾವ್ ಮಾಡಲೆಂದೇ ಸಿಐಡಿ ಮೂಲಕ ತನಿಖೆ ನಡೆಸಲಾಗುತ್ತಿದೆ? ಎಂದು ಹೇಳಿದರು.

ಸುಪ್ರೀಂಕೋರ್ಟ್ ನ್ಯಾಯಮೂರ್ತಿಯವರ ಮೇಲ್ವಿಚಾರಣೆಯಲ್ಲಿ ಪಿಎಸ್‌ಐ ಹಗರಣದ ಸಮಗ್ರ ತನಿಖೆ ನಡೆಯ ಬೇಕು. ಆಗ ಮಾತ್ರ ನಿಷ್ಪಕ್ಷಪಾತ ತನಿಖೆ ನಡೆದು, ಸತ್ಯಾಂಶ ಹೊರಬರುತ್ತದೆ. ಆಗ ಅಕ್ರಮದಲ್ಲಿ ಭಾಗಿಯಾದ ಎಲ್ಲ ರಾಜಕಾರಣಿಗಳ ಮುಖವಾಡ ಕಳಚಿ ಬೀಳುತ್ತದೆ. ಇಲ್ಲದಿದ್ದರೆ, ಸಿಐಡಿ ತನಿಖೆಯ ಗಾಳಕ್ಕೆ ಕೇವಲ ಸಣ್ಣಪುಟ್ಟ ಮೀನುಗಳು ಬಲಿಯಾಗಿ, ದೊಡ್ಡ ತಿಮಿಂಗಿಲಗಳು ತಪ್ಪಿಸಿಕೊಂಡು ಬಿಡುತ್ತವೆ? ಎಂದು ಭಾಸ್ಕರ್ ರಾವ್ ಹೇಳಿದರು.

ಸಚಿವ ಡಾ.ಅಶ್ವತ್ಥ್ ನಾರಾಯಣರವರ ಸಹೋದರನೇ ಹಗರಣದಲ್ಲಿ ಭಾಗಿಯಾಗಿರುವ ಆರೋಪವಿದೆ. ಸಚಿವರ ಸಹಕಾರ ವಿಲ್ಲದೇ ಅವರ ಸಹೋದರನಿಗೆ ಅಕ್ರಮವೆಸಗಲು ಸಾಧ್ಯವೇ? ಬಹುತೇಕ ಬಿಡಿಎ ಕಾಮಗಾರಿಗಳನ್ನು ಅಶ್ವತ್ಥ್ ನಾರಾಯಣ್ ಸಹೋದರರ ಮಾಲೀಕತ್ವದ ಹೊಂಬಾಳೆ ಕನ್ಸ್ಟ್ರಕ್ಷನ್ ನಿರ್ವಹಿಸುತ್ತಿದ್ದು, ಪಿಎಸ್‌ಐ ನೇಮಕಾತಿಯಲ್ಲೂ ಅವರು ಮೂಗು ತೂರಿಸಿರುವುದು ಆತಂಕಕಾರಿ. ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆಯವರಿಗೆ ಸಿಐಡಿ ಮೂರು ನೋಟಿಸ್ ನೀಡಿದರೂ ಅವರು ವಿಚಾರಣೆಗೆ ಹಾಜರಾಗಿ ದಾಖಲೆಗಳನ್ನು ಒದಗಿಸಿಲ್ಲ. ಸತ್ಯ ಹೊರಬರುವುದು ಕಾಂಗ್ರೆಸ್ಸೂ ಇಷ್ಟವಿಲ್ಲ ಎನ್ನುವುದು ಇದರಿಂದಲೇ ಸ್ಪಷ್ಟವಾಗುತ್ತದೆ. ಇನ್ನು, ಅಶ್ವತ್ಥ್ ನಾರಾಯಣ್‌ರವರು ಈ ಹಿಂದೆಯೂ ನಕಲಿ ಸರ್ಟಿಫಿಕೇಟ್ ನೀಡಿದ್ದರೆಂದು ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿಯವರು ಬಹಿರಂಗಪಡಿಸಿದ್ದು, ಅವರು ಕೂಡ ಸಾಕ್ಷಿ ಬಹಿರಂಗ ಪಡಿಸುತ್ತಿಲ್ಲ. ಮೂರೂ ಭ್ರಷ್ಟ ಪಕ್ಷಗಳು ಒಳಒಪ್ಪಂದ ಮಾಡಿಕೊಂಡು ಹಗರಣವನ್ನು ಮುಚ್ಚಿಹಾಕಲು ಯತ್ನಿಸುತ್ತಿವೆ? ಎಂದು ಭಾಸ್ಕರ್ ರಾವ್ ಹೇಳಿದರು.

ಮಾಜಿ ಮುಖ್ಯಮಂತ್ರಿಯೊಬ್ಬರ ಪುತ್ರ ಪಿಎಸ್‌ಐ ನೇಮಕಾತಿ ಪರೀಕ್ಷೆಯಲ್ಲಿ ಭಾರೀ ಅಕ್ರಮ ಮಾಡಿದ್ದಾರೆಂದು ವಕೀಲ ನಿಯೋಗವು ಸಿಐಡಿಗೆ ದೂರು ನೀಡಿದೆ. ಆ ಮುಖ್ಯಮಂತ್ರಿ ಹಾಗೂ ಅವರ ಮಗ ಯಾರೆಂದು ಬಹಿರಂಗವಾಗಬೇಕು ಎಂದೂ ಆಗ್ರಹಿಸಿದರು.

ಬೆಂಗಳೂರಿನ 20 ಪರೀಕ್ಷಾ ಕೇಂದ್ರಗಳಲ್ಲೂ ಅಕ್ರಮ ನಡೆದಿದೆ ಎಂದು ಸಿಐಡಿ ಅಧಿಕಾರಿಗಳು ಹೇಳುತ್ತಿದ್ದಾರೆ.

ಪೊಲೀಸ್ ನೇಮಕಾತಿ ಮಂಡಳಿಯ ಎಡಿಜಿಪಿ ಅಮೃತ್ ಪಾಲ್ ಅಕ್ರಮದಲ್ಲಿ ಭಾಗಿಯಾಗಿರುವುದು ದುರಂತ ಎಂದು ಭಾಸ್ಕರ್ ರಾವ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಆಮ್ ಆದ್ಮಿ ಪಾರ್ಟಿ ಮುಖಂಡರಾದ ಚನ್ನಪ್ಪಗೌಡ ನೆಲ್ಲೂರು ವಿಜಯ್ ಶಾಸ್ತ್ರಿಮಠ್, ಸುರೇಶ್ ರಾಥೋಡ್, ಭಾಗವಹಿಸಿದ್ದರು.

# ದಲ್ಲಾಳಿಗಳ ವಿರುದ್ದ ಕಾನೂನು ಕ್ರಮ: ಕೆ.ಗೋಪಾಲಯ್ಯ

**ಬೆಂಗಳೂರು, ಮೇ.6–** ರಾಗಿ ಖರೀದಿ ಕೇಂದ್ರಗಳಲ್ಲಿ ಮಧ್ಯವರ್ತಿಗಳು ಮತ್ತು ದಲ್ಲಾಳಿಗಳು ಕಂಡು ಬಂದರೆ ಅವರ ವಿರುದ್ಧ ಸರ್ಕಾರ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಿದೆ ಎಂದು ಹಾಸನ ಮತ್ತು ಮಂಡ್ಯ ಜಿಲ್ಲಾ ಉಸ್ತುವಾರಿ ಮತ್ತು ಅಬಕಾರಿ ಸಚಿವ ಕೆ.ಗೋಪಾಲಯ್ಯ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದ ರಾಗಿ ಬೆಳೆಗಾರರ ಹಿತ ಕಾಪಾಡಲು ಈಗಾಗಲೇ ಮುಖ್ಯ ಮಂತ್ರಿಗಳು ಕೇಂದ್ರ ಆಹಾರ ಖಾತೆ ಸಚಿವರೊಂದಿಗೆ ಮಾತನಾಡಿ ಒಪ್ಪಿಗೆ ಪಡೆದಿದ್ದು, ಶೀಘ್ರದಲ್ಲೆ ರಾಗಿ ಖರೀದಿ ಆರಂಭವಾಗಲಿದೆ ಎಂದರು.

ಹೆಚ್ಚು ರಾಗಿ ಬೆಳೆಯುವ ಹಾಸನ, ಹಳೆ ಮೈಸೂರು ಸೇರಿದಂತೆ ರಾಜ್ಯದ ಎಲ್ಲ ಭಾಗದ ರಾಗಿ ಬೆಳೆಗಾರರಿಗೆ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ಅಗತ್ಯ ಕ್ರಮಕೈಗೊಂಡಿದೆ. ಖರೀದಿ ಕೇಂದ್ರ ಮಧ್ಯ ವರ್ತಿಗಳು, ದಲ್ಲಾಲರು ಕಂಡು ಬಂದರೆ ಅವರ ವಿರುದ್ಧ ಕಠಿಣ



ಕ್ರಮ ಕೈಗೊಳ್ಳಲಾಗುವುದು ಎಂದರು.

ರೈತರಿಗೆ ಅನುಕೂಲ ಕಲ್ಪಿಸುವ ಹಿನ್ನೆಲೆಯಲ್ಲಿ ಮತ್ತೆ ಎರಡು ಲಕ್ಷ ಮೆಟ್ರಿಕ್ ಟನ್ ರಾಗಿ ಖರೀದಿಗೆ ಸರ್ಕಾರ ತೀರ್ಮಾನ ಮಾಡಿದೆ ಎಂದು ಅವರು ತಿಳಿಸಿದರು.

# ಸರ್ಕಾರದ ವಶಕ್ಕೆ ಬಿಬಿಎಂಪಿ ಆರೋಗ್ಯ ಕೇಂದ್ರಗಳು

ಬೆಂಗಳೂರು, ಮೇ 6– ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು, ಸಮುದಾಯ ಕೇಂದ್ರಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸುಪರ್ದಿಗೆ ನೀಡಲಾಗಿದೆ.

ಈ ಮೂಲಕ ಇನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು, ಸಮುದಾಯ ಕೇಂದ್ರಗಳನ್ನು ಸರ್ಕಾರವೇ ನೇರವಾಗಿ ನಡೆಸಲು ತೀರ್ಮಾನಿಸಿದೆ.

ಈ ಬಗ್ಗೆ ಆದೇಶ ಹೊರಡಿಸಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಒಟ್ಟು 51 ಸರ್ಕಾರಿ ಆಸ್ಪತ್ರೆಗಳನ್ನು ತನ್ನ ಸುಪರ್ದಿಗೆ ತೆಗೆದುಕೊಳ್ಳಲಿದೆ. ನಗರ ಆರೋಗ್ಯ ಅಭಿಯಾನದಡಿ ಪಟ್ಟಿ ಮಾಡಿದ 35 ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಪಟ್ಟಿ ಮಾಡದ 14 ನಗರ ಪ್ರಾಥಮಿಕ ಕೇಂದ್ರಗಳು ಹಾಗೂ 2 ಸಮುದಾಯ ಆರೋಗ್ಯ ಕೇಂದ್ರಗಳು ಇನ್ನು ಮುಂದೆ ಅರೋಗ್ಯ ಹಾಗೂ ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಗೆ ಬರಲಿದೆ.

# ಒಡಿಶಾಗೆ ಚಂಡಮಾರುತ ಅಪ್ಪಳಿಸುವ ಭೀತಿ; ರಾಜ್ಯ ಸರ್ಕಾರದಿಂದ ಹೈ ಅಲರ್ಟ್ ಘೋಷಣೆ

**ಭುವನೇಶ್ವರ: ಮೇ 06 –** ಒಡಿಶಾಕ್ಕೆ ಮತ್ತೊಂದು ಚಂಡಮಾರುತ ಅಪ್ಪಳಿಸುವ ಸಾಧ್ಯತೆಯಿದ್ದು ರಾಜ್ಯದಲ್ಲಿ ಹೈ ಅಲರ್ಟ್ ಘೋಷಿಸಲಾಗಿದೆ.

ಶುಕ್ರವಾರ ದಕ್ಷಿಣ ಅಂಡಮಾನ್ ಸಮುದ್ರದಲ್ಲಿ ರೂಪುಗೊಂಡ ಕಡಿಮೆ ಒತ್ತಡದ ಪ್ರದೇಶವು ಚಂಡಮಾರುತವಾಗಿ ತೀವ್ರಗೊಂಡು ಮುಂದಿನ ವಾರದ ಆರಂಭದಲ್ಲಿ ಆಂಧ್ರಪ್ರದೇಶ–ಒಡಿಶಾ ತೀರಗಳನ್ನು ತಲುಪುವ ಸಾಧ್ಯತೆಯಿದೆ.ಇದರಿಂದಾಗಿ ಪೂರ್ವ ಕರಾವಳಿ ರಾಜ್ಯಗಳಲ್ಲಿ



ಭಾರೀ ಮಳೆಯಾಗುತ್ತದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ದಕ್ಷಿಣ ಅಂಡಮಾನ್ ಸಮುದ್ರ ಮತ್ತು ಪಕ್ಕದ ಆಗ್ನೇಯ ಬಂಗಾಳ ಕೊಲ್ಲಿಯಲ್ಲಿನ ಕಡಿಮೆ ಒತ್ತಡದ ಪ್ರದೇಶವು ವಾಯುವ್ಯ ದಿಕ್ಕಿನಲ್ಲಿ ಚಲಿಸುವ ಸಾಧ್ಯತೆಯಿದೆ ಮತ್ತು ಶನಿವಾರದ ವೇಳೆಗೆ ತಗ್ಗುತ್ತದೆ. ಭಾನುವಾರ ಸಂಜೆ ವೇಳೆಗೆ ಚಂಡಮಾರುತವಾಗಿ ಮತ್ತಷ್ಟು ತೀವ್ರಗೊಳ್ಳುವ ಸಾಧ್ಯತೆಯಿದೆ ಎಂದು ಹವಾಮಾನ ಕಚೇರಿ ತಿಳಿಸಿದೆ.

ಮೇ 10ರಂದು ಚಂಡಮಾರತು ಕರಾವಳಿ ತಲುಪುವ ಸಾಧ್ಯತೆ ಇದೆ ಎಂದು ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಪ್ರಧಾನ ನಿರ್ದೇಶಕ ಮೃತುಂಜಯ್ ಮೊಹಾಪಾತ್ರ ತಿಳಿಸಿದ್ದಾರೆ. ಮೇ 9 ರಿಂದ ಸಮುದ್ರದ ಪರಿಸ್ಥಿತಿಯು ಪ್ರಕ್ಷುಬ್ಧವಾಗಿರಬಹುದು. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಐಎಂಡಿ ಎಚ್ಚರಿಸಿದೆ. ಸಮುದ್ರದಲ್ಲಿ ಚಂಡಮಾರುತದ ಗಾಳಿಯ ವೇಗ ಗಂಟೆಗೆ 80–90 ಕಿಮೀ ವೇಗದಲ್ಲಿರುತ್ತದೆ ಎಂದು ಅಂದಾಜಿಸಲಾಗಿದೆ.

# ಅಮರನಾಥ ಯಾತ್ರೆ ಮಾರ್ಗದಲ್ಲಿ ದಾಳಿಗೆ ಸಂಚು; ಮೂವರು ಭಯೋತ್ಪಾದಕರ ಹತ್ಯೆ

**ಶ್ರೀನಗರ, ಮೇ 06–** ಅಮರನಾಥ ಯಾತ್ರೆಯ ಪ್ರಮುಖ ಮಾರ್ಗವಾದ ಅನಂತನಾಗ್ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ಭದ್ರತಾ ಪಡೆಗಳು ಮೂವರು ಭಯೋತ್ಪಾದಕರನ್ನು ಹೊಡೆದುರುಳಿಸಿದ್ದಾರೆ.

ಈ ಮಾರ್ಗದಲ್ಲಿ ಸಂಭವನೀಯ ಭಯೋತ್ಪಾದಕ ದಾಳಿಗಳನ್ನು ತಡೆಯುವಲ್ಲಿ ಇಂದಿನ ಎನ್‌ಕೌಂಟರ್ ದೊಡ್ಡ ಯಶಸ್ಸು ಎಂದು ಪೊಲೀಸರು ಕರೆದಿದ್ದಾರೆ.



ಇಂದು ಗುಂಡಿಕ್ಕಿ ಕೊಲ್ಲಲಾದ ಮೂವರು ಭಯೋತ್ಪಾದಕರ ಪೈಕಿ ಓರ್ವ ಹಿಜ್ಬುಲ್ ಮುಜಾಹಿದ್ದೀನ್ ಭಯೋತ್ಪಾದಕ ಸಂಘಟನೆ ಸೇರಿದವನಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.ಅಶ್ರಫ್ ಮೋಲ್ವಿ (ಹಿಜ್ಬುಲ್ ಮುಜಾಹಿದ್ದೀನಿ ಭಯೋತ್ಪಾದಕ ಸಂಘಟನೆಯ ಅತ್ಯಂತ ಹಳೆಯ ಭಯೋತ್ಪಾದಕರಲ್ಲಿ ಒಬ್ಬರು) ಜೊತೆಗೆ ಇಬ್ಬರು ಭಯೋತ್ಪಾದಕರ ಹತ್ಯೆಯಾಗಿದೆ. ಯಾತ್ರಾ ಮಾರ್ಗದಲ್ಲಿ ಯಶಸ್ವಿ ಕಾರ್ಯಾಚರಣೆಯು ನಮಗೆ ದೊಡ್ಡ ಯಶಸ್ಸು" ಎಂದು ಪೊಲೀಸ್ ಮಹಾನಿರೀಕ್ಷಕ ವಿಜಯ್ ಕುಮಾರ್ ಟ್ವೀಟ್ ಮಾಡಿದ್ದಾರೆ.

# ವಿಜ್ಞಾನ ಸುಳ್ಳು ಹೇಳುವುದಿಲ್ಲ; ಮೋದಿ ಸುಳ್ಳು ಹೇಳುತ್ತಾರೆ– ರಾಹುಲ್ ಟೀಕೆ

**ವದೆಹಲಿ: ಮೇ 06** ಭಾರತದಲ್ಲಿಯೇ ಹೆಚ್ಚು ಕೋವಿಡ್ –19 ಸಾವುಗಳು ವರದಿಯಾಗಿದೆ ಎಂದು ಹೇಳಿರುವ ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್ಒ) ಇತ್ತೀಚಿನ ವರದಿಯ ಬಗ್ಗೆ ನರೇಂದ್ರ ಮೋದಿ ಸರ್ಕಾರದ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದ್ದಾರೆ.

ಕೋವಿಡ್–19 ನಿಂದಾಗಿ 47 ಲಕ್ಷ ಭಾರತೀಯರು ಸಾವನ್ನಪ್ಪಿದ್ದಾರೆ. ಸರ್ಕಾರ ಹೇಳಿಕೊಂಡಂತೆ 4.8 ಲಕ್ಷ ಅಲ್ಲ ಎಂದು ಟ್ವೀಟ್ ಮಾಡಿರುವ ರಾಹುಲ್ ಗಾಂಧಿ ವಿಜ್ಞಾನವು ಸುಳ್ಳು ಹೇಳುವುದಿಲ್ಲ. ಮೋದಿ ಸುಳ್ಳು ಹೇಳುತ್ತಾರೆ ಎಂದು ಹೇಳಿದ್ದಾರೆ. ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳನ್ನು ಗೌರವಿಸಿ. ಕಡ್ಡಾಯವಾಗಿ – 4 ಲಕ್ಷ ಪರಿಹಾರ ನೀಡಿ ಎಂದು ಹೇಳಿದ್ದಾರೆ.

ಗಾಂಧಿಯವರ ಆರೋಪಗಳಿಗೆ



ಪ್ರತಿಕ್ರಿಯಿಸಿದ ಬಿಜೆಪಿ, ವಿಶ್ವ ಆರೋಗ್ಯ ಸಂಸ್ಥೆಯ ದತ್ತಾಂಶ ಮತ್ತು ಕಾಂಗ್ರೆಸ್‌ನ ಮಗ ಇಬ್ಬರದೂ ಲೆಕ್ಕಾಚಾರ ತಪ್ಪಾಗಿದೆ. ಕಾಂಗ್ರೆಸ್ ನಾಯಕ ಕೋವಿಡ್ ಸಾವಿನ ಬಗ್ಗೆ ರಾಜಕೀಯ ಮಾಡುತ್ತಿದ್ದಾರೆ ಎಂದು ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಆರೋಪಿಸಿದ್ದಾರೆ.

2020, 2021 ಈ ಎರಡು ವರ್ಷಗಳಲ್ಲಿ ಭಾರತದಲ್ಲಿ ಕೋವಿಡ್ ನಿಂದಾಗಿ 47.4 ಲಕ್ಷ ಮಂದಿ ಸಾವನ್ನಪ್ಪಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ ವರದಿ ಹೇಳಿದೆ.

# ಬ್ರಿಟಿಷ್ ರಾಜ್ ಇದಕ್ಕಿಂತ ಉತ್ತಮ ಸಂಜಯ್ ರಾವತ್ ಟೀಕೆ

**ಮುಂಬೈ: ಮೇ 06–** ಸಂಸದೆ ನವನೀತ್ ರಾಣಾ ಮತ್ತು ಅವರ ಶಾಸಕ ಪತಿ ರವಿ ರಾಣಾ ದಂಪತಿಗೆ ಜಾಮೀನು ದೊರೆತ ನಂತರ ಶಿವಸೇನೆ ನಾಯಕ ಸಂಜಯ್ ರಾವುತ್ ಮತ್ತೊಮ್ಮೆ 'ಪರಿಹಾರ ಹಗರಣ' (ರಿಲೀಫ್ ಸ್ಕ್ಯಾಮ್) ಆರೋಪ ಮಾಡಿದ್ದಾರೆ.

ಜಾಮೀನು ನೀಡುವಾಗ, ಎಫ್ಐಆರ್‌ನಲ್ಲಿ ದಂಪತಿಗಳ ವಿರುದ್ಧ ದೇಶದ್ರೋಹದ ಯಾವುದೇ ಆಧಾರಗಳಿಲ್ಲ ಎಂದು ನ್ಯಾಯಾಲಯವು ಪ್ರಶ್ನೆಗಳನ್ನು ಎತ್ತಿತು, ಬಳಿಕ ರಾವುತ್ ಈ ಹೇಳಿಕೆಗಳನ್ನು ಪರಿಹಾರ ಹಗರಣ ಎಂದು ಕರೆದರು.

ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಶಿವಸೇನೆ ಸಂಸದ,, ಕೇಂದ್ರವನ್ನು ನೋಡಿದರೆ ಬ್ರಿಟಿಷರ ಆಡಳಿತವೇ ಉತ್ತಮವಾಗಿದೆ ಎಂದು ಅನಿಸುತ್ತಿದೆ. ದೇಶದಲ್ಲಿ ಪರಿಹಾರ ಹಗರಣ ನಡೆಯುತ್ತಿದ್ದು, ಅದರಲ್ಲಿ ಹಲವು ಅಂಶಗಳಿವೆ. ಅಪರಾಧಗಳು ಮತ್ತು ಆರೋಪಗಳು ನಮ್ಮ ವಿರುದ್ಧ ಮಾತ್ರ ಸಾಬೀತಾಗುತ್ತಿವೆ, ಆದರೆ ಇತರರ ವಿರುದ್ಧ ಇದೇ ರೀತಿಯ ಆರೋಪಗಳು ಏಕೆ ಸಾಬೀತಾಗುತ್ತಿಲ್ಲ?





ಎಂದು ಪ್ರಶ್ನೆ ಮಾಡಿದರು.

ಮುಂಬೈ ವಿಶೇಷ ನ್ಯಾಯಾಧೀಶ ಆರ್‌ಎನ್ ರೋಕಡೆ ಅವರು ರಾಣಾ ದಂಪತಿಗೆ ಜಾಮೀನು ನೀಡುವಾಗ ಬುಧವಾರ, ಐಪಿಸಿಯ ಸೆಕ್ಷನ್ 124 ಎ ಅಡಿಯಲ್ಲಿ ದೇಶದ್ರೋಹದ ಪ್ರಕರಣವನ್ನು ಉಲ್ಲಂಘಿಸಿಲ್ಲ ಎಂದು ಮೇಲ್ನೋಟಕ್ಕೆ ತೋರುತ್ತಿದೆ. ಸಂಸದ–ಶಾಸಕ ದಂಪತಿಗಳು ಸಂವಿಧಾನದಲ್ಲಿ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ಮಿತಿಯನ್ನು ನಿಸ್ಸಂದೇಹವಾಗಿ ದಾಟಿದ್ದಾರೆ, ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯದಡಿ ಕೇವಲ ಅವಹೇಳನಕಾರಿ ಅಥವಾ ಆಕ್ಷೇಪಾರ್ಹ ಪದಗಳ ಅವರ ವಿರುದ್ಧ ದೇಶದ್ರೋಹದ ಆರೋಪಕ್ಕೆ ಸಾಕಷ್ಟು ಆಧಾರವಾಗುವುದಿಲ್ಲ ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ಹೇಳಿದೆ.

ರಾಣಾ ದಂಪತಿಯನ್ನು ಮುಂಬೈನ ಖಾರ್ ಪೊಲೀಸರು ಏಪ್ರಿಲ್ 23 ರಂದು ಬಂಧಿಸಿದ್ದರು. ಎರಡು ಕೋಮುಗಳ ನಡುವೆ ದ್ವೇಷವನ್ನು ಹರಡಿದ್ದಕ್ಕಾಗಿ ಅವರ ವಿರುದ್ಧದ ಐಪಿಸಿಯ ಸೆಕ್ಷನ್ 124 ಎ ಮತ್ತು 153 ಎ ಅಡಿಯಲ್ಲಿ ದೇಶದ್ರೋಹದ ಪ್ರಕರಣವನ್ನು ದಾಖಲಿಸಲಾಗಿತ್ತು.

ಶಿವಸೇನಾ ಮುಖ್ಯಸ್ಥ ಮತ್ತು ಮಹಾರಾಷ್ಟ್ರ ಸಿಎಂ ಉದ್ಧವ್ ಠಾಕ್ರೆ ಅವರ ನಿವಾಸವಾದ ಮಾತೋಶ್ರೀ ಹೊರಗೆ ಹನುಮಾನ್ ಚಾಲೀಸಾವನ್ನು ಪಠಿಸುವುದಾಗಿ ದಂಪತಿಗಳು ಘೋಷಿಸಿದ್ದರು. ಇದು ಆಡಳಿತ ಪಕ್ಷದ ಕಾರ್ಯಕರ್ತರನ್ನು ಕೆರಳಿಸಿತ್ತು. ಆದರೆ, ಇದಾದ ನಂತರ ರಾಣಾ ದಂಪತಿ ತಮ್ಮ ಪ್ಲಾನ್ ಅನ್ನು ಮುಂದೂಡಿದ್ದರು. ರಾಣಾ ದಂಪತಿ ಗುರುವಾರ ಜೈಲಿನಿಂದ ಬಿಡುಗಡೆಯಾಗಿದ್ದಾರೆ.

# ಹುರಿಯತ್ ಕಾನ್ಫರೆನ್ಸ್‌ಗೆ ಸಂಬಂಧಿಸಿದ ಸ್ಥಳಗಳ ಮೇಲೆ ದಾಳಿ

**ಜಮ್ಮು: ಮೇ 06 –** ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದಲ್ಲಿ ಪೊಲೀಸರು ಹುರಿಯತ್ ಕಾನ್ಫರೆನ್ಸ್‌ಗೆ ಸಂಬಂಧಿಸಿದ ಮೂರು ಸ್ಥಳಗಳ ಮೇಲೆ ದಾಳಿ ನಡೆಸಿ ಆಕ್ಷೇಪಾರ್ಹ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

2007ರ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಂಜ್ವಾನ್ ಮತ್ತು ದಲ್ಪತಿಯನ್ ಮೊಹಲ್ಲಾದಲ್ಲಿ ದಾಳಿ ನಡೆಸಲಾಗಿತ್ತು ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಎಸ್‌ಪಿ) ಚಂದನ್ ಕೊಹ್ಲಿ ಶುಕ್ರವಾರ ಹೇಳಿದ್ದಾರೆ.

ದಾಳಿಯ ಅವಧಿಯಲ್ಲಿ ಜಮಾತ್–ಎ–ಇಸ್ಲಾಮಿಗೆ ಸಂಬಂಧಿಸಿದ ಕೆಲವು ದೋಷಾರೋಪಣೆ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿ ಕೊಹ್ಲಿ ಹೇಳಿದರು.

# ಆಸ್ತಿ ವಿವಾದ: ಇಬ್ಬರ ಆತ್ಮಹತ್ಯೆ

**ಶ್ರೀಕಾಕುಳಂ: ಮೇ 06–** ಆಂಧ್ರಪ್ರದೇಶದ ಶ್ರೀಕಾಕುಳಂ ಜಿಲ್ಲೆಯ ಎಲಮಂಚಿಲಿ ಗ್ರಾಮದಲ್ಲಿ ಆಸ್ತಿ ವಿವಾದದಿಂದ ಒಂದೇ ಕುಟುಂಬದ ನಾಲ್ವರು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಈ ಸಂದರ್ಭದಲ್ಲಿ, ಮಹಿಳೆ ಮತ್ತು ಅವರ ಮಗಳು ಸಾವನ್ನಪ್ಪಿದರೆ, ಅವರ ಇನ್ನೊಬ್ಬ ಮಗಳು ಮತ್ತು ಮಗ ಗಂಭೀರವಾದ ಸುಟ್ಟಗಾಯಗಳಿಂದ ಬಳಲುತ್ತಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಮೃತರನ್ನು ಚಿಂಟು ಚಿನಮಣಿ (45) ಮತ್ತು ಅವರ ಪುತ್ರಿ ಜಾನ್ವಿ (18) ಎಂದು ಗುರುತಿಸಲಾಗಿದೆ. ಸಹೋದರರಾದ ವೆಂಕಟ ಸಾಯಿ ಸುಶಾಂಕ್ (15) ಮತ್ತು ರಂಜನಿ ಅವರಿಗೆ ತೀವ್ರ ಸುಟ್ಟ ಗಾಯಗಳಾಗಿವೆ.

# ಪ್ರೇಮಲೀಲಾ ಎಸ್.ಹೆಗ್ಡೆ ನಿಧನ: ಗಣ್ಯರ ನುಡಿ ನಮನ

**ಮುಂಬಯಿ (ಆರ್‌ಬಿಐ), ಮೇ.06:** ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಹಿರಿಯ ಸಾಮಾಜಿಕ ಕಾರ್ಯಕರ್ತ, ಮುಂಬಯಿಯಲ್ಲಿನ ಹಿರಿಯ ಕಾಂಗ್ರೆಸ್ಸಿಗ, ಉಡುಪಿ ಕಾರ್ಕಳ ಮೂಲತಃ ಬೋಳ ಶ್ರೀಪಾದ ಹೆಗಡೆ ಇವರ ಧರ್ಮಪತ್ನಿ ಅಂತೆಯೇ (ಸಾಮಾಜಿಕ ಕೆಲಸಕ್ಕಾಗಿ) ಸ್ಥಾಪಿಸಿದ ನಾಗರಿಕರ ಅತ್ಯುನ್ನತ ಪ್ರಶಸ್ತಿಯಾದ ಮಹಾರಾಷ್ಟ್ರ ರಾಜ್ಯದ ವಿಲೇಪಾರ್ಲೆ ಪೂರ್ವ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ, ಹಾಲಿ ಶಿವಸೇನೆ ಪಕ್ಷದ ಧುರೀಣ ಕೃಷ್ಣ ಎಸ್.ಹೆಗ್ಡೆ ಇವರ ಮಾತೃಶೀ ಪ್ರೇಮಲೀಲಾ ಎಸ್.ಹೆಗ್ಡೆ ಬಾರ್ಕೂರು ಇವರು ಇತ್ತೀಚೆಗೆ ಮುಂಬಯಿಯಲ್ಲಿ ನಿಧನರಾದರು.

ಆ ನಿಮಿತ್ತ ಕಳೆದ ಬುಧವಾರ ಅಂಧೇರಿ ಪಶ್ಚಿಮದ ಜುಹು ಇಲ್ಲಿನ ಕ್ಲಬ್ ಮಿಲೇನಿಯಮ್



ಸಭಾಗೃಹದಲ್ಲಿ ಪ್ರಾರ್ಥನಾ ಸಭೆ ನಡೆಸಲಾಯಿತು. ಸಭೆಯಲ್ಲಿ ಭಾರತದ ಮಾಜಿ ಕ್ಯಾಪ್ಟನ್ ದಿಲೀಪ್ ವೆಂಗ್ ಸರ್ಕಾರ್, ಕ್ರಿಕೆಟ್ ಆಲ್ ರೌಂಡರ್ ಕರ್ಸನ್ ಘಾವ್ರಿ, ಸಚಿವ ಧನಂಜಯ್ ಮುಂಡೆ, ನಟ ದಲೀಪ್ ರಾಹುಲ್, ಬಾಲಿವುಡ್ ನಿರ್ದೇಶಕರಾದ ಮಧುರ್ ಭಂಡಾರ್ಕರ್, ವಿಪುಲ್ ಅಮೃತಲಾಲ್ ಶ್ಹಾ, ಸಂಜಯ್ ಚೆಲ್, ಲಾರೆನ್ಸ್ ಡಿಸೋಜಾ ಭಾಗವಹಿಸಿ ನುಡಿನಮನದೊಂದಿಗೆ ಶ್ರದ್ಧಾಂಜಲಿ ಕೋರಿದರು.

ಮಹಾರಾಷ್ಟ್ರ ರಾಜ್ಯದ ಸಚಿವರಾದ ದೀಪಕ್ ಸಾವಂತ್, ಮಾಜಿ ಸಚಿವ ಎನ್. ಸುರೇಶ್ ಶೆಟ್ಟಿ, ರಾಜಕಾರಣಿ ರಮೇಶ್ ಶೇಂಗ್ಡೆ, ಮಾಜಿ ಎಂಎಲ್‌ಸಿ, ವಕ್ತಾರ ಮಹೇಶ್ ತಾಪಸೆ, ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ರಮೇಶ್ ಎನ್.ಶೆಟ್ಟಿ, ಕಾರ್ಯಕರ್ತ ಅನಿಲ್ ಗಲಗಲಿ. ಕ್ರಿಕೆಟಿಗ ದೀಪಕ್ ಜಾಧವ್, ಇಂಡಿಯನ್ ಬಂಟ್ಸ್ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅಧ್ಯಕ್ಷ ಕೆ.ಸಿ.ಶೆಟ್ಟಿ, ಸೆಲೆಬ್ರಿಟಿ ವಕೀಲೆ ಸವೀನಾ ಬೇಡಿ ಸಾಚಾರ್, ಬಿಜೆಪಿ ಗುಜರಾತಿ ವಿಭಾಗದ ಅಧ್ಯಕ್ಷ ಭಾರ್ಗವ್ ಪಟೇಲ್ ಮತ್ತಿತರ ಗಣ್ಯರೂ ಪಾಲ್ಗೊಂಡು ಬಾಷ್ಪಾಂಜಲಿ ಅರ್ಪಿಸಿದರು. ಈ ಸಂದರ್ಭದಲ್ಲಿ ಪ್ರೇಮಲೀಲಾ ಸುಪುತ್ರರಾದ ಕೃಷ್ಣ ಹೆಗ್ಡೆ ಮತ್ತು ಭೂಷಣ ಹೆಗ್ಡೆ ಹಾಗೂ ಕುಟುಂಬ ಸದಸ್ಯರು ಹಾಜರಿದ್ದರು.

# ಗ್ರೇಸ್ ಪಿಂಟೊ ಅವರಿಗೆ 'ಹರ್ ಪವರ್–ಟಾಪ್ ವುಮೆನ್ ಅಚೀವರ್ಸ್ ಆಫ್ ದಿ ನೇಷನ್ 22 ಪ್ರಶಸ್ತಿ'

**ಮುಂಬಯಿ (ಆರ್‌ಬಿಐ), ಮೇ.05:** ದಿ ಬ್ರಾಂಡ್ ಸ್ಟೋರಿ ಟೆಲಿಕಾಸ್ಟ್ ಪಾಲುದಾರ ಸಿಎನ್‌ಬಿಸಿ ಟಿವಿ18 ನೊಂದಿಗೆ ಆಯೋಜಿಸಿದ್ದ ಇಂಡಿಯನ್ ಬ್ರಾಂಡ್ ಮತ್ತು ಲೀಡರ್‌ಶಿಪ್ ಕಾನ್‌ಕ್ಲೇವ್ 2022 ಸಮಾವೇಶ ಕಳೆದ ಶನಿವಾರ ನವದೆಹಲಿಯ ತಾರಾ ಹೋಟೇಲು ಸಭಾಗೃಹದಲ್ಲಿ ನಡೆಸಲ್ಪಟ್ಟಿತು.

ಈ ಭವ್ಯ ಸಮಾರಂಭದಲ್ಲಿ ಉಪಸ್ಥಿತ ಪ್ರಸಿದ್ಧ ಅಭಿನೇತ ಮತ್ತು ಲೇಖಕ ಕಬೀರ್ ಬೇಡಿ ಮತ್ತು ವಿನಿತ್ ಗೋಯೆಂಕಾ ಅವರು ರಾಯಾನ್ ಇಂಟರ್‌ನ್ಯಾಶನಲ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ನ ವ್ಯವಸ್ಥಾಪಕ ನಿರ್ದೇಶಕಿ ಮೇಡಂ (ಡಾ|) ಗ್ರೇಸ್ ಪಿಂಟೊ ಅವರಿಗೆ 'ಹರ್ ಪವರ್ ಅವಾರ್ಡ್' ಪ್ರದಾಸಿ ಅಭಿನಂದಿಸಿದರು.

ಲೇಖಕ ಮತ್ತು ಬಿಜೆಪಿ ವಕ್ತಾರ, ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಉಕ್ಕಿನ ರಾಜ್ಯ ಸಚಿವ ಫಗ್ಗನ್ ಸಿಂಗ್ ಕುಲಸ್ತೆ ಮತ್ತು




ದೇಶಾದ್ಯಂತದ ಖ್ಯಾತ ಉದ್ಯಮಿಗಳ ಸಮ್ಮುಖದಲ್ಲಿ ಮೇಡಂ ಪಿಂಟೊ ಅವರಿಗೆ ಪ್ರಶಸ್ತಿ ಪ್ರದಾನಿಸಿ ಗೌರವಿಸಲಾಯಿತು.

ಪ್ರಶಸ್ತಿಗೆ ಉತ್ತರಿಸಿದ ಮೇಡಂ ಗ್ರೇಸ್ ಪಿಂಟೋ, ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ನಮ್ಮ ಪ್ರಯತ್ನಗಳನ್ನು ಗುರುತಿಸಿದ್ದಕ್ಕಾಗಿ ನಾವು ಟಿಬಿಎಸ್‌ಗೆ ಕೃತಜ್ಞರಾಗಿರುತ್ತೇವೆ. ನಮ್ಮ ಮೇಲೆ ನಿರಂತರ ಅನುಗ್ರಹ ಮತ್ತು ಆಶೀರ್ವಾದಗಳಿಗಾಗಿ ನಾವು ಲಾರ್ಡ್ ಜೀಸಸ್ ಕ್ರೈಸ್ಟ್ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಒಂದೇ ಸಮಾನತೆ, ಸಾಮರಸ್ಯದಂತೆ, ನಾವು ಜಾಗತಿಕ ನಾಯಕರನ್ನು ಬೆಳೆಸುವುದನ್ನು ಮುಂದುವರಿಸುತ್ತೇವೆ ಮತ್ತು ಗುಣಮಟ್ಟದ ಶಿಕ್ಷಣ ಮತ್ತು ಸಾಮಾಜಿಕ ಪ್ರಯತ್ನಗಳ ಮೂಲಕ ನಮ್ಮ ಸಮಾಜದ ಸುಧಾರಣೆಗಾಗಿ ಕೆಲಸ ಮಾಡುತ್ತೇವೆ ಎಂದರು.

ಬ್ರ್ಯಾಂಡ್ ಸ್ಟೋರಿ ಪ್ರಶಸ್ತಿಗಳು ತಮ್ಮ ವಲಯದಲ್ಲಿ ಪ್ರಚಂಡ ಪ್ರಭಾವ ಮತ್ತು ನಾವೀನ್ಯತೆಯನ್ನು ಮಾಡುವ ಮೂಲಕ ತಮಗಾಗಿ ವಿಶೇಷ ಸ್ಥಾನವನ್ನು ಕೆತ್ತಿರುವ ಭಾರತದ ಪ್ರಮುಖ ಬ್ರ್ಯಾಂಡ್‌ಗಳು ಮತ್ತು ನಾಯಕರನ್ನು ಅಭಿನಂದಿಸುವ ಗುರಿಯನ್ನು ಹೊಂದಿವೆ. 'ಹರ್ ಪವರ್' ಪ್ರಶಸ್ತಿಯನ್ನು ವಸ್ತು ಮತ್ತು ಪ್ರಭಾವದ ಮಹಿಳೆಯರಿಗೆ ನೀಡಲಾಗುತ್ತದೆ, ಹೀಗಾಗಿ ವ್ಯಾಪಾರ, ಕಲೆಗಳು, ಸಾಮಾಜಿಕ ಕಾರಣಗಳು ಮತ್ತು ಹಿಂದುಳಿದವರಿಗೆ ಸಬಲೀಕರಣಕ್ಕೆ ಅವರು ನೀಡಿದ ಕೊಡುಗೆಯನ್ನು ಮನವರಿಸಿ ಈ ಪ್ರಶಸ್ತಿ ಪ್ರದಾನಿಸಲಾಗುತ್ತಿದೆ ಎಂದು ದಿ ಬ್ರಾಂಡ್ ಸ್ಟೋರಿ ವಕ್ತಾರರು ತಿಳಿಸಿದರು.

# ವಿವಾಹ ಜೀವನಕ್ಕೆ ಕಾಲಿಟ್ಟ ಸಂಗೀತ ನಿರ್ದೇಶಕ ಎ. ಆರ್ ರೆಹಮಾನ್ ಪುತ್ರಿ

**ಕೋಲ್ಕತ್ತಾ: ಮೇ 06 –** ಗ್ರ್ಯಾಮಿ ಪ್ರಶಸ್ತಿ ವಿಜೇತ, ಖ್ಯಾತ ಸಂಗೀತ ನಿರ್ದೇಶಕ ಎ. ಆರ್ ರೆಹಮಾನ್ ಅವರ ಪುತ್ರಿ ಖತೀಜಾ ರೆಹಮಾನ್ ಇಂದು ವಿವಾಹ ಜೀವನಕ್ಕೆ ಕಾಲಿಟ್ಟಿದ್ದಾರೆ.

ಪುತ್ರಿ ಖತೀಜಾ ರೆಹಮಾನ್ ಆಡಿಯೋ ಇಂಜಿನಿಯರ್ ರಿಯಾಸ್ದೀನ್ ಶೇಕ್ ಮೊಹಮ್ಮದ್ ಅವರನ್ನು ವರಿಸಿದ್ದಾರೆ. ಈ ಕುರಿತು ಮಗಳ ಮದುವೆಯ ಫೋಟೋವನ್ನು ಇನ್ ಸ್ಟಾಗ್ರಾಮ್ ನಲ್ಲಿ ಹಂಚಿಕೊಳ್ಳುವ ಮೂಲಕ ಬಹಿರಂಗಪಡಿಸಿದ್ದಾರೆ.

ಇನ್ ಸ್ಟಾಗ್ರಾಮ್ ನಲ್ಲಿ ಖತೀಜಾ ಮತ್ತು ರಿಯಾಸ್ದೀನ್ ಅವರ ವಿವಾಹದ ಚಿತ್ರವನ್ನು ಹಂಚಿಕೊಂಡು, ಸರ್ವಶಕ್ತನು ದಂಪತಿಗಳನ್ನು ಆಶೀರ್ವದಿಸಲಿ



ನಿಮ್ಮ ಶುಭ ಹಾರೈಕೆಗಳು ಮತ್ತು ಪ್ರೀತಿಗೆ ಮೊದಲೇ ಧನ್ಯವಾದಗಳು ಎಂದು ಹೇಳಿದ್ದಾರೆ.

ಮದುವೆ ಸಮಾರಂಭದ ಕುಟುಂಬದ ಫೋಟೋದಲ್ಲಿ ಎಆರ್ ರೆಹಮಾನ್ ಅವರ ದಿವಂಗತ ತಾಯಿಯ ಭಾವಚಿತ್ರವನ್ನು ವೇದಿಕೆಯ ಮೇಲೆ ಇರಿಸಲಾಗಿದೆ. ಖತೀಜಾ ಅವರು ತಮ್ಮ ಮದುವೆಯ ಫೋಟೋವನ್ನು ಇನ್ ಸ್ಟಾಗ್ರಾಮ್ ನಲ್ಲಿ ಶೇರ್ ಮಾಡಿದ್ದು, ನನ್ನ ಜೀವನದಲ್ಲಿ ಅತ್ಯಂತ ನಿರೀಕ್ಷಿತ ದಿನ. ನನ್ನ ವ್ಯಕ್ತಿ ರಿಯಾಸ್ದೀನ್ ಅವರನ್ನು ವಿವಾಹವಾದೆ ಎಂದು ಹೇಳಿದ್ದಾರೆ.

# ಅಂತರ್ ಧರ್ಮೀಯ ಮದುವೆ ತಂದ ದುರಂತ

**ಹೈದರಾಬಾದ್: ಮೇ 06 –**ಹೈದರಾಬಾದ್‌ನ ಜನನಿಬಿಡ ರಸ್ತೆಯಲ್ಲಿ ತನ್ನ ಹಿಂದೂ ಪತಿಯನ್ನ ತನ್ನ ಸೋದರನೇ ಕೊಚ್ಚಿ ಕೊಚ್ಚಿ ಹತ್ಯೆ ಮಾಡಿದ ಭೀಕರ ಘಟನೆಯ ನೋವನ್ನ ಮೃತನ ಮುಸ್ಲಿಂ ಪತ್ನಿ ಬಿಚ್ಚಿಟ್ಟಿದ್ದಾರೆ.

ನನ್ನ ಗಂಡನ ಜೀವವನ್ನ ಜನ ಉಳಿಸಲು ಅವಕಾಶವಿತ್ತು. ಅವರನ್ನು ಬದುಕಿಸಿಕೊಡುವಂತೆ ರಸ್ತೆಯಲ್ಲಿ ನಿಂತಿದ್ದ ಜನರನ್ನ ನಾನು ಪರಿಪರಿಯಾಗಿ ಬೇಡಿದೆ. ಆದರೆ ಯಾರೂ ಮುಂದೆ ಬರಲಿಲ್ಲ. ನಾನು ಅವರನ್ನು ಸಹಾಯಕ್ಕಾಗಿ ಬೇಡುತ್ತಾ ಸಮಯ ವ್ಯರ್ಥ ಮಾಡಬೇಕಾಯಿತು ಎಂದು ದುರಂತದ ನೋವನ್ನ ಹೊರಹಾಕಿದ್ದಾರೆ. ನನ್ನ ಅಣ್ಣನೇ ತಮ್ಮನ್ನು ಹತ್ಯೆ ಮಾಡುತ್ತಿರುವುದಾಗಿ ನನ್ನ ಪತಿಗೆ ತಿಳಿದಿರಲೇ ಇಲ್ಲ ಎಂದು ಸೈಯದ್ ಅಶ್ರಿನ್ ಸುಲ್ತಾನ ಹೇಳಿದ್ದಾರೆ.

ಮುಸ್ಲಿಂ ಯುವತಿ ಸುಲ್ತಾನಾ ಅವರ ಪತಿ ಬಿ. ನಾಗರಾಜು ಯುವ



ತಿಯ ಕುಟುಂಬದವರ ವಿರೋಧದ ನಡುವೆ ಮದುವೆಯಾಗಿದ್ದರು.ಗುರುವಾರ ಮೊದಲ ಬಾರಿಗೆ ಸುಲ್ತಾನ ತನ್ನ ಪತಿ ಮನೆಗೆ ಬೈಕ್ ನಲ್ಲಿ ಹೋಗುತ್ತಿದ್ದಾಗ, ಆಕೆಯ ಅಣ್ಣ ಮತ್ತು ಸೋದರನ ಗೆಳೆಯ ಇಬ್ಬರನ್ನೂ ಅಡ್ಡಗಟ್ಟಿ, ನಾಗರಾಜುನನ್ನ ರಾಡ್ ನಿಂದ ಮನಬಂದಂತೆ ಥಳಿಸಿ ಹತ್ಯೆ ಮಾಡಿದ್ದರು.

ಈ ಘಟನೆಯನ್ನು ಮಾಧ್ಯಮವೊಂದಕ್ಕೆ ವಿವರಿಸಿದ ಸುಲ್ತಾನಾ, "ನಾನು ಮತ್ತು ನನ್ನ ಪತಿ ಬೈಕಿನಲ್ಲಿ ಹೋಗುತ್ತಿದ್ದೆವು, ರಸ್ತೆ ದಾಟಲು ಸ್ವಲ್ಪ ವೇಗವನ್ನು ಕಡಿಮೆ ಮಾಡುತ್ತಿದ್ದಂತೆ ಎರಡು ಬೈಕುಗಳು ಬಂದವು. ಅದರಲ್ಲಿ ನನ್ನ ಸಹೋದರನೂ ಇದ್ದದ್ದು ನನಗೆ ತಿಳಿದಿರಲಿಲ್ಲ. ಅವರು ನನ್ನ ಗಂಡನನ್ನು ತಳ್ಳಿದಾಗ ಅವರು ಬಿದ್ದರು. ನಂತರ ಅವರು ಹೊಡೆಯಲು ಪ್ರಾರಂಭಿಸಿದರು. ನಾನು ಅವರನ್ನು ರಕ್ಷಿಸಲು ಪ್ರಯತ್ನಿಸಿದಾಗ, ನನ್ನ ಸಹೋದರನ ಸ್ನೇಹಿತರು ನನ್ನನ್ನು ತಳ್ಳಿದರು, ನಾನು ಸಹಾಯಕ್ಕಾಗಿ ಬೇಡಿಕೊಂಡೆ ಆದರೆ ಜನ ನೆರವಾಗುವ ಬದಲು ವೀಡಿಯೊಗಳನ್ನು ಮಾಡುತ್ತಿದ್ದರು" ಎಂದು 21 ವರ್ಷದ ಸುಲ್ತಾನಾ ಹೇಳಿದರು.


ಕೆಲವೇ ಕ್ಷಣಗಳಲ್ಲಿ ಎಲ್ಲವೂ ಮುಗಿದುಹೋಯಿತು. ಆದರೆ ರಸ್ತೆಯಲ್ಲಿದ್ದ ಜನರಿಗೆ ಮಧ್ಯಪ್ರವೇಶಿಸಲು ಮತ್ತು ದಾಳಿಯನ್ನು ನಿಲ್ಲಿಸಲು ಸಾಕಷ್ಟು ಸಮಯವಿತ್ತು ಎಂದು ಹೇಳಿದರು.

# ದೆಹಲಿ: ಮಕ್ಕಳಿಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪಿ ಬಂಧನ

**ನವದೆಹಲಿ:ಮೇ 06–** ದೆಹಲಿ ಮುನ್ಸಿಪಲ್ ಕಾರ್ಪೊರೇಷನ್ ಅಥವಾ ಈಶಾನ್ಯ ದೆಹಲಿಯ ಎಂಸಿಡಿ ಶಾಲೆಯಲ್ಲಿ ಇಬ್ಬರು ಹುಡುಗಿಯರನ್ನು ಕಿರುಕುಳ ನೀಡಿದ ಆರೋಪದ ಮೇಲೆ 40 ವರ್ಷದ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ. ಗುರುವಾರ ಬಿಡುಗಡೆಯಾದ ರೇಖಾಚಿತ್ರದ ಸಹಾಯದಿಂದ ಆರೋಪಿಯನ್ನ ಬಂಧಿಸಲಾಗಿದೆ.

ಬಾಲಕಿಯರು ನೀಡಿದ ವಿವರಗಳ ಪ್ರಕಾರ ಪೊಲೀಸರು ವ್ಯಕ್ತಿಯ ರೇಖಾಚಿತ್ರವನ್ನು ಬಿಡುಗಡೆ ಮಾಡಿದ್ದರು.

ಎಪ್ರಿಲ್ 30ರಂದು ಈ ಘಟನೆ ನಡೆದಿದ್ದು, ಶಾಲೆಯ ಅಸೆಂಬ್ಲಿ ಮುಗಿಸಿ ಶಿಕ್ಷಕರಿಗಾಗಿ ಕಾಯುತ್ತಿದ್ದಾಗ ಅಪರಿಚಿತ ವ್ಯಕ್ತಿಯೊಬ್ಬರು ಶಾಲೆಯ ತರಗತಿಗೆ ನುಗ್ಗಿ ಮಕ್ಕಳೊಂದಿಗೆ ಅನುಚಿತವಾಗಿ ವರ್ತಿಸಿದ್ದ.



ಈ ಕುರಿತು ಮಾತನಾಡಿರುವ ದೆಹಲಿಯ ಡೆಪ್ಯೂಟಿ ಸ್ಪೀಕರ್ ರಾಖಿ ಬಿರ್ಲಾ, ಅಪರಿಚಿತ ವ್ಯಕ್ತಿಯೊಬ್ಬರು ಶಾಲಾ ಆವರಣಕ್ಕೆ ನುಗ್ಗಿ ಶಾಲಾ ಅವಧಿಯಲ್ಲಿ ಇಂತಹ ಕೃತ್ಯ ನಡೆಸಿರುವುದು ಅತ್ಯಂತ ನಾಚಿಕೆಗೇಡಿನ ಸಂಗತಿ ಎಂದು ಹೇಳಿದ್ದಾರೆ.

3–4 ದಿನಗಳವರೆಗೆ ಎಂಸಿಡಿಯಾಗಲೀ ಅಥವಾ ದೆಹಲಿ ಪೊಲೀಸರು ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ,. ದೆಹಲಿ ಮಹಿಳಾ ಆಯೋಗವು ಅವರಿಗೆ ನೋಟಿಸ್ ನೀಡಿದ ನಂತರ ಕ್ರಮ ತೆಗೆದುಕೊಳ್ಳಲಾಗಿದೆ ಎಂದರು.

ಏಪ್ರಿಲ್ 30 ರಂದು ದೆಹಲಿ ಮುನ್ಸಿಪಲ್ ಕಾರ್ಪೊರೇಷನ್ ಶಾಲೆಯಲ್ಲಿ ಬೆಳಗ್ಗೆ ಅಸೆಂಬ್ಲಿ ಮುಗಿದ ನಂತರ ವಿದ್ಯಾರ್ಥಿಗಳು ಶಿಕ್ಷಕರಿಗಾಗಿ ಕಾಯುತ್ತಿರುವಾಗ ಅಪರಿಚಿತ ವ್ಯಕ್ತಿಯೊಬ್ಬ ತರಗತಿಗೆ ಪ್ರವೇಶಿಸಿದ್ದ. ಈತ ಇಬ್ಬರು ಹುಡುಗಿಯರ ಬಟ್ಟೆ ತೆಗೆದು, ನಂತರ ತರಗತಿಯ ಬಾಗಿಲು ಮುಚ್ಚಿ ವಿದ್ಯಾರ್ಥಿಗಳ ಮುಂದೆ ಮೂತ್ರ ವಿಸರ್ಜನೆ ಮಾಡಿದ್ದ. ವಿದ್ಯಾರ್ಥಿಗಳು ಘಟನೆಯ ಬಗ್ಗೆ ಶಿಕ್ಷಕರು ಮತ್ತು ಪ್ರಾಂಶುಪಾಲರಿಗೆ ತಿಳಿಸಿದಾಗ, ಅವರು ಮೌನವಾಗಿರಿ ಮತ್ತು ಅದನ್ನು ಮರೆತುಬಿಡಿ ಎಂದು ಹೇಳಿದರು ಎಂದು ದೆಹಲಿ ಮಹಿಳಾ ಆಯೋಗದ ಮುಖ್ಯಸ್ಥೆ ಸ್ವಾತಿ ಮಲ್ಲಿವಾಲ್ ತಮ್ಮ ದೂರಿನಲ್ಲಿ ತಿಳಿಸಿದ್ದರು.

# ಪಶ್ಚಿಮ ಬಂಗಾಳ: ಮತ್ತೊಬ್ಬ ಬಿಜೆಪಿ ಕಾರ್ಯಕರ್ತನ ಸಂಶಯಾಸ್ಪದ ಸಾವು

**ಕೋಲ್ಕತ್ತಾ: ಮೇ 06 –** ಕೇಂದ್ರ ಗೃಹ ಸಚಿವ ಅಮಿತ್ ಶಾ ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡುತ್ತಿರುವ ಸಂದರ್ಭದಲ್ಲಿ ಕೋಲ್ಕತ್ತಾದ ಚಿತ್ಪುರ್–ಕೋಸಿಪೋರ್ ಪ್ರದೇಶದಲ್ಲಿ ಭಾರತೀಯ ಜನತಾ ಪಕ್ಷದ ಕಾರ್ಯಕರ್ತನೊಬ್ಬ ಶವವಾಗಿ ಪತ್ತೆಯಾಗಿದ್ದಾನೆ.

ಮೃತ ಯುವಕನನ್ನು ಅರ್ಜುನ್ ಚೌರಾಸಿಯಾ ಎಂದು ಗುರುತಿಸಲಾಗಿದೆ. ಈತ ಘೋಷ್ ಬಗಾನ್ ರೈಲ್ವೆ ಯಾರ್ಡ್‌ನಲ್ಲಿರುವ ಕಟ್ಟಡದ ಸೀಲಿಂಗ್ ಫ್ಯಾನ್ ಗೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾನೆ. ಅಮಿತ್ ಶಾ ಅವರನ್ನು ಸ್ವಾಗತಿಸಲು ಅವರು ಬೈಕ್ ರ್ಯಾಲಿಯನ್ನು ಮುನ್ನಡೆಸಲು ತಯಾರಿ ನಡೆಸಿದ್ದರು.

ಶಾ ಕೋಲ್ಕತ್ತಾಗೆ ಭೇಟಿ ನೀಡುವ ಮುನ್ನ ಚೌರಾಸಿಯಾ ಅವರನ್ನು



ಹತ್ಯೆ ಮಾಡಲಾಗಿದೆ ಎಂದು ಬಿಜೆಪಿ ಆರೋಪಿಸಿದೆ. ಆತ ಬಿಜೆಪಿ ಕಾರ್ಯಕರ್ತ ಎಂದು ಹೇಳಿದ ಪ್ರತ್ಯಕ್ಷದರ್ಶಿಯೊಬ್ಬರು ಇದು ಖಂಡಿತವಾಗಿಯೂ ಕೊಲೆಯಾಗಿದೆ. ಕೊಲೆಯ ನಂತರ ಅವನನ್ನು ನೇಣು ಹಾಕಲಾಯಿತು. ಅವನ ಕಾಲುಗಳು ನೆಲವನ್ನು ಸ್ಪರ್ಶಿಸುತ್ತಿದ್ದವು ಎಂದು ಹೇಳಿದರು.

ಉತ್ತರ ಕೋಲ್ಕತ್ತಾ ಜಿಲ್ಲಾ ಬಿಜೆಪಿ ಅಧ್ಯಕ್ಷ ಕಲ್ಯಾಣ್ ಚೌಬೆ, ಚೌರಾಸಿಯಾ ಅವರು ಸಕ್ರಿಯ ಕಾರ್ಯಕರ್ತರಾಗಿದ್ದರು ಮತ್ತು ಕೋಲ್ಕತ್ತಾದ ಬಿಜೆಪಿಯ ಯುವ ಘಟಕದ ಉಪಾಧ್ಯಕ್ಷರಾಗಿದ್ದರು. ತುಂಬಾ ದಕ್ಷರಾಗಿದ್ದರು ಮತ್ತು ಗೃಹ ಸಚಿವ ಅಮಿತ್ ಶಾ ಅವರನ್ನು ಕೋಲ್ಕತ್ತಾಕ್ಕೆ ಸ್ವಾಗತಿಸಲು ಅವರು 200 ಸದಸ್ಯರ ಬೈಕ್ ರ್ಯಾಲಿಯನ್ನು ಮುನ್ನಡೆಸಲು ಯೋಜಿಸಿದ್ದೇವು. ಆದರೆ ಇಂದು ಬೆಳಗ್ಗೆ ಶವವಾಗಿ ಸಿಕ್ಕಿದ್ದಾರೆ ಎಂದು ಹೇಳಿದರು.

ಅರ್ಜುನ್ ಚೌರಾಸಿಯಾ ಅವರನ್ನು ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರು ಹತ್ಯೆ ಮಾಡಿದ್ದಾರೆ ಎಂದು ಬಿಜೆಪಿ ಆರೋಪಿಸಿದೆ. ಆರೋಪವನ್ನು ತಳ್ಳಿಹಾಕಿದ ಟಿಎಂಸಿ ಸಂಸದ ಸಂತಾನು ಸೇನ್, ಆರೋಪಗಳು ಆಧಾರರಹಿತವಾಗಿವೆ. ಪೊಲೀಸರು ಈ ವಿಷಯವನ್ನು ತನಿಖೆ ಮಾಡಲಿ ಎಂದು ಹೇಳಿದರು

# ಮಹಿಳಾ ಉದ್ಯೋಗಿಗೆ ಲೈಂಗಿಕ ಕಿರುಕುಳ; ಆರೋಪಿ ಬಂಧನ

**ಮುಂಬೈ: ಮೇ 06 (ಯು.ಎನ್.ಐ.)** ಉಪನಗರ ಬಾಂದ್ರಾದಲ್ಲಿರುವ ಕ್ಲಬ್ ನಲ್ಲಿ 44 ವರ್ಷದ ಬ್ರಿಟಿಷ್ ಮಹಿಳೆಗೆ ಕಿರುಕುಳ ನೀಡಿದ ಆರೋಪದ ಮೇಲೆ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಮಂಗಳವಾರ ರಾತ್ರಿ 11.30ರ ಸುಮಾರಿಗೆ ಈ ಘಟನೆ ಸಂಭವಿಸಿದ್ದು, ಬ್ರಿಟನ್ ರಾಯಭಾರಿ ಕಚೇರಿಯಲ್ಲಿ ಕೆಲಸ ಮಾಡುತ್ತಿರುವ ಮಹಿಳೆ ತನ್ನ ಪತಿ ಮತ್ತು ಸ್ನೇಹಿತರೊಂದಿಗೆ ಕ್ಲಬ್‌ಗೆ ತೆರಳಿದ್ದ ವೇಳೆ ಕಿರುಕುಳ ನೀಡಿರುವ ವರದಿಯಾಗಿದೆ.

"ಮಹಿಳೆ ವಾಶ್‌ರೂಮ್‌ಗೆ ಹೋದಾಗ, 35 ವರ್ಷದ ಆರೋಪಿ ಆಕೆಗೆ ಕಿರುಕುಳ ನೀಡಿದ್ದಾನೆ. ಮಹಿಳೆ ತನ್ನ ಟೇಬಲ್‌ಗೆ ಹಿಂತಿರುಗಿ ಘಟನೆಯನ್ನು ತನ್ನ ಪತಿ ಮತ್ತು ಸ್ನೇಹಿತರಿಗೆ ವಿವರಿಸಿದಳು, ನಂತರ ಅವರು ಆರೋಪಿಯ ಕಡೆಗೆ ಓಡಿ ಅವನನ್ನು ಹಿಡಿದಿದ್ದಾರೆ."

ಇದೇ ವೇಳೆ ಘಟನೆ ಕುರಿತು ಪೊಲೀಸರಿಗೆ ಮಾಹಿತಿ ನೀಡಿದ್ದು, ಬಳಿಕ ತಂಡವೊಂದು ಸ್ಥಳಕ್ಕೆ ಧಾವಿಸಿ ಆರೋಪಿಯನ್ನು ವಶಕ್ಕೆ ತೆಗೆದುಕೊಂಡಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದರು.

ಘನಶ್ಯಾಮ್ ಲಾಲ್‌ಚಂದ್ ಯಾದವ್ ಎಂದು ಗುರುತಿಸಲಾದ ಆರೋಪಿಯನ್ನು ಭಾರತೀಯ ದಂಡ ಸಂಹಿತೆ ಐಪಿಸಿ ಸೆಕ್ಷನ್ 354, 354ಂ ಮತ್ತು 509 ರ ಅಡಿ ಪ್ರಕರಣ ದಾಖಲಿಸಲಾಗಿದೆ. ಆರೋಪಿ ಎಂಬಿಎ ಪದವೀಧರರಾಗಿದ್ದು ವೃತ್ತಿಪರರಾಗಿದ್ದಾನೆ ಎಂದು ತಿಳಿಸಿದ್ದಾರೆ.

# ಆದಿಶಂಕರರ ಅದ್ವೈತ ತತ್ವವೇ ಭಾರತದ ಆಧಾರಸ್ತಂಭ: ಸಚಿವ ಡಾ.ಅಶ್ವತ್ಥನಾರಾಯಣ ಅಭಿಮತ

**ಬೆಂಗಳೂರು,** ಮೇ6–ಎಂಟನೇ ಶತಮಾನದಲ್ಲಿ ಆದಿಶಂಕರಾಚಾರ್ಯರು ಪ್ರತಿಪಾದಿಸಿದ ಅದ್ವೈತ ತತ್ವವೇ ಇಂದಿಗೂ ಭಾರತವನ್ನು ಒಗ್ಗೂಡಿಸಿರುವ ಆಧಾರಸ್ತಂಭವಾಗಿದೆ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ ಎನ್ ಅಶ್ವತ್ಥ ನಾರಾಯಣ ಹೇಳಿದ್ದಾರೆ. ಮಲ್ಲೇಶ್ವರಂನಲ್ಲಿರುವ ಆದಿಶಂಕರಾಚಾರ್ಯ ಉದ್ಯಾನದಲ್ಲಿ ಶುಕ್ರವಾರ ನಡೆದ ಶಂಕರ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಅವರು, ಶಂಕರಾಚಾರ್ಯರ ಪ್ರತಿಮೆಗೆ ಪುಷ್ಪ ಸಮರ್ಪಣೆ ಮಾಡಿ, ಗೌರವ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ಶಂಕರರು ಕಟ್ಟಿದ ತತ್ವಗಳು ಜ್ಞಾನಮಾರ್ಗದ ಶಿಖರಗಳಾಗಿವೆ.

**ಕೇರಳದಿಂದ ಹಿಡಿದು ಕಾಶ್ಮೀರದ ತನಕ ದೇಶವನ್ನು ಸಾಂಸ್ಕೃತಿಕ ಮಾದರಿಯಲ್ಲಿ ಒಗ್ಗೂಡಿಸಿದ ಹಿರಿಮೆ ಅವರಿಗೆ ಸಲ್ಲುತ್ತದೆ. ಆ ಕಾಲಘಟ್ಟದಲ್ಲಿ ಶಂಕರರು ಇಲ್ಲದಿದ್ದರೆ ದೇಶ ಛಿದ್ರವಾಗುತ್ತಿತ್ತು ಎಂದು ಸಚಿವರು ಬಣ್ಣಿಸಿದರು.**

ಜತೆಗೆ, ಪ್ರತಿಗಾಮಿ ಶಕ್ತಿಗಳನ್ನು ಅವು ಮಣಿಸುವಂತಿವೆ ಎಂದರು.



ಕೇರಳದಿಂದ ಹಿಡಿದು ಕಾಶ್ಮೀರದ ತನಕ ದೇಶವನ್ನು ಸಾಂಸ್ಕೃತಿಕ ಮಾದರಿಯಲ್ಲಿ ಒಗ್ಗೂಡಿಸಿದ ಹಿರಿಮೆ ಅವರಿಗೆ ಸಲ್ಲುತ್ತದೆ. ಆ ಕಾಲಘಟ್ಟದಲ್ಲಿ ಶಂಕರರು ಇಲ್ಲದಿದ್ದರೆ ದೇಶ ಛಿದ್ರವಾಗುತ್ತಿತ್ತು ಎಂದು ಸಚಿವರು ಬಣ್ಣಿಸಿದರು.

ಕಾರ್ಯಕ್ರಮದಲ್ಲಿ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸಚ್ಚಿದಾನಂದಮೂರ್ತಿ, ಬ್ರಾಹ್ಮಣ ಸಭಾದ ಮುಖಂಡರಾದ ರಘುನಾಥ, ಸುಧೀಂದ್ರ, ಶೃಂಗೇರಿ ಶಂಕರಮಠದ ಮಲ್ಲೇಶ್ವರ ಶಾಖೆಯ ವಸಂತರಾವ್ ಸೇರಿದಂತೆ ಸ್ಥಳೀಯ ಮುಖಂಡರು ಮತ್ತು ಅಪಾರ ಸಂಖ್ಯೆಯ ಭಕ್ತಾದಿಗಳು ಪಾಲ್ಗೊಂಡಿದ್ದರು.

ಜಯಂತಿ ಕಾರ್ಯಕ್ರಮದ ನಂತರ ಸಚಿವರು ಉದ್ಯಾನವನದಲ್ಲಿ ಸಂಚರಿಸಿ ಅಲ್ಲಿನ ಮೂಲಸೌಲಭ್ಯಗಳನ್ನು ಪರಿಶೀಲಿಸಿದರು.

## ಅಶ್ವತ್ಥನಾರಾಯಣ್ ವಿರುದ್ಧದ ಆರೋಪಗಳಿಗೆ ಸಾಕ್ಷಿ ಕೊಡಿ: ಸಚಿವ ಗೋಪಾಲಯ್ಯ ಸವಾಲು

**ಬೆಂಗಳೂರು, ಮೇ 6**–ಪಿಎಸ್ ಐ ನೇಮಕಾತಿ ಅವ್ಯವಹಾರದಲ್ಲಿ ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವಥ್ ನಾರಾಯಣ ಮತ್ತು ಅವರ ಸಂಬಂಧಿ ಭಾಗಿಯಾಗಿರುವ ಕುರಿತು ಸಾಕ್ಷಿಗಳನ್ನು ಒದಗಿಸಲಿ ಎಂದು ಅಬಕಾರಿ ಸಚಿವ ಕೆ.ಗೋಪಾಲಯ್ಯ ವಿರೋಧ ಪಕ್ಷಗಳ ನಾಯಕರನ್ನು ಸವಾಲು ಹಾಕಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಶ್ವಥ್ ನಾರಾಯಣ ಅವರ ರಾಜಕೀಯ ಬೆಳವಣಿಗೆಯನ್ನು ಸಹಿಸದೇ ಕೆಲವರು ಮಾಡಿರುವ ಪಿತೂರಿಯಿದು. ಪುರಾವೆಗಳು ಇದ್ದರೆ ಅವರು ನ್ಯಾಯಾಲಯಕ್ಕೆ ಹೋಗಲಿ ಎಂದರು.

ಈ ಹಿಂದಿನ ಸರ್ಕಾರದಲ್ಲಿ ಇದೇ ರೀತಿ ನಡೆದಿರುವ ನೇಮಕಾತಿ ಅಕ್ರಮಗಳ ಬಗ್ಗೆಯೂ ತನಿಖೆಯಾಗಬೇಕು. ಈಗಾಗಲೇ ಬಂಧಿತನಾಗಿರುವ ತುಮಕೂರು ಯುವಕ ಮತ್ತು ಆತನ ಸಹೋದರ ನಾವು ಅಶ್ವಥ್ ನಾರಾಯಣ್ ಅವರನ್ನು ನೋಡಿಯೇ ಇಲ್ಲ ಎನ್ನುತ್ತಿದ್ದಾರೆ. ಆದರೆ ವಿರೋಧ ಪಕ್ಷಗಳ ನಾಯಕರು ವಿನಾಕಾರಣ ಆರೋಪ ಮಾಡುತ್ತಿದ್ದಾರೆ. ಅಶ್ವಥ್ ನಾರಾಯಣ ಅವರು ಭಾಗಿಯಾಗಿರುವ ಕುರಿತು ಸಾಕ್ಷಿ ಇದ್ದರೆ ನೀಡಲಿ ಎಂದು ಒತ್ತಾಯಿಸಿದರು.

## ರಾಜ್ಯದಲ್ಲಿ ವಿದ್ಯುತ್ ಕೊರತೆ ಇಲ್ಲ: ಸುನಿಲ್ ಕುಮಾರ್

**ಬೆಂಗಳೂರು, ಮೇ6**–ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ವ್ಯಾಪ್ತಿಯಲ್ಲಿ ಬರುವ ಎಲ್ಲ 13 ಉಷ್ಣ ವಿದ್ಯುತ್ ಘಟಕಗಳು ಈಗ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಐದು ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ 5020 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ನಡೆಸಿದೆ

ದೇಶದ ಉಳಿದ ರಾಜ್ಯಗಳಲ್ಲಿ ಕಲ್ಲಿದ್ದಲು ನಿರ್ವಹಣೆಯ ಸಮಸ್ಯೆ ಉಂಟಾಗುತ್ತಿರುವಾಗ ಕರ್ನಾಟಕದಲ್ಲಿ ಮಾತ್ರ ಸುಲಲಿತವಾಗಿ ವ್ಯವಸ್ಥೆಯನ್ನು ನಿಭಾಯಿಸುತ್ತಿರುವುದು ದಾಖಲೆಯಾಗಿದೆ ಎಂದು ಇಂಧನ ಸಚಿವ ಸುನೀಲ್ ಕುಮಾರ್ ಹೇಳಿದ್ದಾರೆ

ರಾಜ್ಯದಲ್ಲಿ ಕಲ್ಲಿದ್ದಲು ದಾಸ್ತಾನು ಸಾಕಷ್ಟು ಸಂಖ್ಯೆಯಲ್ಲಿ ಇರುವುದರಿಂದ ಯಾರೂ ಆತಂಕ ಪಡಬೇಕಾದ ಅಗತ್ಯವಿಲ್ಲ. ಸಾಕಷ್ಟು ಮುನ್ನೆಚ್ಚರಿಕೆ ಕ್ರಮ ವಹಿಸಿದ್ದರಿಂದ ವಿದ್ಯುತ್ ಬೇಡಿಕೆ ಹಾಗೂ ಪೂರೈಕೆಯಲ್ಲಿ ನಾವು



ಸಮತೋಲನ ಸಾಧಿಸಿದ್ದೇವೆ. ಐದು ವರ್ಷಗಳ ಬಳಿಕ ಎಲ್ಲ ಸ್ಥಾವರಗಳೂ ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಣೆ ಮಾಡಿದ್ದು ಮಹತ್ವದ ಸಾಧನೆ ಎಂದು ಸಚಿವರು ಹೇಳಿದ್ದಾರೆ.

2017ರಲ್ಲಿ ವೈಟಿಪಿಎಸ್ ತನ್ನ ಎರಡು ಘಟಕಗಳಲ್ಲಿ ಹೊಸದಾಗಿ ಕಾರ್ಯ ನಿರ್ವಹಣೆ ಆರಂಭಿಸಿದಾಗ ಮಾತ್ರ ಎಲ್ಲ ಘಟಕಗಳು ಪೂರ್ಣ ಪ್ರಮಾಣದಲ್ಲಿ ತನ್ನ ಕಾರ್ಯ ನಿರ್ವಹಣೆ ನಡೆಸಿ ಉತ್ಪಾದನ ಸಾಮರ್ಥ್ಯದ ಪೂರ್ಣ ವಿದ್ಯುತ್ ಸೃಜಿಸಿದ್ದವು.

ಸಾಮಾನ್ಯವಾಗಿ ವಿದ್ಯುತ್ ಬೇಡಿಕೆಯನ್ನು ಆಧರಿಸಿ ಉತ್ಪಾದನಾ ಘಟಕಗಳ ಕಾರ್ಯನಿರ್ವಹಣೆ ಹಾಗೂ ಉತ್ಪಾದನೆ ಪ್ರಮಾಣವನ್ನು ನಿಗದಿ ಮಾಡಲಾಗುತ್ತದೆ. ಸಾಮಾನ್ಯ ಬೇಡಿಕೆಯ ದಿನಗಳಲ್ಲಿ ಕೆಪಿಸಿಎಲ್ 3096 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆ ನಡೆಸುತ್ತದೆ.

**ಕೊರತೆ ಇಲ್ಲ:** ರಾಜ್ಯದ ಎಲ್ಲ ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ಐದು ದಿನಗಳ ಬೇಡಿಕೆ ಪೂರೈಸುವುದಕ್ಕೆ ಸಾಕಾದಷ್ಟು ಕಲ್ಲಿದ್ದಲು ದಾಸ್ತಾನು ಇದ್ದು, ಮುಂದಿನ ಅಗತ್ಯತೆಗೆ ಬೇಕಾದ ಕಲ್ಲಿದ್ದಲು ಪೂರೈಕೆಯೂ ನಿರಂತರವಾಗಿದೆ.

ಆರ್ ಟಿಪಿಎಸ್ ನಲ್ಲಿ 1,16,268 ಮೆಟ್ರಿಕ್ ಟನ್, ಬಿಟಿಪಿಎಸ್ 26,783 ಮೆಟ್ರಿಕ್ ಟನ್, ವೈಟಿಪಿಎಸ್ 1,02, 287 ಮೆಟ್ರಿಕ್ ಟನ್ ಸೇರಿದಂತೆ ಒಟ್ಟು 2,45,338 ಮೆಟ್ರಿಕ್ ಟನ್ ದಾಸ್ತಾನು ಲಭ್ಯವಿದೆ. ಐದು ದಿನಗಳ ಕಾಲ ರಾಜ್ಯದ ಒಟ್ಟು ಇಂಧನ ಬೇಡಿಕೆಯನ್ನು ಪೂರೈಸುವಷ್ಟು ಕಲ್ಲಿದ್ದಲು ದಾಸ್ತಾನು ರಾಜ್ಯದಲ್ಲಿ ಲಭ್ಯವಿದೆ.



■ **ಬೆಂಗಳೂರು: 2022– 23 ನೇ ಆಯವ್ಯಯದಲ್ಲಿ ಘೋಷಣೆಯಾಗಿರುವ ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಅಧ್ಯಕ್ಷತೆಯಲ್ಲಿ ಇಂದು ಕಂದಾಯ ಇಲಾಖೆ ಸಭೆ ಜರುಗಿತು. ಸಭೆಯಲ್ಲಿ ಕಂದಾಯ ಸಚಿವ ಆರ್.ಅಶೋಕ್, ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ಅಭಿವೃದ್ಧಿ ಆಯುಕ್ತೆ ಹಾಗೂ ಅಪರ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಆರ್ಥಿಕ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್. ಪ್ರಸಾದ್, ಯೋಜನಾ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಡಾ: ಶಾಲಿನಿ ರಜನೀಶ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಪ್ರಸಾದ್, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ತುಷಾರ್ ಗಿರಿನಾಥ್ ಕಂದಾಯ ಇಲಾಖೆ ಹಿರಿಯ ಅಧಿಕಾರಿಗಳಾದ ಮನೀಶ್ ಮೌದ್ಗಿಲ್, ರೋಹಿಣಿ ಸಿಂಧೂರಿ ಬಿ ಆರ್ ಮಮತಾ ಮತ್ತಿತರ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.**

## ದಕ್ಷಿಣ ಕರ್ನಾಟಕದಲ್ಲಿ ಬಿಜೆಪಿ ಪರ ಅಲೆ : ಬೊಮ್ಮಾಯಿ

**ಬೆಂಗಳೂರುಮೇ .6**– ರಾಜ್ಯದ ದಕ್ಷಿಣ ಭಾಗದಲ್ಲಿ ಭಾರತೀಯ ಜನತಾ ಪಕ್ಷ ಪರ ಅಲೆ ಸೃಷ್ಟಿಯಾಗಿದ್ದು, ವಿವಿಧ ಪಕ್ಷಗಳ ಹಲವು ಮುಖಂಡರು, ಉತ್ಸಾಹಿ ಯುವ ಸಮೂಹ ಪಕ್ಷದ ಪರ ಒಲವು ತೋರುತ್ತಿದ್ದಾರೆ. ಹಂತ ಹಂತವಾಗಿ ಪಕ್ಷಕ್ಕೆ ಸೇರ್ಪಡೆ ಕಾರ್ಯಕ್ರಮ ನಡೆಯಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರನ್ನು ಸೌಹಾರ್ದಯುತವಾಗಿ ಭೇಟಿ ಮಾಡಿದ ಸಿಎಂ, 90ನೇ ಜನ್ಮದಿನದ ಶುಭ ಹಾರೈಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪಕ್ಷದ ತತ್ವ–ಸಿದ್ಧಾಂತ, ವಿಚಾರಗಳನ್ನು ಒಪ್ಪಿ ಬರುವವರನ್ನು ಸೇರಿಸಿಕೊಳ್ಳಲಾಗುವುದು. ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿಯ ಹೊಸ ಯುವಶಕ್ತಿ ಉದಯವಾಗಲಿದೆ ಎಂದು ಹೇಳುವ ಮೂಲಕ ಗಮನ ಸೆಳೆದರು.

ಮಂಡ್ಯದಲ್ಲಿ ಸಮಾವೇಶ ಸಂಘಟಿಸುವ ವಿಷಯ ಚರ್ಚೆ ಹಂತದಲ್ಲಿದ್ದು, ಪಕ್ಷದ ವೇದಿಕೆಯಲ್ಲಿ ಚರ್ಚಿಸಿ ಅಂತಿಮ ತೀರ್ಮಾನಕ್ಕೆ ಬರಲಾಗುವುದು ಎಂದ ಬೊಮ್ಮಾಯಿ, ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ನೀಡಿದ ಹೇಳಿಕೆಗೆ ಯಾವುದೇ ಪ್ರತಿಕ್ರಿಯೆ ನೀಡಲಿಲ್ಲ.

## ರಾಜ್ಯದಲ್ಲಿ ಅಡ್ಜಸ್ಟ್ ಮೆಂಟ್ ರಾಜಕೀಯ: ಯತ್ನಾಳ್ ವ್ಯಂಗ್ಯ

**ಗೋಕಾಕ್, ಮೇ. 6**– ರಾಜ್ಯದಲ್ಲಿ ಅಡ್ಜಸ್ಟ್ ಮೆಂಟ್ ರಾಜಕೀಯ ನಡೆಯುತ್ತಿದೆ ಎಂದು ಬಿಜೆಪಿ ಶಾಶಕ ಬಸವನಗೌಡ ಯತ್ನಾಳ್ ಆರೋಪಿಸಿದ್ದಾರೆ.



ಗೋಕಾಕ್ ನಲ್ಲಿ ಸುದ್ದಿಗಾರರ ಜೊತೆ ಮಾತನಾಡುತ್ತಾ ಹೇಳಿದ್ದಾರೆ. ಬಿಜೆಪಿಯ ಮಹಾನ್ ನಾಯಕರು, ಕಾಂಗ್ರೆಸ್ ನ ಡಿ ಕೆ ಶಿವಕುಮಾರ್, ಜೆಡಿಎಸ್‌ನ ಕುಮಾರಸ್ವಾಮಿ ಮಧ್ಯೆ ಅಡ್ಜಸ್ಟ್ ಮೆಂಟ್ ರಾಜಕೀಯ. ರಾತ್ರಿ ಹೊತ್ತು ಈ ಎಲ್ಲ ನಾಯಕರು ಒಟ್ಟಿಗೆ ಮಾತನಾಡಿಕೊಳ್ಳುತ್ತಾರೆ, .ರಮೇಶ್ ಜಾರಕಿಹೊಳಿಯವರು ಬಿಜೆಪಿ ಸರ್ಕಾರ ಬರಲು ಕಾರಣರಾಗಿದ್ದಾರೆ, ಅವರ ವಿರುದ್ಧ ಸೆಕ್ಸ್ ಸಿಡಿ ಹೊರಬರಲು ಷಡ್ಯಂತ್ರ ಮಾಡಲಾಗಿದೆ. ಮೋಸ ಮಾಡಿದವರಲ್ಲಿ ಒಬ್ಬ ಮಹಾನ್ ನಾಯಕರ ಮಗ ಇದ್ದಾರೆ. ಅವರಿಗೆ ಮತ್ತೆ ಸಚಿವ ಸ್ಥಾನ ಕೊಡಬೇಕು. ಒಂದು ಕುಟುಂಬಕ್ಕೆ ಒಂದೇ ಟಿಕೆಟ್ ಎಂಬ ಕಾರ್ಯಕ್ರಮ ಬರುತ್ತದೆ, ಅದರಿಂದ ನಮಗೆ ಖುಷಿಯಿದೆ ಎಂದರು.

ದೆಹಲಿಯಿಂದ ಬಂದವರು 2,500 ಕೋಟಿ ಕೊಡಿ ನಿಮ್ಮನ್ನು ಸಿಎಂ ಮಾಡ್ತೀವಿ ಅಂದಿದ್ರು. ಜೆ.ಪಿ. ನಡ್ಡಾರನ್ನ ಭೇಟಿ ಮಾಡಿಸ್ತೀವಿ ಅಂತಾ ನನ್ನ ಬಳಿ ಬಂದಿದ್ರು. ಆದ್ರೆ ನಾನು, 2,500 ಕೋಟಿ ಅಂದ್ರೆ ಏನ್ ಅಂತಾ ತಿಳಿದಿರಿ. ಆ ಹಣ ಹೆಂಗ್ ಇಡೋದು? ಏನು ಕೋಣೆಯಲ್ಲಿ ಇಡೋದಾ ಅಥವಾ ಗೋದಾಮಿನಲ್ಲಿ ಇಡೋದಾ? ಎಂದು ಪ್ರಶ್ನಿಸಿದೆ ಎಂದರು.

## ಕೋವಿಡ್ ಹೆಸರಲ್ಲಿ ಕೇಂದ್ರದ ಸುಳ್ಳು ಲೆಕ್ಕ: ದಿನೇಶ್ ಗುಂಡೂರಾವ್ ಆರೋಪ

**ಬೆಂಗಳೂರು, ಮೇ 6**– ಕೋವಿಡ್ ಸಾವಿನಲ್ಲಿ ಸುಳ್ಳು ಲೆಕ್ಕ ಹೇಳಿ ಜಗತ್ತಿನ ಕಣ್ಣಿಗೆ ಮಣ್ಣೆರಚಿದ್ದ ಕೇಂದ್ರ ಸರ್ಕಾರದ ಸುಳ್ಳಿನ ಬಂಡವಾಳ ವಿಶ್ವ ಆರೋಗ್ಯ ಸಂಸ್ಥೆಯಿಂದ ಬಯಲಾಗಿದೆ.

2020–21ರಲ್ಲಿ ಭಾರತವೊಂದರಲ್ಲೇ ಕೋವಿಡ್–19 ಗೆ 47 ಲಕ್ಷ ಜನರು ಮೃತಪಟ್ಟಿದ್ದಾರೆ.ಆದರೆ, ವಿಶ್ವದ ಮುಂದೆ ಮಾನ ಮುಚ್ಚಿಕೊಳ್ಳಲು ಮೋದಿ ಸರ್ಕಾರ ಸತ್ತವರ ಸಂಖ್ಯೆ ಕೇವಲ 4.8 ಲಕ್ಷ ಎಂದು ಜನರ ಹಾದಿ ತಪ್ಪಿಸಿತ್ತು ಎಂದು ರಾಜ್ಯ ಕಾಂಗ್ರೆಸ್ ಹಿರಿಯ ಮುಖಂಡ ದಿನೇಶ್ ಗುಂಡೂರಾವ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಸಂಬಂಧ ಅವರಿಂದು ಟ್ವೀಟ್ ಮಾಡಿದ್ದು, ಕೋವಿಡ್ 2ನೇ



ಅಲೆಯಲ್ಲಿ ಭಾರತ ಸಾವಿನ ಮನೆಯಾಗಿತ್ತು. ಗಂಗೆಯಲ್ಲಿ ಶವಗಳು ತೇಲಿದ್ದವು. ಆಕ್ಸಿಜನ್ ಇಲ್ಲದೆ ಸಾಲು ಸಾಲು ಹೆಣಗಳು ಬಿದ್ದವು. ಜನ ದೀಪದ ಹುಳುಗಳಂತೆ ಸಾಯುತ್ತಿದ್ದರೂ ಮೋದಿಯವರು ದೇಶ ಕೊರೋನಾ ವಿರುದ್ಧ ಗೆದಿದ್ದೆ ಎಂದು ಬಿಟ್ಟಿ ಪ್ರಚಾರ ಗಿಟ್ಟಿಸಿಕೊಂಡರು.

ಈ ಮೂಲಕ ಸಾವಿನ ಲೆಕ್ಕದ ಸತ್ಯ ಮರೆಮಾಚಿದ್ದರು. ಈಗ ಡಬ್ಲ್ಯೂಎಚ್‌ಒ ವರದಿಯಿಂದ ಸತ್ಯ ದರ್ಶನವಾಗಿದೆ ಎಂದಿದ್ದಾರೆ.ಕೋವಿಡ್ ಸಾವಿನ ಸುಳ್ಳು ಲೆಕ್ಕ ಹೇಳಿದ ಮೋದಿ ಸರ್ಕಾರಕ್ಕೆ ಸತ್ತವರ ಮನೆಯ ಶಾಪ ತಟ್ಟದೇ ಇರದು.

ಸುಳ್ಳು ಹೇಳಿ ಸತ್ಯವನ್ನು ಬಹಳ ದಿನ ಅದುಮಿಡಲು ಸಾಧ್ಯವಿಲ್ಲ ಎಂಬುದು ವಿಶ್ವಸಂಸ್ಥೆ ವರದಿಯಿಂದ ಸಾಬೀತಾಗಿದೆ. ಕೋವಿಡ್ ಕಾಲದಲ್ಲಿ ಕೇಂದ್ರದ ನಿರ್ಲಕ್ಷ್ಯ, ಮೋದಿ ಅವರ ಬಿಟ್ಟಿ ಪ್ರಚಾರದ ಹುಚ್ಚು 47 ಲಕ್ಷ ಜನರ ಸಾವಿಗೆ ಕಾರಣ. ಈ ಸಾವುಗಳಿಗೆ ಕೇಂದ್ರವೇ ಹೊಣೆ ಎಂದು ದಿನೇಶ್ ಗುಂಡೂರಾವ್ ಆರೋಪಿಸಿದ್ದಾರೆ.



# ಅಭಿವೃದ್ಧಿಗೆ ಅನಂತ್ ಕುಮಾರ್ ಕೊಡುಗೆ ಅಪಾರ: ಬೊಮ್ಮಾಯಿ

**ಬೆಂಗಳೂರು, ಮೇ.6**– ಅನಂತ್ ಕುಮಾರ್ ಅವರು ಅನಂತ ಅನಂತವಾಗಿದ್ದಾರೆ, ಅವರು ಎಂದಿಗೂ ದಿವಂಗತರಾಗುವುದಿಲ್ಲ ಎಂದು ಸಿಎಂ ಬಸವರಾಜ್ ಬೊಮ್ಮಾಯಿ ಅವರು ನೆನಪು ಮಾಡಿಕೊಂಡರು.

ಬೆಂಗಳೂರಿನ ಜಯನಗರದ ಮಾಜಿ ಕೇಂದ್ರ ಸಚಿವ ದಿ.ಅನಂತ್ ಕುಮಾರ್ ಅವರ ಕಚೇರಿ ಅನಂತ ಪ್ರೇರಣಾ ಕೇಂದ್ರವನ್ನಾಗಿ ಪರಿವರ್ತಿಸಿದ್ದು,ಉದ್ಘಾಟನೆ ಕಾರ್ಯಕ್ರಮದಲ್ಲಿ ಶುಕ್ರವಾರ ಭಾಗಿಯಾಗಿ ಮಾತನಾಡಿದರು. ಸಾರ್ವಜನಿಕ ಹೋರಾಟದ ಆತ್ಮೀಯ ಸಂಗಾತಿ, ಜನ ಮೆಚ್ಚಿದ, ಜಗ ಮೆಚ್ಚಿದ, ಭಾರತ ಮಾತೆಯ ಅಪ್ರತಿಮ ಪುತ್ರ.ನನ್ನ ಬದುಕಿನ ಸಾರ್ವಜನಿಕ ಹೋರಾಟದ ಮೊದಲ ವ್ಯಕ್ತಿ ಅನಂತ್ ಕುಮಾರ್ ಎಂದು ಎಂದು ನೆಚ್ಚಿನ ಗೆಳೆಯನನ್ನು ನೆನಪಿಸಿಕೊಂಡರು.

ಅನಂತಕುಮಾರ್ ಜತೆಗಿನ ವಿದ್ಯಾರ್ಥಿ ಜೀವನದ ದಿನಗಳ ನೆನಪು ಹಂಚಿಕೊಂಡ ಸಿಎಂ, ನಮ್ಮಿಬ್ಬರ ಆತ್ಮೀಯತೆ ಬಗ್ಗೆ ಬೆಂಗಳೂರಿನ ರಾಜಕಾರಣಿಗಳಿಗೆ ಗೊತ್ತಿಲ್ಲ.ನಾವಿಬ್ಬರೂ ಕ್ಲಾಸ್ ಮೇಟ್.ನಾನು ತಡವಾಗಿ ಬಂದರೆ ಅವರು, ಅವರು ತಡವಾಗಿ ಬಂದರೆ ನಾನು ಜಾಗ ಇಡುತ್ತಿದ್ದೆವು,ಅಷ್ಟೂ ಆತ್ಮೀಯತೆ ಇತ್ತು ಎಂದರು.



**ಬೆಂಗಳೂರಿನ ಜಯನಗರ ಬಡಾವಣೆಯಲ್ಲಿ "ಅನಂತ ಪ್ರೇರಣಾ' ಕೇಂದ್ರವನ್ನು ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಉದ್ಘಾಟನೆ ಮಾಡಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದ ತೇಜಸ್ವಿ ಸೂರ್ಯ, ಶಾಸಕರಾದ ಉದಯ ಗರುಡಾಚಾರ್, ರವಿಸುಬ್ರಹ್ಮಣ್ಯ, ಅದಮ್ಯ ಚೇತನ ಸಂಸ್ಥೆ ಮುಖ್ಯಸ್ಥೆ ತೇಜಸ್ವಿನಿ ಅನಂತಕುಮಾರ್,ಅನಂತಕುಮಾರ ಪ್ರತಿಷ್ಠಾನದ ಅಧ್ಯಕ್ಷ ಪಿ ಕೃಷ್ಣ ಭಟ್ ಮತ್ತು ಇತರರು ಉಪಸ್ಥಿತರಿದ್ದರು.**

ಬೆಂಗಳೂರಿನ ಸಮಗ್ರ ಅಭಿವೃದ್ಧಿಗೆ ಅನಂತ್ ಕುಮಾರ್ ದೊಡ್ಡ ಕೊಡುಗೆ ನೀಡಿದ್ದಾರೆ. ಕೇಂದ್ರದಿಂದ ಆಗಬೇಕಾದ ಬೆಂಗಳೂರಿನ ಹಾಗೂ ರಾಜ್ಯದ ಎಲ್ಲ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಹಕಾರ ನೀಡಿದ್ದರು ಎಂದು ಸಿಎಂ ಬೊಮ್ಮಾಯಿ ಹೇಳಿದರು.

ಅನಂತ್ ಕುಮಾರ್.ಅವರ ಶ್ರೀಮತಿ ತೇಜಸ್ವಿನಿ ಅವರೂ ಉತ್ತಮ ಕೆಲಸಗಳನ್ನು ಅದಮ್ಯ ಚೇತನ, ಸಸ್ಯಾಗ್ರಹ ಸೇವಾ ಸಂಸ್ಥೆಗಳ ಮೂಲಕ ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತಿದ್ದಾರೆ. ಅನಂತ್ ಕುಮಾರ್ ಅವರ ಸ್ಮಾರಕಕ್ಕಾಗಿ ಸರಕಾರ ಸಂಪೂರ್ಣವಾಗಿ ತೇಜಸ್ವಿನಿ ಅವರ ಜತೆ ನಿಲ್ಲುತ್ತದೆ ಎಂದರು.ಅವರೊಂದಿಗಿನ ನೆನಪು ಸದಾ ಜೀವಂತವಾಗಿರುತ್ತದೆ. ಅವರನ್ನು ಕರ್ನಾಟಕ ಎಂದೂ ಮರೆಯಲು ಸಾಧ್ಯವಿಲ್ಲ. ಎಂದರು.

## ಪಿಎಸ್ ಐ ಪರೀಕ್ಷೆ ಹಗರಣ: ಸರ್ಕಾರದ ವಿರುದ್ಧ ಶಾಸಕ ರಾಮಲಿಂಗರೆಡ್ಡಿ ವಾಗ್ದಾಳಿ

**ಬೆಂಗಳೂರು,ಮೇ 6**– ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕರು ದಾಖಲೆ ಕೊಡಲಿ ಎಂಬ ಮುಖ್ಯಮಂತ್ರಿ ಮತ್ತು ಸಚಿವರುಗಳ ಹೇಳಿಕೆಗೆ ಕಿಡಿಕಾರಿರುವ ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಅವರು ದಾಖಲೆಗಳಿಲ್ಲದೆ ಈ ಹಗರಣಕ್ಕೆ ಸಂಬಂಧಿಸಿದಂತೆ 30 ಜನರನ್ನು ಬಂಧಿಸಿದ್ದೀರಾ ಎಂದು ಪ್ರಶ್ನಿಸಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಾಖಲೆ ಕೊಡಿ ಎನ್ನುವುದು ಎಡಬಿಡಂಗಿತನ. ದಾಖಲೆಗಳಿಲ್ಲದೆ ಸಿಓಡಿ ತನಿಖೆ ಯಾಕೆ ಮಾಡಿಸುತ್ತಿದ್ದೀರಿ. 30 ಜನರನ್ನು ಯಾಕೆ ಬಂಧಿಸಿದಿರಿ, 545 ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಯಾಕೆ ರದ್ದು ಮಾಡಿದ್ದೀರಿ. ಕೆಲವು



ಪೊಲೀಸ್ ಅಧಿಕಾರಿಗಳನ್ನು ಬಂಧಿಸಿದ್ದೀರಿ. ದಾಖಲೆಗಳಿಲ್ಲದೆ ಇವುಗಳನೆಲ್ಲ ಮಾಡಿದ್ದೀರಾ ಎಂದು ವಾಗ್ದಾಳಿ ನಡೆಸಿದರು.ಸರ್ಕಾರ ನಡೆಸುವವರು ನಮ್ಮನ್ನು ದಾಖಲೆ ಕೇಳುವುದು ಸರಿಯಲ್ಲ. ಸರಿಯಾದ ತನಿಖೆ ಮಾಡಿಸಿ, ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಿ, ದಾಖಲೆ ಕೇಳುತ್ತ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನ ಬೇಡ ಎಂದರು.

ಗೃಹ ಮಂತ್ರಿಯಾಗಿ ಅರಗ ಜ್ಞಾನೇಂದ್ರ ಅವರು ಪೊಲೀಸರ ಬಗ್ಗೆ ಲಘುವಾಗಿ ಮಾತನಾಡುತ್ತಾರೆ. ಬಿಜೆಪಿಯ ಸಿ.ಟಿ ರವಿ, ಶ್ರೀರಾಮಸೇನೆ, ಭಜರಂಗದಳದವರು ಪೊಲೀಸರನ್ನು ಅಪಮಾನಿಸಿ ಮಾತನಾಡುತ್ತಾರೆ. ಹೀಗಾದರೆ ಪೊಲೀಸರು ಹೇಗೆ ಕೆಲಸ ಮಾಡಬೇಕು ಎಂದ ಅವರು, ಕೋಮು ಸೌಹಾರ್ದ ಕೆಡಿಸುವ ಕೆಲಸ ಮಾಡುತ್ತಿರುವವರ ವಿರುದ್ಧ ಯಾಕೆ ಪೊಲೀಸರು ಕ್ರಮ ಜರುಗಿಸಲಿಲ್ಲ. ನಾನು ಗೃಹ ಮಂತ್ರಿಯಾಗಿದ್ದರೆ ಎಲ್ಲರನ್ನು ಮಟ್ಟ ಹಾಕುತ್ತಿದ್ದೆ ಎಂದರು. ಶಾಸಕ ಪ್ರಿಯಾಂಕ ಖರ್ಗೆ ಅವರು ಆಧಾರವಿಲ್ಲದೆ ಏನೂ ಮಾತನಾಡಿಲ್ಲ. ಸುಮ್ಮನೆ ಅವರಿಗೆ ನೋಟಿಸ್ ನೀಡಿ ಹೆದರಿಸುವ ಪ್ರಯತ್ನ ಬೇಡ. ಯಾವುದಕ್ಕೂ ಹೆದರಲ್ಲ ಎಂದರು.

## ಯತ್ನಾಳ್ ಆರೋಪಗಳ ಬಗ್ಗೆ ಎಸಿಬಿ ತನಿಖೆ ಆಗಲಿ: ಡಿ.ಕೆ.ಶಿವಕುಮಾರ್ ಆಗ್ರಹ

**ಬೆಂಗಳೂರು, ಮೇ.6**– ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾಡಿರುವ ಆರೋಪದ ಕುರಿತು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಎಫ್‌ಐಆರ್ ದಾಖಲಿಸಿ, ತನಿಖೆ ನಡೆಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಗ್ರಹಿಸಿದ್ದಾರೆ.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ಯತ್ನಾಳ ಸಾಮಾನ್ಯ ವ್ಯಕ್ತಿಯಲ್ಲ. ಬಿಜೆಪಿಯ ದೊಡ್ಡ ನಾಯಕ. ಸಂಸದ, ಶಾಸಕನಾಗಿ, ಕೇಂದ್ರ ಸರ್ಕಾರದಲ್ಲಿ ಸಚಿವರಾಗಿದ್ದವರು. ಅವರ ಮಾತನ್ನು ಹಗುರವಾಗಿ ತೆಗೆದುಕೊಳ್ಳುವಂತಿಲ್ಲ. ಮುಖ್ಯಮಂತ್ರಿ ಹುದ್ದೆ ನೀಡಲು 2,500 ಕೋಟಿಗೆ ಬೇಡಿಕೆ ಬಂದಿತ್ತುಎಂಬುದು ಗಂಭೀರ ವಿಚಾರ. ಈ ಬಗ್ಗೆ ತಕ್ಷಣ ತನಿಖೆ ನಡೆಯಬೇಕು ಎಂದು ಒತ್ತಾಯಿಸಿದರು.

ಈ ಸರ್ಕಾರದಲ್ಲಿ ಮುಖ್ಯಮಂತ್ರಿ,



ಮಂತ್ರಿ, ಪೊಲೀಸ್ ಸಬ್ ಇನ್‌ಸ್ಪೆಕ್ಟರ್, ಎಸಿಪಿ, ಡಿವೈಎಸ್‌ಪಿ, ಎಸ್‌ಪಿ, ತಹಶೀಲ್ದಾರ್, ಶಿಕ್ಷಕರು ಎಲ್ಲ ಹುದ್ದೆಗಳಿಗೂ ದರ ನಿಗದಿ ಮಾಡಿದ್ದಾರೆ. ಮಂತ್ರಿ ಮಾಡಬೇಕಾದರೆ 100 ಕೋಟಿ ಕೊಡಬೇಕಿದೆ. ಈ ಕುರಿತು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಉತ್ತರ ನೀಡಲಿ ಎಂದು ಆಗ್ರಹಿಸಿದರು.

ನ್ಯಾಯ ಒದಗಿಸಿ: ಕೋವಿಡ್‌ನಿಂದ ರಾಜ್ಯದಲ್ಲಿ 4.5 ಲಕ್ಷ ಜನರು ಮೃತಪಟ್ಟಿದ್ದಾರೆ ಎಂದು ನಾನು, ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್‌ನ ಹಲವರು ಹೇಳಿದ್ದೆವು. ಆದರೆ, ಸರ್ಕಾರ ಅದನ್ನು ಒಪ್ಪಿಕೊಂಡಿರಲಿಲ್ಲ. ರಾಜ್ಯದ ಆರೋಗ್ಯ ಸಚಿವರು ಸಾವಿನ ಸಂಖ್ಯೆಯನ್ನು ಮುಚ್ಚಿಟ್ಟಿದ್ದರು. ದೇಶದಲ್ಲಿ ಕೋವಿಡ್‌ನಿಂದ 47 ಲಕ್ಷ ಜನರು ಮೃತಪಟ್ಟಿದ್ದಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆಯೇ ಈಗ ವರದಿ ನೀಡಿದೆ. ಇನ್ನಾದರೂ ಸರ್ಕಾರ ಸತ್ಯ ಒಪ್ಪಿಕೊಳ್ಳಲಿ ಎಂದು ಶಿವಕುಮಾರ್ ಹೇಳಿದರು.

ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಸರ್ಕಾರ ಘೋಷಿಸಿದ್ದ ಪರಿಹಾರವನ್ನು ಈವರೆಗೂ ವಿತರಿಸಿಲ್ಲ. ಈಗ ಮುಖ್ಯಮಂತ್ರಿಯವರು ಪುನಃ ಸಭೆ ನಡೆಸಿ, ಕೋವಿಡ್‌ನಿಂದ ಮೃತಪಟ್ಟ ಎಲ್ಲರ ಕುಟುಂಬಗಳಿಗೂ ಪರಿಹಾರ ವಿತರಣೆಗೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

## ಬಸವ ಭೂಷಣ ಪ್ರಶಸ್ತಿ ಸ್ವೀಕಾರಕ್ಕೆ ಮಾಜಿ ಸಿಎಂ ಬಿಎಸ್ ವೈ ದುಬೈಗೆ

**ಬೆಂಗಳೂರು,ಮೇ 6**– ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪರವರು ನಾಳೆಯಿಂದ ಎರಡು ದಿನಗಳ ದುಬೈ ಪ್ರವಾಸ ಕೈಗೊಳ್ಳಲಿದ್ದಾರೆ.

ಯುಎಇ ಬಸವ ಸಮಿತಿ ಕೊಡಮಾಡುವ ಬಸವ ಭೂಷಣ ಪ್ರಶಸ್ತಿಯನ್ನು ಸ್ವೀಕರಿಸಲು ಅವರು ದುಬೈ ಪ್ರವಾಸ ಕೈಗೊಳ್ಳುತ್ತಿದ್ದಾರೆ.

ಯುಎಇ ಬಸವ ಸಮಿತಿಯು ಪ್ರತಿವರ್ಷ ಬಸವ ಜಯಂತಿ ಆಚರಿಸುತ್ತಿದ್ದು, ಆ ಸಂದರ್ಭದಲ್ಲಿ ಬಸವ ಭೂಷಣ ಪ್ರಶಸ್ತಿಯನ್ನು ನೀಡುತ್ತ ಬಂದಿದ್ದು, ಈ ಬಾರಿ ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರನ್ನು ಬಸವ ಭೂಷಣ ಪ್ರಶಸ್ತಿಗೆ ಆಯ್ಕೆಮಾಡಿದೆ.

ಭಾನುವಾರ ದುಬೈನ ಆಲ್ ಸಫಾದಲ್ಲಿರುವ ಜೆಎಸ್‌ಎಸ್



ಖಾಸಗಿ ಶಾಲೆಯಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಯಡಿಯೂರಪ್ಪರವರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತದೆ.

ಈ ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀಗಳಾದ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ, ಬಾಲ್ಕಿ ಹಿರೇಮಠದ ಡಾ. ಬಸವಲಿಂಗ ಪಟ್ಟದೇವರು, ಇಳಕಲ್‌ನ ಚಿತ್ತರಗಿ ಶ್ರೀ ವಿಜಯ ಮಹಂತೇಶ ಸಂಸ್ಥಾನ ಮಠದ ಶ್ರೀಗುರು ಮಹಂತ ಸ್ವಾಮಿಗಳು ಪಾಲ್ಗೊಂಡು ಆರ್ಶೀವಚನ ನೀಡುವರು, ಇದೇ ಕಾರ್ಯಕ್ರಮದಲ್ಲಿ ಕೆಆರ್‌ಐಡಿಎಲ್ ಅಧ್ಯಕ್ಷ ಎಂ. ರುದ್ರೇಶ್ ಸೇರಿದಂತೆ ಹಲವು ಗಣ್ಯರು ಭಾಗಿಯಾಗುವರು.

## ಪಿಎಸ್ ಐಗೆ ಶಾಸಕ ಕುಮಾರಸ್ವಾಮಿ ನಿಂದನೆ

**ಬೆಂಗಳೂರು,ಮೇ 6**– ಮೂಡಿಗೆರೆ ಕ್ಷೇತ್ರದ ಬಿಜೆಪಿ ಶಾಸಕ ಎಂ.ಪಿ ಕುಮಾರಸ್ವಾಮಿ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಒಬ್ಬರಿಗೆ ಏಕವಚನದಲ್ಲೇ ನಿಂದಿಸಿರುವ ಆಡಿಯೋ ವೈರಲ್ ಆಗಿದ್ದು, ಶಾಸಕ ಕುಮಾರಸ್ವಾಮಿಯವರ ಮಾತುಗಳು ವಿವಾದಕ್ಕೆ ಎಡೆಮಾಡಿದೆ.

ಚಿಕ್ಕಮಗಳೂರಿನ ಮಲ್ಲಂದೂರು ಠಾಣೆಗೆ ಹೊಸದಾಗಿ ವರ್ಗಾವಣೆಗೊಂಡಿರುವ ಪಿಎಸ್‌ಐ ರವೀಶ್ ಶಾಸಕರಿಗೆ ಕರೆ ಮಾಡಿ ಕಾರ್ಯಭಾರ ವಹಿಸಿಕೊಂಡಿರುವ ಬಗ್ಗೆ ತಿಳಿಸಿದಾಗ ಸಿಕ್ಕಿಬಿದ್ದ ಎಂ.ಪಿ ಕುಮಾರಸ್ವಾಮಿ, ಯಾರನ್ನು ಕೇಳಿ ಚಾರ್ಜ್ ತಗೊಂಡಿದ್ದೀಯಾ, ನಿನಗೆ ಇಲ್ಲಿಗೆ ಬರಬೇಡ ಎಂದು ಹೇಳಿದ್ದೆ. ಮರ್ಯಾದೆಯಿಂದ ವಾಪಸ್ ಹೋಗು ಎಂದು ಅವಾಜ್ ಹಾಕಿರುವುದು ಆಡಿಯೋದಲ್ಲಿದೆ.

ನಾನು ಹೇಳಿದ ಹಾಗೆ ಕೇಳು, ಬೇಕಾದರೆ ರೆಕಾರ್ಡ್ ಮಾಡ್ಕೊ ನಾಳೆ ನಿನ್ನ ವರ್ಗಾವಣೆ ಮಾಡಿಸುತ್ತೇನೆ. ಐಜಿಗೆ ಎಷ್ಟು ಲಂಚ ಕೊಟ್ಟಿದ್ದೀಯಾ, ಯಾವನು ಐಜಿ ಮೂಡಿಗೆರೆಗೆ ನಾನೇ ಎಲ್ಲ ಎಂದು ಹೇಳಿದ್ದು, ಪಿಎಸ್‌ಐ ರವೀಶ್ ನಾಳೆ ನಿಮ್ಮನ್ನು ಬಂದು ನೋಡುತ್ತೇನೆ ಎಂದಾಗ ನಾಳೆ ನೋಡಲು ಬಂದರೆ ಒದ್ದು ಓಡಿಸುತ್ತೇನೆ ಎಂದು ಫೋನಿನಲ್ಲೇ ಗದರಿದ್ದಾರೆ.


### ಗೃಹ ಸಚಿವರ ಪ್ರತಿಕ್ರಿಯೆ

ಈ ಬಗ್ಗೆ ಕಲಬುರಗಿಯಲ್ಲಿ ಪ್ರತಿಕ್ರಿಯಿಸಿರುವ ಗೃಹ ಸಚಿವ ಅರಗ ಜ್ಞಾನೇಂದ್ರ, ಶಾಸಕ ಕುಮಾರಸ್ವಾಮಿ ಅವರು ತಾಳ್ಮೆ ಕಳೆದುಕೊಂಡಿದ್ದಾರೆ. ಅವರನ್ನು ಕರೆಸಿ ಮಾತನಾಡುತ್ತೇನೆ. ಅವರು ಅವಾಚ್ಯವಾಗಿ ಪಿಎಸ್‌ಐ ಅವರನ್ನು ನಿಂದಿಸಿರುವುದು ನನ್ನ ಗಮನಕ್ಕೆ ಬಂದಿಲ್ಲ. ವರದಿ ತರಿಸುತ್ತೇನೆ ಎಂದು ಹೇಳಿದರು

## ಈ ಕಂಪನಿಯ ಉದ್ಯೋಗಿಗಳಿಗೆ ಕಚೇರಿಯಲ್ಲೇ ನಿದ್ರಿಸಲು ಅವಕಾಶ !

**ಬೆಂಗಳೂರು, ಮೇ.6**– ಸುಸ್ತಾಗಿರಲಿ, ಅನಾರೋಗ್ಯವಿರಲಿ ಕೆಲಸ ಮಾಡಲೇಬೇಕು! ಇದು ಸಾಮಾನ್ಯವಾಗಿ ಖಾಸಗಿ ಕಂಪನಿಗಳಲ್ಲಿ ಸೇವೆ ಸಲ್ಲಿಸುವ ನೌಕರರ ಪರಿಸ್ಥಿತಿ. ಆದರೆ, ಬೆಂಗಳೂರಿನ "ವೇಕ್ ಫಿಟ್ ಸೊಲ್ಯೂಷನ್ಸ್' ಎಂಬ ಸ್ಟಾರ್ಟ್ ಅಪ್ ಕಂಪನಿಯೊಂದು, ಕಚೇರಿಯಲ್ಲಿ ನಿದ್ರೆ ಬಂದರೆ ಧಾರಾಳವಾಗಿ ನಿದ್ರಿಸುವಂಥ ಅವಕಾಶವೊಂದನ್ನು ತನ್ನ ಉದ್ಯೋಗಿಗಳಿಗೆ ನೀಡಿದೆ.

ಇದಕ್ಕಾಗಿ ಸುಮಾರು 30 ನಿಮಿಷ ಅವಕಾಶ ಕೊಟ್ಟಿದೆ. ಅಷ್ಟೇ ಅಲ್ಲ, ಕಚೇರಿ ಸಮಯದಲ್ಲಿ ಕಿರು ನಿದ್ರೆ ಮಾಡುವುದನ್ನು "ತಪ್ಪು' ಎಂದು ಭಾವಿಸಬೇಕಿಲ್ಲ. ಅದು ನಿಮ್ಮ "ಹಕ್ಕು' ಎಂದು ಭಾವಿಸಿ ಎಂದು ಹೇಳಿದೆ!. ಈ ನಿದ್ರಾ ಅವಧಿಯನ್ನು ಕೆಲಸದ ಅವಧಿ ಎಂದೇ



ಪರಿಗಣಿಸಲಾಗುತ್ತದಾದ್ದರಿಂದ ಈ ನಿದ್ರಾವಧಿಗೆ ವೇತನವೂ ಸಿಗಲಿದೆ ಎಂದು ಕಂಪನಿ ತಿಳಿಸಿದೆ.ಈ ವಿಚಾರವನ್ನು ಸಂಸ್ಥೆಯ ಸಹ–ಸಂಸ್ಥಾಪಕರಾದ ಚೈತನ್ಯ ರಾಮಲಿಂಗೇಶ್ವರ ಗೌಡ ಅವರು ತಮ್ಮ ಟ್ವಿಟರ್‌ನಲ್ಲಿ ಪ್ರಕಟಿಸಿದ್ದಾರೆ.

ಅಸಲಿಗೆ, ಈ ಸ್ಲೀಪ್ ಸೌಲಭ್ಯವನ್ನು ಕಳೆದ ಆರು ವರ್ಷಗಳ ಹಿಂದೆಯೇ ಜಾರಿಗೊಳಿಸಲಾಗಿತ್ತು. ಈ ವರ್ಷದಿಂದ ನಿದ್ರಾ ಅವಧಿಗೂ ಪಾವತಿ ಮಾಡುತ್ತಿದ್ದೇವೆ ಎಂದು ಅವರು ಹೇಳಿದ್ದಾರೆ. ವೇಕ್‌ಫಿಟ್ ಸೊಲ್ಯೂಷನ್ಸ್ ಕಂಪನಿಯ ಉದ್ಯೋಗಿಗಳು, ಮಧ್ಯಾಹ್ನ 2 ಗಂಟೆಯಿಂದ 2:30 ಗಂಟೆಯವರೆಗೆ ನಿದ್ರಿಸಲು ಅವಕಾಶವಿರುತ್ತದೆ. ಈ ಸಂದರ್ಭದಲ್ಲಿ ಅವರ ನಿದ್ರೆಗೆ ಯಾರೂ ಭಂಗ ತಾರದಿರಲಿ ಎಂಬ ಉದ್ದೇಶದಿಂದ ಕಚೇರಿಯಲ್ಲಿ ಯಾರೂ ಸಿಬ್ಬಂದಿಯನ್ನು ಈ ಅವಧಿಯಲ್ಲಿ ಮಾತನಾಡಿಸಬಾರದು, ಯಾರೂ ಭೇಟಿಯಾಗಬಾರದು ಎಂಬ ನಿಯಮವನ್ನು ಜಾರಿಗೊಳಿಸಲಾಗಿದೆ.

ಅಷ್ಟೇ ಅಲ್ಲ, ಮಲಗಲು ಯೋಗ್ಯವಾದ ವಾತಾವರಣ ಕಲ್ಪಿಸುವ ಉದ್ದೇಶದಿಂದ ಕೋಸಿ ನ್ಯಾಪ್ ಪಾಡ್ಸ್ ಅಥವಾ ಕ್ವಯೆಟ್ ರೂಮ್ಸ್ ಪರಿಕಲ್ಪನೆಯ ಮಲಗುವ ಕ್ಯಾಬಿನ್‌ಗಳನ್ನು ಕಚೇರಿಗಳಲ್ಲೇ ಅಳವಡಿಸಲಾಗಿದೆ.

# ಕನ್ನಡಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಕೊಡುಗೆ ಅನನ್ಯ: ರಾಜೇಶ್ವರ್

**ರಾಯಚೂರು, ಮೇ 6–** ಕನ್ನಡ ಸಾಹಿತ್ಯ ಪರಿಷತ್ತು ಉದಯಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರು ಮಾಡಿದ ಶ್ರಮ ಅನನ್ಯ. ಅವರ ಸೇವೆ ದೇಶಕ್ಕೆ ಮಾದರಿಯಾಗಿದೆ. ಅವರು ಕಟ್ಟಿರುವ ಕನ್ನಡ ಸಾಹಿತ್ಯ ಪರಿಷತ್ತು ಇಂದು ಕನ್ನಡ ನಾಡು ನುಡಿ ಭಾಷೆಗಾಗಿ ನಿರಂತರ ಶ್ರಮಿಸುತ್ತಿದೆ ಎಂದು ಸಾಹಿತಿ ರವಿ ರಾಜೇಶ್ವರ್ ಹೇಳಿದರು.

ನಗರದ ನಂದಿನಿ ಮಹಾವಿದ್ಯಾಲಯದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಗುರುವಾರ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 108ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾ ನೀಡಿದರು.



ರಾಯಚೂರು ನಗರದ ನಂದಿನಿ ಮಹಾವಿದ್ಯಾಲಯದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಗುರುವಾರ ಹಮ್ಮಿಕೊಂಡಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ 108ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಸಾಹಿತಿ ರವಿ ರಾಜೇಶ್ವರ ಅವರು ವಿಶೇಷ ಉಪನ್ಯಾ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ನಾಡು, ನುಡಿ ಮತ್ತು ಸಂಸ್ಕೃತಿಗಾಗಿ ದುಡಿಯುತ್ತಿದ್ದು, ಕನ್ನಡಿಗರ ಎದೆಯಾಳದಲ್ಲಿ ಹಚ್ಚ ಹಸಿರಾಗಿ ಉಳಿದಿದೆ. 1915 ರಿಂದ ಇಲ್ಲಿಯವರೆಗೆ ಕನ್ನಡ ಸಾಹಿತ್ಯ, ಭಾಷೆ ಬೆಳವಣಿಗೆಗೆ ಅನೇಕ ಕಾರ್ಯಕ್ರಮಗಳನ್ನು ಮಾಡಿ, ಸಾಹಿತಿಗಳಿಗೆ, ವಿದ್ವಾಂಸರಿಗೆ, ಪ್ರೋತ್ಸಾಹಗಳನ್ನು ನೀಡಿ ಅವರ ಬೆಳವಣಿಗೆಗೆ ಸಹಕಾರಿಯಾಗಿದೆ ಎಂದರು.

ಕನ್ನಡ ನಾಡಿನ ಭಾಷೆ ಭಿನ್ನರಲ್ಲಿ ಐಕ್ಯಮತವನ್ನು, ಪರಸ್ಪರ ಸೌಹಾರ್ದವನ್ನು ಹೆಚ್ಚಿಸುವ ಕಾರ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತು ಮಾಡಿದೆ. ಕನ್ನಡವನ್ನಾಡುವ ಜನಸಾಮಾನ್ಯರಲ್ಲಿ ಲೋಕವ್ಯವಹಾರ ಜ್ಞಾನವು ಹರಡುವಂತೆ ಕನ್ನಡ ಪುಸ್ತಕಗಳ ಪ್ರಕಟಣೆ, ಕನ್ನಡ ಕಾವ್ಯ, ಜಾಣ, ಪರೀಕ್ಷೆಗಳನ್ನು ನಡೆಸಿದ ಕೀರ್ತಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಇದೆ. ಹಾಗೆಯೇ ಕರ್ನಾಟಕದ ಏಕೀಕರಣ ಚಳವಳಿಗೆ ಒತ್ತು ನೀಡಿದ ಸಂಸ್ಥೆ ಕನ್ನಡ ಸಾಹಿತ್ಯ ಪರಿಷತ್ ಆಗಿದೆ ಎಂದು ಹೇಳಿದರು.

ನಂದಿನಿ ಮಹಾವಿದ್ಯಾಲಯದ ಪ್ರಾಂಶುಪಾಲ ವಿಜಯಕುಮಾರ್ ಕಟ್ಟಿಮನಿ ಅವರು ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಕನ್ನಡ ಸಾಹಿತ್ಯ ಪರಿಷತ್ತು ಗಡಿನಾಡಿನಲ್ಲಿ ಇರುವ ಕನ್ನಡಿಗರಿಗೆ ಭಾಷೆಯ ಬಗ್ಗೆ ಪ್ರಜ್ಞೆಯನ್ನು ಮೂಡಿಸುವ ಕೆಲಸ ಮಾಡಿದೆ.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವೆಂಕಟೇಶ ಬೇವಿನಬೆಂಚಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕನ್ನಡಕ್ಕಾಗಿ ಸೇವೆ ಸಲ್ಲಿಸಿದ ಛಾಯಾಗ್ರಾಹಕ ಮಲ್ಲಿಕಾರ್ಜುನ ಸ್ವಾಮಿ, ಕನ್ನಡ ಅಭಿಮಾನಿ ಅನ್ವರ್ ಖಾನ್, ಸ್ನಾತಕೋತ್ತರ ಪದವಿಯಲ್ಲಿ ಕನ್ನಡ ಭಾಷೆಯಲ್ಲಿ 12 ಚಿನ್ನದ ಪದಕವನ್ನು ಪಡೆದ ಪೂರ್ಣಿಮಾ ಗಾಣದಾಳ ಅವರಿಗೆ ಸನ್ಮಾನಿಸಲಾಯಿತು. ವೆಂಕಟೇಶ್ ನವಲಿ, ರೇಖಾ ಬಡಿಗೇರ್ ಇದ್ದರು. ಗೌರವ ಕಾರ್ಯ ದರ್ಶಿ ರಾವುತರಾವ್ ಬರೂರ ಸ್ವಾಗತಿಸಿದರು. ಆಂಜನೇಯ ಕಾವಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜಾಶಂಕರ್ ವಕೀಲರು ವಂದಿ ಸಿದರು. ಬಿ.ವಿಜಯರಾಜೇಂದ್ರ ನಿರೂಪಿಸಿದರು.



ಗೃಹ ಸಚಿವ ಆರಗ ಜ್ಞಾನೇಂದ್ರ ಶುಕ್ರವಾರ ಕಲುಬರಗಿಯ ಪೊಲೀಸ್ ತರಬೇತಿ ಶಾಲೆಯಲ್ಲಿ ವಿಶೇಷ ಮೀಸಲು ಪೊಲೀಸ್ ಪೇದೆಗಳ ನೂತನ ಬ್ಯಾಚ್‌ನ ನಿರ್ಗಮನ ಪಥಸಂಚಲನ ನಡೆಯಿತು.

# ಕೊಡುಗೈದಾನಿ ಸಿದ್ದಪ್ಪನವರಿಂದ ಅಂಧ ವಿದ್ಯಾರ್ಥಿಗಳಿಗೆ ರೇಷನ್ ವಿತರಣೆ

**ಬಳ್ಳಾರಿ, ಮೇ.06–** ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲೂಕಿನ ಬೈರಾಪುರ ಗ್ರಾಮದ ಅಂಧ ವಿದ್ಯಾರ್ಥಿಗಳು ಬಿಜೆಪಿ ತಾಲೂಕ ಯುವಮೋರ್ಚ ಅಧ್ಯಕ್ಷ, ಶಾಸಕ ಸೋಮಲಿಂಗಪ್ಪನವರ ಪುತ್ರ, ಜನಪ್ರಿಯ ಯುವನಾಯಕರಾದ ಸಿದ್ದಪ್ಪನವರ ಮನೆ ಹತ್ತಿರ ಬಂದು ತಮ್ಮ ಮನೆಯ (ಊಟದ) ಸಮಸ್ಯೆಯನ್ನು ಹೇಳಿಕೊಂಡಾಗ ತಕ್ಷಣ ಅವರ ಸಮಸ್ಯೆಗೆ ಸ್ಪಂದಿಸಿ ಹಕ್ಕಿ , ಬೇಳೆ ಮತ್ತಿತರೆ ದಿನಸಿ ನೀಡಲಾಯಿತು. ಮತ್ತೆ ಎನಾದರೂ ಸಮಸ್ಯೆ ಇದ್ದರೆ ಕರೆ ಮಾಡಿ ತಿಳಸಿ ನಾನು ಸಹಾಯ ಮಾಡುವುದಾಗಿ 3 ಜನ ಅಂಧ ವಿದ್ಯಾರ್ಥಿಗಳಾದ ಗಾಳಪ್ಪ ,ದ್ಯಾವಣ್ಣ ,ಹನುಮಂತ, ಅವರಿಗೆ ತಿಳಿಸಲಾಯಿತು.



ಸಿದ್ದಪ್ಪನವರು ಅಂಧ ವಿದ್ಯಾರ್ಥಿಗಳಿಗೆ ಅಕ್ಕಿ, ಬೇಳೆ, ದಿನಸಿಗಳನ್ನು ವಿತರಣೆ ಮಾಡಿದ ಚಿತ್ರ.

# ಬಳ್ಳಾರಿ ಜಿಲ್ಲಾ ಕಸಾಪ ಘಟಕದಿಂದ ರವಿಚೇಳ್ಳಗುರ್ಕಿ ಅವರಿಗೆ ಸನ್ಮಾನ



ಸನ್ಮಾನಿಸುತ್ತಿರುವ ಚಿತ್ರ.

**ಬಳ್ಳಾರಿ, ಮೇ. 06–** ಕನ್ನಡ ನಾಡು ನುಡಿ ನೆಲ ಜಲ ಗಡಿ ಕುರಿತು ಸದಾಭಿಮಾನ ಹಾಗೂ ಕನ್ನಡ ಭಾಷಾಭಿವೃದ್ಧಿಗಾಗಿ ನಿರಂತರವಾಗಿ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಂಡು ಬರುತ್ತಿರುವ ಕರ್ನಾಟಕ ರಾಜ್ಯ ಕ್ರಿಯಾಶೀಲ ಶಿಕ್ಷಕರ ವೇದಿಕೆ, ಬಳ್ಳಾರಿ ಜಿಲ್ಲಾ ಘಟಕದ ಅಧ್ಯಕ್ಷರಾದ ರವಿಚೇಳ್ಳಗುರ್ಕಿ ಅವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ 108ನೇ ಸಂಸ್ಥಾಪನ ದಿನ ಆಚರಣೆಯಲ್ಲಿ ಬಳ್ಳಾರಿ ಜಿಲ್ಲಾ ಕಸಾಪ ಘಟಕದಿಂದ ಸನ್ಮಾನಿಸಿ ಗೌರವಿಸಿದರು.

ಈ ಸಂಧರ್ಭದಲ್ಲಿ ಬಳ್ಳಾರಿಯ ಬುಡಾ ಮಾಜಿ ಅಧ್ಯಕ್ಷರಾದ ನಾರಾ ಪ್ರತಾಪ್ ರೆಡ್ಡಿ, ಕಸಾಪ ಜಿಲ್ಲಾ ಅಧ್ಯಕ್ಷ ಡಾ.ನಿಷ್ಠಿ ರುದ್ರಪ್ಪ,ಮಹಾನಗರ ಪಾಲಿಕೆಯ ಸದಸ್ಯರಾದ ಗಾದೆಪ್ಪ, ಯೋಗ ನಾಗರಾಜ, ಬಸವರಾಜ ಬಿಸಲಹಳ್ಳಿ ಮುಂತಾದವರು ಉಪಸ್ಥಿತರಿದ್ದರು.

# ಆಗಸ್ಟ್ 7ರಂದು ಶೂನ್ಯ ನೆರಳಿನ ದಿನಾಚರಣೆ



ರಾಯಚೂರು ನಗರದ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಭಾರತ ಜ್ಞಾನ ವಿಜ್ಞಾನ ಸಮಿತಿಯಿಂದ ಆಯೋಜಿಸಿದ್ದ ಶೂನ್ಯ ನೆರಳು ದಿನ ಆಚರಣೆ ಕುರಿತು ವಿದ್ಯಾರ್ಥಿಗಳು ಪ್ರಯೋಗ ನಡೆಸುತ್ತಿರುವುದು.

**ರಾಯಚೂರು, ಮೇ.6–** ಶೂನ್ಯ ನೆರಳಿನ ವಿದ್ಯಮಾನ ವರ್ಷಕ್ಕೆ ಎರಡು ಬಾರಿ ಸಂಭವಿಸಲಿದ್ದು, ಚಟುವಟಿಕೆಗಳ ಮೂಲಕ ಭೂಮಿಯ ಸುತ್ತಳತೆ, ಭೂಮಿಯ ಪರಿಭ್ರಮಣ, ಶೂನ್ಯ ನೆರಳಿನ ಸಮಯ ಹಾಗೂ ಸೂರ್ಯನ ಚಲನೆ ಇತ್ಯಾದಿ ಅಳೆಯಬಹುದು ಎಂದು ಪ್ರಾದೇಶಿಕ ವಿಜ್ಞಾನ ಕೇಂದ್ರದ ಕ್ಯುರೇಟರ್ ಅಜಿತ್ ಕುಮಾರ ತಿಳಿಸಿದರು.

ನಗರದ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಭಾರತ ಜ್ಞಾನ ವಿಜ್ಞಾನ ಸಮಿತಿಯಿಂದ ಗುರುವಾರ ಆಯೋಜಿಸಿದ್ದ ಶೂನ್ಯ ನೆರಳು ದಿನ ಆಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಶೂನ್ಯ ನೆರಳಿನ ವಿದ್ಯಮಾನ ವರ್ಷಕ್ಕೆ ಎರಡು ಬಾರಿ ಸಂಭವಿಸಲಿದ್ದು, ಇದು ರಾಯಚೂರಿನಲ್ಲಿ ಗುರುವಾರ ಸಂಬಭಿಸಿದ್ದು ಪುನಃ ಆಗಸ್ಟ್ 07 ರಂದು ಸಂಭವಿಸಲಿದೆ. ಆದರೆ, ಆಗಸ್ಟ್ ತಿಂಗಳಲ್ಲಿ ಮೋಡ ಕವಿದ ವಾತಾವರಣ ಕಂಡುಬರುವುದರಿಂದ ಮೇ ತಿಂಗಳಲ್ಲಿ ಇದನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ ಎಂದರು.

ಕೇಂದ್ರದ ಶಿಕ್ಷಣ ಸಹಾಯಕ ವಿದ್ಯಾ ವಿದ್ಯಾರ್ಥಿಗಳಿಗೆ, ಶೂನ್ಯ ನೆರಳು ವಿದ್ಯಮಾನದ ಮಾಹಿತಿಯನ್ನು ನೀಡಿ, ಚಟುವಟಿಕೆಯನ್ನು ಹಮ್ಮಿಕೊಳ್ಳುವ ವಿಧಾನವನ್ನು ವಿವರಿಸಿದರು. ವಿದ್ಯಾರ್ಥಿಗಳು ಚಟುವಟಿಕೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿ ಶೂನ್ಯ ನೆರಳಿನ ಸಮಯವನ್ನು ಕಂಡುಕೊಂಡರು ಹಾಗೂ ಅದನ್ನು ಪ್ರಸ್ತುತಪಡಿಸಿದರು. ಭಾರತ ವಿಜ್ಞಾನ ಸಮಿತಿಯ ಜಿಲ್ಲಾ ಸಂಚಾಲಕ ಹಫೀಜುಲ್ಲಾ ಮಾತನಾಡಿ, ಇಂತಹ ಕಾರ್ಯಕ್ರಮ ಗಳನ್ನು ಹಮ್ಮಿಕೊಳ್ಳುವುದರಿಂದ ವಿದ್ಯಾರ್ಥಿಗಳಿಗೆ ವಿಜ್ಞಾನ ಕ್ಷೇತ್ರದಲ್ಲಿ ಆಸಕ್ತಿಯ ಹೆಚ್ಚಾಗುತ್ತದೆ. ಈ ನಿಟ್ಟಿನಲ್ಲಿ ವಿಜ್ಞಾನ ಕೇಂದ್ರದ ಪ್ರಯತ್ನ ಶ್ಲಾಘನೀಯವಾಗಿದೆ ಎಂದು ತಿಳಿಸಿದರು.

ಈ ಚಟುವಟಿಕೆಗಳ ಮೂಲಕ ರಾಯಚೂರಿನಲ್ಲಿ ಶೂನ್ಯ ನೆರಳಿನ ಸಮಯ ಮಧ್ಯಾಹ್ನ 12 ಗಂಟೆ 17 ನಿಮಿಷಗಳು ಎಂದು ಪ್ರಾತ್ಯಕ್ಷಿಕೆ ಮೂಲಕ ಕಂಡುಕೊಳ್ಳಲಾಯಿತು. ಈ ವೇಳೆ ಶಿಕ್ಷಕರು, ವಿದ್ಯಾರ್ಥಿಗಳು, ಪೋಷಕರು ಹಾಗೂ ವಿಜ್ಞಾನ ಕೇಂದ್ರದ ಸಿಬ್ಬಂದಿ ಇದ್ದರು.

### ಕಾರ್ಖಾನೆಗಳ ಧೂಳಿಗೆ ಕಂಗೆಟ್ಟಿರುವ ಕಾರೆಕಲ್ ಜನತೆ

# ಜನ, ಜಾನುವಾರು, ಕೃಷಿಗೆ ಬಹು ಸಮಸ್ಯೆ: ಕಣ್ಮುಚ್ಚಿ ಕುಳಿತ ಪರಿಸರ ಇಲಾಖೆ

**ಬಳ್ಳಾರಿ, ಮೇ.05–** ತಾಲೂಕಿನ ಕಾರೆಕಲ್ ಗ್ರಾಮದ ಬಳಿ ಇರುವ ಜಾನಕಿ ಕಾರ್ಪ್ ಮತ್ತು ಬಸಾಯಿ (ಎ1) ಸ್ಟೀಲ್ ಕಾರ್ಖಾನೆಗಳ ಧೂಳುನಿಂದ ಕಾರೆಕಲ್ ಗ್ರಾಮದ ಜನತೆ ಕಂಗೆಟ್ಟಿದ್ದಾರೆ.

ಕಳೆದ ಎರಡು ದಶಕಗಳಿಂದ ಈ ಕಾರ್ಖಾನೆಗಳು ಇಲ್ಲಿ ಕಾರ್ಯನಿರ್ವಹಿಸುತ್ತಿವೆ. ಆರಂಭದ ವರ್ಷಗಳಲ್ಲಿ ಕಾರ್ಖಾನೆಯಿಂದ ಹೊರ ಹೊಮ್ಮುವ ಧೂಳನ್ನು ನಿಯಂತ್ರಿಸುವ ಕಾರ್ಯ ಸರಿಯಾದ ರೀತಿಯಲ್ಲಿ ನಡೆಯುತ್ತಿತ್ತು. ತದನಂತರ ಸಣ್ಣದಾಗಿ ಧೂಳಿನ ಪ್ರಮಾಣ ಹೆಚ್ಚಿತು. ಈ ಬಗ್ಗೆ ಪರಿಸರ ಇಲಾಖೆಗೆ, ಜಿಲ್ಲಾಡಳಿತಕ್ಕೆ ದೂರು ಸಲ್ಲಿಸಿದಾಗ ಧೂಳನ್ನು ನಿಯಂತ್ರಿಸುವ ಕಾರ್ಯ ನಡೆಯುತ್ತಿತ್ತು. ಆದರೆ ಇತ್ತೀಚಿನ ಕೆಲದಿನಗಳಿಂದ ರಾತ್ರಿ ವೇಳೆ ಧೂಳನ್ನು ನಿಯಂತ್ರಿಸದೇ ಹೊರ ಬಿಡುತ್ತಿರುವುದು ಕಾರೆಕಲ್ ಗ್ರಾಮದ ಜನರ ಬದುಕು ನರಕವಾಗಿದೆ.



ಕಾರ್ಖಾನೆಗಳಿಂದ ಹೊರಹೊಮ್ಮುತ್ತಿರುವ ಹೊಗೆ, ಬೂದಿ, ನೀರಿನ ಮೇಲೆ ಬಿದ್ದಿರುವ ಮಸಿಯ ಚಿತ್ರ.

ಮನೆ ಹೊರಗೆ, ಬಟ್ಟೆಗಳ ಮೇಲೆ, ನೀರಿನ ಮೇಲೆ, ಮನೆ ಚಾವಡಿಗಳ ಮೇಲೆ, ಎಲ್ಲಿ ನೋಡಿದರೂ ಕರಿ ಬೂದಿ(ಮಸಿ) ಬಂದು ಬೀಳುತ್ತಿದೆ. ರಾತ್ರಿ ಸಮಯದಲ್ಲಿ ಮಾಳಿಗೆ ಮೇಲೆ ಮಲಗಿದರೆ ಬಾಯಿ, ಮೂಗಿನ ತುಂಬೆಲ್ಲಾ ಈ ಧೂಳು ಹರಡುವ ಪರಿಸ್ಥಿತಿ ಇದೀಗ ಏರ್ಪಟ್ಟಿದೆ. ಉಸಿರಾಟದಲ್ಲೂ ತೊಂದರೆಯಾಗಿ ಗ್ರಾಮದ ಜನರಲ್ಲಿ ಕ್ಷಯ, ಅಸ್ತಮಾ ಮತ್ತು ಚರ್ಮ ರೋಗಕ್ಕೆ ಕಾರಣವಾಗಿದೆ. ಈ ರೀತಿ ಧೂಳಿನಿಂದ ಆಗುತ್ತಿರುವ ಕಾರ್ಖಾನೆಯ ಅಧಿಕಾರಿಗಳಾದ ಶ್ರೀನಿವಾಸ್, ನರಹರಿರೆಡ್ಡಿ, ಅನ್ವರ್ ಭಾಷಾ ಅವರುಗಳಿಗೆ ತಿಳಿಸಿದರೆ ಧೂಳು ನಿಯಂತ್ರಿಸಲಿದೆ ಎಂದು ಒಮ್ಮೆ ಹೇಳುವುದು, ಮತ್ತೊಮ್ಮೆ ಧೂಳು ಬರುತ್ತೆ ಏನು ಮಾಡಬೇಕು, ಯಾರಿಗಾದರೂ ಕಂಪ್ಲೈಂಟ್ ಮಾಡಿ ನಮ್ಮನ್ನು ಯಾರು ಏನು ಮಾಡಿಕೊಳ್ಳಲಾಗಲ್ಲ ಎಂಬ ಗರ್ವದ ಮಾತುಗಳನ್ನಾಡುತ್ತಾರೆ. ಅದಕ್ಕಾಗಿ ಗ್ರಾಮೀಣ ಶಾಸಕರಾದ ಬಿ.ನಾಗೇಂದ್ರ ಅವರು, ತಹಶೀಲ್ದಾರ್ ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ, ಈ ಸಮಸ್ಯೆ ಬಗ್ಗೆ ಜನರೊಂದಿಗೆ ಸಮಾಲೋಚನೆ ಮಾಡಿ ವಾಸ್ತವವನ್ನು ಅರಿಯಬೇಕಿದೆ.

ಈ ಸಮಸ್ಯೆ ಅರಿಯಬೇಕಾದರೆ ಜಿಲ್ಲಾಡಳಿತ ಅನೀರಿಕ್ಷಿತವಾಗಿ ಕಾರ್ಖಾನೆಗಳಿಗೆ ಭೇಟಿ ನೀಡಿ, ಅಲ್ಲಿನ ಸಮಸ್ಯೆ ಕುರಿತು ನಿಷ್ಪಕ್ಷಪಾತವಾಗಿ ಪರೀಕ್ಷೆ ನಡೆಸಿ ಕಾರ್ಖಾನೆ ಮೇಲೆ ಕ್ರಮ ತೆಗೆದುಕೊಂಡು ಗ್ರಾಮದ ಜನರ, ಜಾನುವಾರುಗಳಿಗೆ ಮತ್ತು ಕೃಷಿಗೆ ಆಗುತ್ತಿರುವ ಸಮಸ್ಯೆಯನ್ನು ಪರಿಹರಿಸಬೇಕೆಂದು ಗ್ರಾಮದ ಲಕ್ಷ್ಮಣಗೌಡ, ಲಿಂಗಯ್ಯಸ್ವಾಮಿ, ಚೆನ್ನವೀರೇಶ್, ತಿಪ್ಪನಗೌಡ, ಮಂಜುನಾಥಗೌಡ ಮೊದಲಾದವರು ಮನವಿ ಮಾಡಿದ್ದಾರೆ.

### ಸಂಡೂರು ತಾಲೂಕಿನ ಇನಾಂ ಗ್ರಾಮಗಳ ಸರ್ವೇ ಸೆಟಲ್‌ಮೆಂಟ್ ಪ್ರಾಥಮಿಕ ಅಧಿಸೂಚನೆ ಪ್ರಕಟ

# ಮುರಾರಿಪುರ ಗ್ರಾಮದ ಪ್ರಾಥಮಿಕ ಅಧಿಸೂಚನೆ ಪ್ರಕಟ: ತಕರಾರುಗಳಿದ್ದಲ್ಲಿ 3 ತಿಂಗಳೊಳಗಾಗಿ ಸಲ್ಲಿಸಿ

**– ಡಾ.ಆಕಾಶ ಶಂಕರ್**

**ಬಳ್ಳಾರಿ, ಮೇ 06:** ಜಿಲ್ಲೆಯ ಸಂಡೂರು ತಾಲೂಕಿನ ಇನಾಂ ಗ್ರಾಮಗಳನ್ನು ಸರ್ವೇ ಸೆಟಲ್ ಮೆಂಟ್ ಮಾಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಮತ್ತು ತಕರಾರುಗಳಿದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ 3 ತಿಂಗಳೊಳಗಾಗಿ ಸಂಡೂರು ತಾಲೂಕು ಕಚೇರಿಯಲ್ಲಿ ಸಲ್ಲಿಸಬೇಕು ಎಂದು ಬಳ್ಳಾರಿ ಸಹಾಯಕ ಆಯುಕ್ತ ಡಾ.ಆಕಾಶ ಶಂಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಡೂರು ತಾಲೂಕಿನಲ್ಲಿರುವ ಗ್ರಾಮಗಳಾದ ಧರ್ಮಾಪುರ, ಕಾರ್ತಿಕೇಶ್ವರ, ದೇವಗಿರಿ, ಸುಶೀಲಾ ನಗರ, ಸಿದ್ದಾಪೂರ, ರಾಮಘಡ, 18–ಹುಲಿಕುಂಟೆ, ರಣಜಿತಪುರ, ಶಂಕ್ರಾಪುರ, ಮುರಾರಿಪುರ, ಎಸ್.ಓಬಳಾಪುರ, ಜೋಡಿ ಬೊಮ್ಮನಹಳ್ಳಿ, ಜೋಡಿ ಕಸಿನಾಯ್ಕನಹಳ್ಳಿ ಮತ್ತು ತಿಪ್ಪನಮರಡಿ ಈ ಗ್ರಾಮಗಳ ಸರ್ವೆ ಸೆಟಲ್‌ಮೆಂಟ್ ಕಾರ್ಯ ಕೈಗೊಳ್ಳಬೇಕಿದ್ದು, ಈ ಗ್ರಾಮಗಳಲ್ಲಿ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ:106, 112, 114, 116 ರ ಪ್ರಕಾರ ಮರುಭೂಮಾಪನ ಜಾರಿಗೊಳಿಸಿ ಸೆಟಲ್‌ಮೆಂಟ್ ಕಾರ್ಯ ಪೂರ್ಣ ಗೊಳಿಸಲು ಸರ್ಕಾರವು ಆದೇಶಿಸಿದೆ ಎಂದು ಅವರು ವಿವರಿಸಿದ್ದಾರೆ.

ಸಂಡೂರು ತಾಲೂಕಿನ 14 ಇನಾಂ ಗ್ರಾಮಗಳ ಪೈಕಿ 10 ಗ್ರಾಮಗಳು ಕರ್ನಾಟಕ (ಸಂಡೂರು ಪ್ರದೇಶ) ಇನಾಂಗಳ ರದ್ದಿಯಾತಿ ವ್ಯಾಪ್ತಿಗೆ ಮತ್ತು 3 ಗ್ರಾಮಗಳು ಮೈಸೂರು ಇನಾಂ ರದ್ದಿಯಾತಿ ವ್ಯಾಪ್ತಿಗೆ ಒಳಪಡುತ್ತವೆ. ಕರ್ನಾಟಕ (ಸಂಡೂರು ಪ್ರದೇಶ) ಇನಾಂಗಳ ರದ್ದಿಯಾತಿ ಅಧಿನಿಯಮ 1976 ಕಲಂ:8(2) ರಲ್ಲಿ ಜಿಲ್ಲಾಧಿಕಾರಿಗಳು ಅಥವಾ ಅವರ ಸ್ಥಾನದಲ್ಲಿ ವಿಶೇಷ ಜಿಲ್ಲಾಧಿಕಾರಿಗಳು ಸೆಟಲ್‌ಮೆಂಟ್ ಅಧಿಕಾರಿಯಾಗಿರುತ್ತಾರೆ. ಆದ್ದರಿಂದ ಸಂಡೂರು ತಾಲೂಕಿನ ಸದರಿ ಗ್ರಾಮಗಳ ಮರುಭೂಮಾಪನ ಕಾರ್ಯವು ಅಂತಿಮಗೊಂಡಿರುವು ದರಿಂದ ಸೆಟ್ಲಮೆಂಟ್ ಜಾರಿಗೊಳಿಸಲು ವಿಶೇಷ ಜಿಲ್ಲಾಧಿಕಾರಿಗಳ ಬದಲಾಗಿ ಸದರಿ ಅಧಿಕಾರವನ್ನು ಸರಕಾರವು ಬಳ್ಳಾರಿ ಉಪವಿಭಾಗಾಧಿಕಾರಿಗಳಿಗೆ ಪ್ರತ್ಯಾಯೋಜಿಸಿದ್ದು, ಬಳ್ಳಾರಿ ಸಹಾಯಕ ಆಯುಕ್ತರು ಈ ಗ್ರಾಮಗಳಿಗೆ ಸೆಟ್ಲಮೆಂಟ್ ಅಧಿಕಾರಿ ಯಾಗಿ ನೇಮಕ ಮಾಡಿದೆ ಎಂದು ಅವರು ತಿಳಿಸಿದ್ದಾರೆ.



ಆದ್ದರಿಂದ ಸೆಟ್ಲಮೆಂಟ್ ಅಧಿಕಾರಿಯಾಗಿರುವ ನಾನು 14 ಇನಾಂ ಗ್ರಾಮಗಳಿಗೆ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಿ ನಿಯಮಾನುಸಾರ ಪ್ರಕ್ರಿಯೆ ಕೈಗೊಂಡು ಅಂತಿಮ ಪಟ್ಟಿ ಸಲ್ಲಿಸಲು ವಿವಿಧ ತಾಲೂಕು ಮಟ್ಟದ ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ಅದರಂತೆ ಮುರಾರಿಪುರ ಗ್ರಾಮದ ದಾಖಲೆಗಳನ್ನು ಪರಿಶೀಲಿಸಿ ಈ ಕೆಳಕಂಡ ಪಟ್ಟಿ ತಯಾರಿಸಲಾಗಿದೆ.

"ಮುರಾರಿಪುರ ಗ್ರಾಮಕ್ಕೆ ಸಂಬಂಧಿಸಿದಂತೆ ಒಟ್ಟು 119 ಸ.ನಂ.ಗಳು ಇರುತ್ತದೆ. ಇದರಲ್ಲಿ 72 ಸ.ನಂ.ಗಳು 'ಬ' ಖರಾಬುನಲ್ಲಿದ್ದು, 33 ಸ.ನಂ.ಗಳಲ್ಲಿ ಫಾರಂ–2 ನೀಡಿರುವುದು ಕಂಡುಬಂದಿರುತ್ತದೆ. ಉಳಿದಂತೆ 14 ಸ.ನಂ.ಗಳು ನಾರಿಹಳ್ಳ ಜಲಾಶಯ ಮತ್ತು ರಸ್ತೆಗೆ ಭೂಸ್ವಾಧೀನಗೊಂಡಿರುತ್ತವೆ."

ಈ ಗ್ರಾಮಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಅಧಿಸೂಚನೆಯನ್ನು ಈ ಮೂಲಕ ಹೊರಡಿಸಲಾಗಿದೆ ಎಂದು ತಿಳಿಸಿರುವ ಸಹಾಯಕ ಆಯುಕ್ತ ಡಾ.ಆಕಾಶ ಶಂಕರ್ ಅವರು ಈ ಪಟ್ಟಿಯನ್ನು ಸಂಡೂರು ತಾಲೂಕಿನ ಸಂಡೂರು ಹೋಬಳಿಯ ಮುರಾರಿಪುರ ಗ್ರಾಮಲೆಕ್ಕಾಧಿಕಾರಿಗಳ ಕಾರ್ಯಾಲಯದ ಚಾವಡಿಯಲ್ಲಿ, ಗ್ರಾಮ ಪಂಚಾಯತಿಗಳ ಚಾವಡಿಯಲ್ಲಿ ಮತ್ತು ತಾಲೂಕು ಕಛೇರಿಯ ನೋಟಿಸ್ ಬೋರ್ಡಿನಲ್ಲಿ ಹಾಗೂ ಇತರೆ ಸೂಕ್ತ ಸ್ಥಳಗಳಲ್ಲಿ ನಿಯಮಾನುಸಾರ ಪ್ರಚಾರಪಡಿಸಲಾಗಿದೆ.

ಸದರಿ ಅಧಿಸೂಚನೆಗೆ ಯಾವುದೇ ತಕಾರಾರು ಇದ್ದಲ್ಲಿ ಸೂಕ್ತ ದಾಖಲೆಗ ಳೊಂದಿಗೆ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 119 ರ ಅನ್ವಯ 3 ತಿಂಗಳೊಳಗಾಗಿ ಸಂಡೂರು ತಾಲೂಕು ಕಛೇರಿಯಲ್ಲಿ ನಿಗದಿಪಡಿಸಿರುವ ಅಧಿಕಾರಿ/ ಸಿಬ್ಬಂದಿಯವರಲ್ಲಿ ಸಲ್ಲಿಸಲು ಅವರು ಸೂಚನೆ ನೀಡಿದ್ದಾರೆ.

### ಆದ್ಯಗುರು ಶ್ರೀ ಶಂಕರಾಚಾರ್ಯರ ಜಯಂತ್ಯುತ್ಸವ

# ಸಂಸ್ಕೃತಿ, ಪರಂಪರೆಯ ಮಹಾನ್ ಚೇತನ ಶಂಕರಾಚಾರ್ಯರು: ಬಿ.ಶ್ರೀರಾಮುಲು

**ಬಳ್ಳಾರಿ, ಮೇ 06–** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಮತ್ತು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ನಗರದ ಸಂಗನಕಲ್ಲು ರಸ್ತೆಯ ಶೃಂಗೇರಿ ಶ್ರೀ ಶಾರದ ಶಂಕರ ಮಠದಲ್ಲಿ ಆದ್ಯ ಗುರು ಶ್ರೀ ಶಂಕರಚಾರ್ಯರ ಜಯಂತ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಲಾಯಿತು.

ಜಯಂತ್ಯೋತ್ಸವಕ್ಕೆ ಸಾರಿಗೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವರು ಹಾಗೂ ಆದ್ಯ ಗುರು ಶ್ರೀ ಶಂಕರಚಾರ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮೂಲಕ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಶ್ರೀರಾಮುಲು ಅವರು ಚಾಲನೆ ನೀಡಿದರು.



ಶ್ರೀ ಶಂಕರಾಚಾರ್ಯರ ಜಯಂತೋತ್ಸವದ ಚಿತ್ರ.

ಈ ಸಂದರ್ಭದಲ್ಲಿ ಮಾತನಾಡಿದ ಅವರು ಜ್ಞಾನವೇ ಬೆಳಕು, ಜ್ಞಾನದಿಂದಲೇ ಸಾಕ್ಷಾತ್ಕಾರ, ಜ್ಞಾನದಿಂದಲೇ ಮುಕ್ತಿ ಎಂಬ ಸತ್ಯ ಜಗತ್ತಿಗೆ ಹೇಳಿಕೊಟ್ಟವರು ಶಂಕರರು. "ಆತ್ಮವೇ ಪರಮಾತ್ಮ" ನೆಂಬ ಸತ್ಯ ಮನುಕುಲಕ್ಕೆ ತೋರಿದವರು ಅವರು. ಯಾರು ಸಮಸ್ತ ಸೃಷ್ಟಿಗೆ ಒಳಿತು ಮಾಡುತ್ತಾನೋ ಆತನೇ ಶಂಕರ ಎನ್ನುವ ಮೂಲಕ ಇಡೀ ಮನುಕುಲದ ಶ್ರೇಯಸ್ಸಿನಲ್ಲೇ ಶಂಕರನು ಇದ್ದಾನೆ ಎಂದು ತೋರಿಸಿ ಕೊಟ್ಟ ಗುರುಗಳು ಶಂಕರಾಚಾರ್ಯರು ಎಂದರು.

ಶ್ರೀ ಆದಿ ಶಂಕರಾಚಾರ್ಯ ಅವರು ಮನುಕುಲಕ್ಕೆ ಬೆಳಕು, ಭವ್ಯ ಭಾರತದ ಸನಾತನ ಸಂಸ್ಕೃತಿಯ ಶಕ್ತಿ ಮತ್ತು ನಮ್ಮ ಧರ್ಮ, ನಮ್ಮ ಸಂಸ್ಕೃತಿ, ನಮ್ಮ ಪರಂಪರೆಯ ಮಹಾನ್ ಚೇತನ ಆಗಿದ್ದರು ಮತ್ತು ಅವರ ತತ್ವಾದರ್ಶಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು. ಭಾರತದ 4 ದಿಕ್ಕುಗಳಲ್ಲಿ ಅಂದರೆ ಉತ್ತರದಲ್ಲಿ ಬದರಿ ಪೀಠ, ದಕ್ಷಿಣದಲ್ಲಿ ಶೃಂಗೇರಿ ಪೀಠ, ಪೂರ್ವದಲ್ಲಿ ಪುರಿ ಪೀಠ, ಪಶ್ಚಿಮದಲ್ಲಿ ದ್ವಾರಕಾ ಪೀಠ ಹೀಗೆ 4 ಪೀಠಗಳು ಸ್ಥಾಪಿಸಿದ ಶಂಕರಾಚಾರ್ಯರು, ಅವುಗಳು ಇಂದಿಗೂ ಮನುಕುಲಕ್ಕೆ ಆಧಾರಸ್ತಂಭವಾಗಿ, ಧರ್ಮಜ್ಯೋತಿ, ಜ್ಞಾನಜ್ಯೋತಿಗಳಾಗಿ ಬೆಳಗುತ್ತಿವೆ ಎಂದರು.

ಕೇವಲ 32 ವರ್ಷದ ಅವರ ಜೀವಿತಾವಧಿಯಲ್ಲಿ ಜಾತಿ, ಮತ, ಪಂಥಗಳಿಗೆ ಸೀಮಿತವಾಗದೆ ಇಡೀ ಮನುಕುಲದ ಒಳಿತಿಗೆ ಅವರು ಹಾಕಿಕೊಟ್ಟ ಬುನಾದಿ, ಸೂರ್ಯ–ಚಂದ್ರರು ಇರುವವರೆಗೂ ಮನುಕುಲವನ್ನ ಬೆಳಗಲಿದೆ ಎಂದು ಹೇಳಿದರು.

# ಇಂದು ಮಕ್ಕಳ ನೃತ್ಯ ಮತ್ತು ಸಂಗೀತ ಬೇಸಿಗೆ ಶಿಬಿರ




**ಬಳ್ಳಾರಿ, ಮೇ.06–** ಶ್ರೀ ಗುರು ಪುಟ್ಟರಾಜ ಸಂಗೀತ ಪಾಠ ಶಾಲೆ ಬಳ್ಳಾರಿ ಹಾಗೂ ಅಲಾಪ್ ಸಂಗೀತ ಕಲಾ ಟ್ರಸ್ಟ್ ಬಳ್ಳಾರಿ ಸಂಯುಕ್ತಾಶ್ರಯದಲ್ಲಿ ಮಕ್ಕಳ ಬೇಸಿಗೆ ಶಿಬಿರ ನೃತ್ಯ ಮತ್ತು ಸಂಗೀತ ಕಾರ್ಯಕ್ರಮವನ್ನು ದಿನಾಂಕ 07–05–2022 ಸಂಜೆ 6 ಗಂಟೆಗೆ ರಾಘವ ಕಲಾ ಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮಕ್ಕೆ ಕಲಾಭಿಮಾನಿಗಳು, ಕಲಾ ಸಂಘಟಕರು, ಸಂಗೀತ ಪ್ರಿಯರು, ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೆ ದೊಡ್ಡಬಸಪ್ಪ ಗವಾಯಿ ಅಧ್ಯಕ್ಷರು ಶ್ರೀ ಗುರು ಪುಟ್ಟರಾಜ ಸಂಗೀತ ಪಾಠ ಶಾಲೆ ಬಳ್ಳಾರಿ, ರಮಣಪ್ಪ ಭಜಂತ್ರಿ ಅಧ್ಯಕ್ಷರು, ಕೆ.ಸುರೇಶ ಗೌರವ ಕಾರ್ಯದರ್ಶಿ ಅಲಾಪ್ ಸಂಗೀತ ಕಲಾ ಟ್ರಸ್ಟ್ ಬಳ್ಳಾರಿ ಇವತು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗಂಗೂಲಿ ಮನೆಯಲ್ಲಿ ಅಮಿತ್ ಶಾ ಭೋಜನ: 'ಕಮಲ' ಹಿಡಿತಾರಾ ಮಾಜಿ ಕ್ರಿಕೆಟಿಗ?



**ಕೋಲ್ಕತ್ತಾ ಮೇ.6–**ಮಾಜಿ ಕ್ರಿಕೆಟಿಗ ಸೌರವ್ ಗಂಗೂಲಿ ಬಿಜೆಪಿ ಪಕ್ಷ ಸೇರುತ್ತಾರೆಂಬ ಗುಸುಗುಸು ಮತ್ತೆ ಮುನ್ನೆಲೆಗೆ ಬಂದಿದೆ. ಇದಕ್ಕೆ ಪುಷ್ಠಿ ನೀಡಿರೋದು ಗಂಗೂಲಿ ಮನೆಯಲ್ಲಿ ಅಮಿತ್ ಶಾ ಅವರಿಗೆ ಆಯೋಜಿಸಿದ್ದ ಡಿನ್ನರ್ ಪಾರ್ಟಿ. ಕೋಲ್ಕತ್ತಾ ಪ್ರವಾಸದಲ್ಲಿರುವ ಗೃಹ ಸಚಿವ ಅಮಿತ್ ಶಾ ಅವರು ಇಂದು ರಾತ್ರಿ ಬಿಸಿಸಿಐ ಮುಖ್ಯಸ್ಥ ಹಾಗೂ ಮಾಜಿ ಕ್ರಿಕೆಟಿಗ ಸೌರವ್ ಗಂಗೂಲಿ ಅವರ ಮನೆಯಲ್ಲಿ ಭೋಜನ ಸವಿದರು.

ಆದರೆ ಕೇಂದ್ರ ಸಚಿವ ಅಮಿತ್ ಶಾ ಅವರ ಪುತ್ರ ಜಯ್ ಶಾ ಅವರು ಸೌರವ್ ಗಂಗೂಲಿ ಅವರ ಸಹೋದ್ಯೋಗಿಯಾಗಿದ್ದು,ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ಅಥವಾ ಬಿಸಿಸಿಐನಲ್ಲಿ ಗೌರವ ಕಾರ್ಯದರ್ಶಿಯಾಗಿರುವುದರಿಂದ ಈ ಭೇಟಿಯನ್ನು ಸೌಜನ್ಯದ ಭೇಟಿ ಎಂದು ಹೇಳಲಾಗಿದೆ.

ಭೋಜನ ಕೂಟದ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಸೌರವ್ ಗಂಗೂಲಿ, ಸಭೆಯಲ್ಲಿ ರಾಜಕೀಯವಾಗಿ ಏನೂ ನಡೆದಿಲ್ಲ. ಒಂದು ದಶಕದಿಂದ ಅಮಿತ್ ಶಾ ಅವರನ್ನು ಬಲ್ಲೆ ಮತ್ತು ಹಲವಾರು ಬಾರಿ ಭೇಟಿಯಾಗಿದ್ದೇನೆ ಎಂದು ಹೇಳಿದರು. ಅಮಿತ್ ಶಾ ಅವರಿಗೆ ಸಸ್ಯಾಹಾರಿ ಊಟವನ್ನ ನೀಡಲಾಗಿದೆ ಎಂದು ತಿಳಿದುಬಂದಿದೆ.

ಗಂಗೂಲಿ ಮತ್ತು ಅಮಿತ್ ಶಾ ಅವರೊಂದಿಗಿನ ಭೇಟಿಯು ರಾಜಕೀಯ ಕೋನಕ್ಕೆ ತಿರುಗಿರೋದು ಇದೇ ಮೊದಲಲ್ಲ. ಕಳೆದ ವರ್ಷದ ಆರಂಭದಲ್ಲಿ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಗೆ ಮುನ್ನ, ಅವರು ಅಮಿತ್ ಶಾ ಅವರೊಂದಿಗಿನ ಭೇಟಿಯ ಬಗ್ಗೆ ಸುದ್ದಿ ಹರಡಿ, ಗಂಗೂಲಿ ಬಿಜೆಪಿ ಸೇರುತ್ತಾರೆಂಬ ಮಾತು ಜೋರಾಗಿತ್ತು. ಆದ್ರೆ ಇದನ್ನ ಸೌರವ್ ಗಂಗೂಲಿ ತಳ್ಳಿಹಾಕಿದ್ದರು.

2015 ರಿಂದಲೂ ಬಂಗಾಳದಲ್ಲಿ ಗಂಗೂಲಿ ಬಿಜೆಪಿ ಪರವಾಗಿ ಚುನಾವಣೆಗೆ ಸ್ಪರ್ಧಿಸ್ತಾರೆಂದು ದಾದಾ ವರ್ಸಸ್ ದೀದಿ ಎಂದೇ ಮಮತಾ ಬ್ಯಾನರ್ಜಿ ನಾಡಲ್ಲಿ ಗುಲ್ಲೆಬ್ಬಿಸಲಾಗ್ತಿತ್ತು. ಕಳೆದ ವರ್ಷ ಜನವರಿಯಲ್ಲೂ, ಬಂಗಾಳ ವಿಧಾನಸಭಾ ಚುನಾವಣೆಗೆ ಮೂರು ತಿಂಗಳ ಮೊದಲು, ಅವರು ಬಿಜೆಪಿಯೊಂದಿಗೆ ಮಾತುಕತೆ ನಡೆಸುತ್ತಿದ್ದಾರೆ ಎಂದು ವ್ಯಾಪಕವಾಗಿ ವರದಿಯಾಗಿತ್ತು. ಆದರೆ ಅದೇ ತಿಂಗಳು ಗಂಗೂಲಿಗೆ ಲಘು ಹೃದಯಾಘಾತವಾಯಿತು. ರಾಜಕೀಯ ಸೇರುವ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ.

# ಕೋವಿಡ್ ಕಾರಣ ಏಷ್ಯನ್ ಗೇಮ್ಸ್ 2022 ಮುಂದೂಡಿಕೆ




**ಹ್ಯಾಂಗ್‌ಝೌ:, ಮೇ 6–**ಚೀನಾದ ಹ್ಯಾಂಗ್‌ಝೌ ನಗರದಲ್ಲಿ ಸೆಪ್ಟೆಂಬರ್‌ನಲ್ಲಿ ನಡೆಯಬೇಕಿದ್ದ ಏಷ್ಯನ್ ಗೇಮ್ಸ್ 2022 ಅನ್ನು ಕೋವಿಡ್ –19 ನಿಂದಾಗಿ 2023ಕ್ಕೆ ಮುಂದೂಡಲಾಗಿದೆ ಎಂದು ಒಲಿಂಪಿಕ್ ಕೌನ್ಸಿಲ್ ಆಫ್ ಏಷ್ಯಾ ಹೇಳಿದೆ.

44 ರಾಷ್ಟ್ರಗಳು ಮತ್ತು ಪ್ರಾಂತ್ಯಗಳಿಂದ 11,000 ಕ್ಕೂ ಹೆಚ್ಚು ಕ್ರೀಡಾಪಟುಗಳಿಗೆ ಆತಿಥ್ಯ ವಹಿಸಲು ಸರೋವರದ ನಗರವು ಸಿದ್ಧವಾಗಿರುವುದರಿಂದ ಕ್ರೀಡಾಕೂಟಕ್ಕಾಗಿ ಎಲ್ಲಾ 56 ಸ್ಪರ್ಧಾತ್ಮಕ ಸ್ಥಳಗಳು ಪೂರ್ಣಗೊಂಡಿವೆ ಮತ್ತು ಕೋವಿಡ್–19 ಪರೀಕ್ಷೆಗಳು ಮುಂದುವರಿಯುತ್ತಿವೆ ಎಂದು ಹ್ಯಾಂಗ್‌ಝೌ ಸಂಘಟಕರು ಏಪ್ರಿಲ್ ಆರಂಭದಲ್ಲಿ ಹೇಳಿದ್ದರು.

ಇದೀಗ ಚೀನಾದ ಶಾಂಘೈ ಸೇರಿದಂತೆ ಹಲವೆಡೆ ಕೊರೋನಾ ಪ್ರಕರಣಗಳು ಹೆಚ್ಚಳ ಕಾಣುತ್ತಿರುವುದರಿಂದ 2023ಕ್ಕೆ ಮುಂದೂಡುತ್ತಿದೆ. ಈ ವರ್ಷದ ಆರಂಭದಲ್ಲಿ ಬೀಜಿಂಗ್‌ನಲ್ಲಿ ಚಳಿಗಾಲದ ಒಲಿಂಪಿಕ್ಸ್ ಗೆ ಆತಿಥ್ಯ ವಹಿಸಲು ಚೀನಾಕ್ಕೆ ಸಾಧ್ಯವಿದ್ದರೂ ಈ ನಿರ್ಧಾರ ಬಂದಿದೆ. ಕಟ್ಟುನಿಟ್ಟಾದ ಕೋವಿಡ್ –19 ಮಾರ್ಗಸೂಚಿಗಳು ಸ್ಥಳದಲ್ಲಿವೆ ಮತ್ತು ಫೆಬ್ರವರಿ 2022 ರಲ್ಲಿ ಮುಚ್ಚಿದ ಬಾಗಿಲುಗಳ ಹಿಂದೆ ಆಟಗಳನ್ನು ನಡೆಸಲಾಯಿತು.

ಗಮನಾರ್ಹವಾಗಿ, ಭಾರತದ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಕಳೆದ ತಿಂಗಳು ಏಷ್ಯನ್ ಗೇಮ್ಸ್‌ನಲ್ಲಿ ಭಾರತ ಭಾಗವಹಿಸುವ ಬಗ್ಗೆ ಚೀನಾದ ಪರಿಸ್ಥಿತಿಯ ಮೌಲ್ಯಮಾಪನವನ್ನು ಅವಲಂಬಿಸಿ ನಿರ್ಧರಿಸಲಾಗುವುದು ಎಂದು ಹೇಳಿದ್ದರು.



■ ಫಾರ್ಮ್‌ಗೆ ಮರಳಿದ ರೋಹಿತ್: ಮುಂಬೈನ ಬ್ರೆಬೋರ್ನ್ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಮುಂಬೈ ಇಂಡಿಯನ್ಸ್ ಹಾಗೂ ಗುಜರಾತ್ ಟೈಟನ್ಸ್ ವಿರುದ್ಧದ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ತಂಡದ ನಾಯಕ ರೋಹಿತ್ ಶರ್ಮಾ ಅದ್ಭುತ ಬ್ಯಾಟಿಂಗ್ ಪ್ರದರ್ಶನ ನೀಡುವ ಮೂಲಕ ಫಾರ್ಮ್‌ಗೆ ಮರಳಿರುವುದನ್ನು ಸಾಬೀತು ಪಡಿಸಿದರು

# ಉಕ್ರೇನ್ ಸಂಘರ್ಷ: ಭಾರತದ್ದು ಶಾಂತಿ ಪರ ನಿಲುವು–ತ್ರಿಮೂರ್ತಿ




**ವಿಶ್ವಸಂಸ್ಥೆ, ಮೇ 6–** ಉಕ್ರೇನ್ ಸಂಘರ್ಷದಲ್ಲಿ ಯಾರೂ ಗೆಲ್ಲುವುದಿಲ್ಲ. ಇದರಲ್ಲಿ ಭಾರತವು ಶಾಂತಿಯ ಪರವಾಗಿರುತ್ತದೆ ಎಂದು ವಿಶ್ವಸಂಸ್ಥೆಯ ಭದ್ರತಾ ಮಂಡಳಿಗೆ ಭಾರತದ ಖಾಯಂ ಪ್ರತಿನಿಧಿ ಟಿಎಸ್ ತ್ರಿಮೂರ್ತಿ ಹೇಳಿದ್ದಾರೆ.

ಯುಎನ್ ಸೆಕ್ಯುರಿಟಿ ಕೌನ್ಸಿಲ್‌ನಲ್ಲಿ ಉಕ್ರೇನ್‌ನ ಸ್ಥಾನದ ಕುರಿತು ನೇರ ಹೇಳಿಕೆ ನೀಡಿದ ತ್ರಿಮೂರ್ತಿ, "ಭಾರತವು ಸಂಪೂರ್ಣ ಕದನ ವಿರಾಮ ಮತ್ತು ಉಕ್ರೇನ್ ವಿವಾದವನ್ನು ಮಾತುಕತೆ ಮತ್ತು ರಾಜತಾಂತ್ರಿಕತೆಯ ಮೂಲಕ ಪರಿಹಾರ ಕಂಡುಕೊಳ್ಳುವುದನ್ನು ಬೆಂಬಲಿಸುತ್ತದೆ. ಭಾರತವು ಬೂಚಾದಲ್ಲಿ ನಾಗರಿಕ ಸಾವುನೋವುಗಳನ್ನು ಬಲವಾಗಿ ಟೀಕಿಸುತ್ತದೆ. ಈ ವಿಷಯದ ಬಗ್ಗೆ ಸ್ವತಂತ್ರ ತನಿಖೆಯ ಬೇಡಿಕೆಯನ್ನು ಭಾರತ ಆಗ್ರಹಿಸುತ್ತದೆ. ಭಾರತವು ಈ ಯುದ್ಧದಲ್ಲಿ ನಾವು ಶಾಂತಿಯ ಪರವಾಗಿದ್ದು, ಉಕ್ರೇನ್ ಸಂಘರ್ಷದಲ್ಲಿ ಯಾರೂ ಗೆಲ್ಲುವುದಿಲ್ಲ. ಆದರೆ ಈ ಯುದ್ಧದಿಂದಾಗಿ ಜನರು ಅದರ ಪರಿಣಾಮ ಇನ್ನಷ್ಟು ಅನುಭವಿಸುತ್ತಾರೆ ಎಂದರು.

ಇದೇ ವೇಳೆ ಯುಎನ್ ಸೆಕ್ರೆಟರಿ ಜನರಲ್ ಅವರ ಕೈವ್ ಮತ್ತು ಮಾಸ್ಕೋ ಭೇಟಿ ಹಾಗೂ ಮಾತುಕತೆಯನ್ನು ತ್ರಿಮೂರ್ತಿ ಸ್ವಾಗತಿಸಿದರು. "ಯುದ್ಧ ಪೀಡಿತ ಪ್ರದೇಶದಿಂದ ಮುಗ್ಧ ಜನರನ್ನು ಸಾಧ್ಯವಾದಷ್ಟು ಬೇಗ ಸ್ಥಳಾಂತರಿಸುವುದು ಈ ಸಮಯದಲ್ಲಿ ಪ್ರಮುಖ ಆದ್ಯತೆಯಾಗಿದೆ. ಮರಿಯುಪೋಲ್‌ನಿಂದ ನಾಗರಿಕರನ್ನು ಸ್ಥಳಾಂತರಿಸುವುದನ್ನು ಭಾರತವೂ ಶ್ಲಾಘಿಸುತ್ತದೆ. ಇತರ ಕ್ಷೇತ್ರಗಳಲ್ಲಿಯೂ ಇದೇ ರೀತಿಯ ಪ್ರಯತ್ನಗಳನ್ನು ಮಾಡುವ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

"ಈ ಸಂಘರ್ಷವು ಗಡಿ ಪ್ರದೇಶಗಳನ್ನು ಅಸ್ಥಿರಗೊಳಿಸಿದ್ದು ಮಾತ್ರವಲ್ಲದೆ ಜಾಗತಿಕವಾಗಿ ಭಾರಿ ಪರಿಣಾಮಗಳನ್ನು ಬೀರಿದೆ. ತೈಲ ಬೆಲೆಗಳು ಗಗನಕ್ಕೇರುತ್ತಿದ್ದು, ಆಹಾರ ಧಾನ್ಯಗಳು ಮತ್ತು ರಸಗೊಬ್ಬರಗಳ ಕೊರತೆಯಿದೆ. ಇದೆಲ್ಲದರ ಕೆಟ್ಟ ಪರಿಣಾಮ ದಕ್ಷಿಣ ಮತ್ತು ಅಭಿವೃದ್ಧಿಶೀಲ ರಾಷ್ಟ್ರಗಳ ಮೇಲೆ ಬಿದ್ದಿದೆ. ಭಾರತವೂ ಉಕ್ರೇನ್‌ಗೆ ಹೆಚ್ಚಿನ ವೈದ್ಯಕೀಯ ನೆರವು ನೀಡುತ್ತಿದೆ. ಮಾನವೀಯ ಕಾರಿಡಾರ್‌ಗಳನ್ನು ಮಾಡಬೇಕೆಂಬ ಕರೆಯನ್ನು ನಾವು ಬೆಂಬಲಿಸುತ್ತೇವೆ. ಯುದ್ಧ ಪೀಡಿತ ಪ್ರದೇಶಕ್ಕೆ ಅಗತ್ಯವಾದ ಮಾನವೀಯ ಮತ್ತು ಅಗತ್ಯ ಪರಿಹಾರ ಸಾಮಗ್ರಿಗಳನ್ನು ಒದಗಿಸುತ್ತೇವೆ. ಅಂತರಾಷ್ಟ್ರೀಯ ಸಮುದಾಯವು ಸಹ ಇದೇ ರೀತಿಯ ಮಾನವೀಯ ಅಗತ್ಯಗಳನ್ನು ಪೂರೈಸುತ್ತವೆ ಎಂಬ ವಿಶ್ವಾಸವನ್ನು ತ್ರಿಮೂರ್ತಿ ವ್ಯಕ್ತಪಡಿಸಿದರು.

ವಿಶ್ವಸಂಸ್ಥೆಯ ಚಾರ್ಟರ್, ಅಂತರರಾಷ್ಟ್ರೀಯ ಕಾನೂನು ಮತ್ತು ದೇಶಗಳ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಆಧರಿಸಿದ ಸಮಕಾಲೀನ ಜಾಗತಿಕ ಕ್ರಮವನ್ನು ಗೌರವಿಸಬೇಕು ಎಂದು ಭರವಸೆ ನೀಡುವ ಮೂಲಕ ಅವರು ತಮ್ಮ ಸಂದೇಶವನ್ನು ಮುಕ್ತಾಯಗೊಳಿಸಿದರು. ಮಾನವೀಯ ನೆಲೆಯಲ್ಲಿ ಯಾವುದೇ ಕೆಲಸ ಮಾಡಿದರೂ ಮಾನವೀಯತೆ, ತಟಸ್ಥತೆ, ನಿಷ್ಪಕ್ಷಪಾತ ಮತ್ತು ಮುಕ್ತವಾಗಿ ನಡೆಯಬೇಕೇ ಹೊರತು ರಾಜಕೀಯ ಮಾಡಬಾರದು ಎಂದು ತ್ರಿಮೂರ್ತಿ ಹೇಳಿದರು.

# ನೇಪಾಳ: ಪರ್ವತಾರೋಹಣ ವೇಳೆ ಭಾರತೀಯನ ದುರಂತ ಸಾವು!



**ಕಠ್ಮಂಡು, ಮೇ 6–** ನೇಪಾಳದಲ್ಲಿ ವಿಶ್ವದ ಮೂರನೇ ಅತಿ ಎತ್ತರದ ಶಿಖರ ಕಾಂಚನಗಂಗಾ ಶಿಖರದ ಬಳಿ ಭಾರತೀಯ ಪರ್ವತಾರೋಹಿಯೊಬ್ಬರು ಸಾವನ್ನಪ್ಪಿದ್ದಾರೆ. ಈ ಬಗ್ಗೆ ಪರ್ವತಾರೋಹಣ ಯಾತ್ರೆಯ ಸಂಘಟಕರು ಶುಕ್ರವಾರ ದೃಢಪಡಿಸಿದ್ದಾರೆ. ಈ ವರ್ಷದ ಹಿಮಾಲಯದ ವಸಂತ ಆರೋಹಣ ಋತುವಿನ ಮೂರನೇ ಮಾರಣಾಂತಿಕ ಸಾವು ಇದಾಗಿದೆ.

52 ವರ್ಷದ ನಾರಾಯಣನ್ ಅಯ್ಯರ್ ಅವರು ಕಾಂಚನಗಂಗಾ ಪರ್ವತದ ತುದಿಯಲ್ಲಿ 8,200 ಮೀಟರ್ ಎತ್ತರದಲ್ಲಿ ಗುರುವಾರ ನಿಧನರಾಗಿದ್ದಾರೆ.

"ಅವರು ಇತರರಿಗಿಂತ ನಿಧಾನ ಗತಿಯಲ್ಲಿದ್ದರು ಮತ್ತು ನಮ್ಮಲ್ಲಿ ಇಬ್ಬರು ಮಾರ್ಗದರ್ಶಕರು ಅವರಿಗೆ ಸಹಾಯ ಮಾಡಿದರು. ಅವರು ತುಂಬಾ ದಣಿದಿದ್ದರಿಂದ ಸಂಚಾರದಲ್ಲಿ ಮುಂದುವರೆಯಲು ಸಾಧ್ಯವಾಗಲಿಲ್ಲ. ಕೊನೆಗೆ ಕುಸಿದುಬಿದ್ದರು" ಎಂದು ಪಯನೀರ್ ಅಡ್ವೆಂಚರ್ ಎಕ್ಸ್‌ಪೆಡಿಶನ್ ಕಂಪನಿಯ ನಿವೇಶ್ ಕರ್ಕಿ ತಿಳಿಸಿದ್ದಾರೆ.

ನಾರಾಯಣನ್ ಅಯ್ಯರ್ ಅವರ ಸಾವಿನ ಸುದ್ದಿಯನ್ನ ಅವರ ಕುಟುಂಬಕ್ಕೆ ತಿಳಿಸಿದ್ದು ಅವರ ಮೃತದೇಹ ಪತ್ತೆಗಾಗಿ ಪ್ರಯತ್ನಿಸಲಾಗ್ತಿದೆ ಎಂದಿದ್ದಾರೆ.

ನೇಪಾಳವು ಈ ಋತುವಿನಲ್ಲಿ 8,586 ಮೀಟರ್ ಎತ್ತರದ ಕಾಂಚನಗಂಗಾ ಹತ್ತಲು 68 ವಿದೇಶಿ ಪರ್ವತಾರೋಹಿಗಳಿಗೆ ಪರವಾನಗಿಗಳನ್ನು ನೀಡಿದೆ. ಗುರುವಾರ ಸಾಕಷ್ಟು ಮಂದಿ ಈ ಶಿಖರವನ್ನು ತಲುಪಿದ್ದಾರೆ

## ಬಾಹ್ಯಾಕಾಶ ನಿಲ್ದಾಣದಿಂದ ಭೂಮಿಗೆ ಹಿಂದಿರುಗಿದ ಗಗನಯಾತ್ರಿಗಳು

**ವಾಷಿಂಗ್ಟನ್ ಮೇ 6 –** ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಿಂದ (ಐಎಸ್‌ಎಸ್) ನಾಲ್ವರು ಗಗನಯಾತ್ರಿಗಳು ಭೂಮಿಗೆ ಹಿಂದಿರುಗಿದ್ದಾರೆ. ಅಮೆರಿಕದ ಬಾಹ್ಯಾಕಾಶ ನೌಕೆ "ಸ್ಪೇಸ್‌ಎಕ್ಸ್ ಕ್ರ್ಯೂ ಡ್ರ್ಯಾಗನ್" ಕ್ಯಾಪ್ಸುಲ್ ಶುಕ್ರವಾರ ಅಟ್ಲಾಂಟಿಕ್ ಸಾಗರಕ್ಕೆ ಅಪ್ಪಳಿಸಿತು. ನ್ಯಾಷನಲ್ ಏರೋನಾಟಿಕ್ಸ್ ಅಂಡ್ ಸ್ಪೇಸ್ ಅಡ್ಮಿನಿಸ್ಟ್ರೇಷನ್ (ನಾಸಾ) ಈ ಮಾಹಿತಿ ನೀಡಿದೆ.



ಗಗನಯಾತ್ರಿಗಳನ್ನು ಹೊತ್ತ ಕ್ಯಾಪ್ಸುಲ್ ಫ್ಲೋರಿಡಾದ ಕರಾವಳಿಯಲ್ಲಿ ಸಮುದ್ರದ ಮೇಲ್ಮೈಯನ್ನು 04:43ಕ್ಕೆ ಅಪ್ಪಳಿಸಿತು. ನಾಸಾ ಗಗನಯಾತ್ರಿಗಳಾದ ಟಾಮ್ ಮಾರ್ಷ್‌ಬರ್ನ್, ರಾಜಾ ಚಾರಿ, ಕೈಲಾ ಬ್ಯಾರನ್ ಮತ್ತು ಜರ್ಮನಿಯ ಯುರೋಪಿಯನ್ ಬಾಹ್ಯಾಕಾಶ ಸಂಸ್ಥೆ (ಇಎಸ್‌ಎ) ಗಗನಯಾತ್ರಿ ಮಥಿಯಾಸ್ ಮೌರರ್ ಅವರನ್ನು ಮರಳಿ ಕರೆತರಲಾಯಿತು.

ಗಗನಯಾತ್ರಿಗಳು ನವೆಂಬರ್ 2021 ರಿಂದ ಕ್ರ್ಯೂ–3 ವರ್ಕಿಂಗ್ ಮಿಷನ್‌ನ ಭಾಗವಾಗಿ ಐಐಐ ನಲ್ಲಿ ಕೆಲಸ ಮಾಡುತ್ತಿದ್ದರು. ಬಾಹ್ಯಾಕಾಶ ನೌಕೆ ಗುರುವಾರ ಕಕ್ಷೆಯ ಕೇಂದ್ರದಿಂದ ಹೊರಟು ಸುಮಾರು 24 ಗಂಟೆಗಳನ್ನು ಭೂಮಿಗೆ ತಲುಪಲು ತೆಗೆದುಕೊಂಡಿತು.

ರಷ್ಯಾದ ಗಗನಯಾತ್ರಿಗಳಾದ ಒಲೆಗ್ ಆರ್ಟೆಮಿಯೆವ್, ಸೆರ್ಗೆಯ್ ಕೊರ್ಸಕೋವ್ ಮತ್ತು ಡೆನಿಸ್ ಮ್ಯಾಟ್ವೀವ್, ಹಾಗೆಯೇ ಅಮೇರಿಕನ್ ಗಗನಯಾತ್ರಿಗಳಾದ ಕೆಜೆಲ್ ಲಿಂಡ್‌ಗ್ರೆನ್, ಬಾಬ್ ಹೈನ್ಸ್, ಜೆಸ್ಸಿಕಾ ವಾಟ್ಕಿನ್ಸ್ ಮತ್ತು ಇಟಲಿಯ ಸಮಂತಾ ಕ್ರಿಸ್ಟೋಫೊರೆಟ್ಟಿ ಪ್ರಸ್ತುತ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ ಕೆಲಸ ಮಾಡುತ್ತಿದ್ದಾರೆ.

## 'ವಿಜಯ ದಿನ'ವನ್ನು ಆಚರಿಸದಿರಲು ಉಕ್ರೇನ್ ನಿರ್ಧಾರ



**ಕೈವ್: ಮೇ 6–** ಉಕ್ರೇನಿಯನ್ ರಾಜಧಾನಿ ಕೈವ್‌ನಲ್ಲಿನ ಅಧಿಕಾರಿಗಳು ಮೇ 9 ರಂದು ವಿಜಯ ದಿನವನ್ನು ಆಚರಿಸದಿರಲು ನಿರ್ಧರಿಸಿದ್ದಾರೆ. 1945ರ ವಿಶ್ವಯುದ್ಧ 2ರ ನಾಜಿ ಜರ್ಮನಿಯ ವಿರುದ್ಧದ ವಿಜಯದ ಸ್ಮರಣಾರ್ಥವಾಗಿ ಉಕ್ರೇನ್‌ನಲ್ಲಿ ವಿಜಯ ದಿನವನ್ನು ಆಚರಿಸಿಕೊಂಡು ಬರಲಾಗುತ್ತಿತ್ತು. ಆದರೆ, ರಷ್ಯಾ ದಾಳಿಯ ಬಳಿಕ ಅಲ್ಲಿ ಯುದ್ಧ ಕಾನೂನುಗಳು ಜಾರಿಯಲ್ಲಿ ಇರುವುದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸಿಟಿ ಕೌನ್ಸಿಲ್ ಇಂದು ತಿಳಿಸಿದೆ.

"ನಗರವು ಮೇ 9 ರಂದು ವಿಜಯದ ಹಬ್ಬದ ಕಾರ್ಯಕ್ರಮಗಳನ್ನು ಆಯೋಜಿಸುವುದಿಲ್ಲ. ಯುದ್ಧ ಕಾನೂನುಗಳು ಸದ್ಯ ಉಕ್ರೇನ್ ನಲ್ಲಿ ಇನ್ನೂ ಜಾರಿಯಲ್ಲಿರುವುದರಿಂದ ಸಾಮೂಹಿಕ ಸಭೆ ಸೇರುವುದನ್ನು ನಿಷೇಧ ಹೇರಲಾಗಿದೆ" ಎಂದು ಸಿಟಿ ಕೌನ್ಸಿಲ್ ಟೆಲಿಗ್ರಾಮ್ನಲ್ಲಿ ಹೇಳಿದೆ.

ನಗರ ಅಧಿಕಾರಿಗಳು ಉಕ್ರೇನಿಯನ್ ರಾಜಧಾನಿಯಾದ್ಯಂತ ಗಸ್ತು ತಿರುಗಲಿದ್ದಾರೆ ಎಂದು ಸಿಟಿ ಕೌನ್ಸಿಲ್ ಮಾಹಿತಿ ನೀಡಿದೆ.

# ಶ್ರೀಲಂಕಾದಲ್ಲಿ ತುರ್ತು ಪರಿಸ್ಥಿತಿ ಘೋಷಣೆ



**ಕೊಲಂಬೋ, ಮೇ 6:** ಶ್ರೀಲಂಕಾದಲ್ಲಿ ಸೃಷ್ಟಿಯಾದ ಆರ್ಥಿಕ ಬಿಕ್ಕಟ್ಟು, ಇಡೀ ದೇಶದ ಚಿತ್ರಣವನ್ನೇ ಬದಲಿಸಿದೆ. ಸರ್ಕಾರದ ವಿರುದ್ಧ ಸಾರ್ವಜನಿಕರು ನಡೆಸುತ್ತಿರುವ ನಿರಂತರ ಪ್ರತಿಭಟನೆಯ ಮಧ್ಯೆ ತುರ್ತು ಪರಿಸ್ಥಿತಿ ಘೋಷಿಸಲಾಗಿದೆ.

ಬಾಹ್ಯ ಸಾಲದಿಂದ ಕಂಗೆಟ್ಟಿರುವ ದ್ವೀಪ ರಾಷ್ಟ್ರ ಶ್ರೀಲಂಕಾದಲ್ಲಿ ಅಧ್ಯಕ್ಷ ಗೋತಬಯ ರಾಜಪಕ್ಸೆ ಮಧ್ಯರಾತ್ರಿಯಿಂದ ತುರ್ತು ಪರಿಸ್ಥಿತಿಯನ್ನು ಘೋಷಿಸಿದ್ದಾರೆ. ಆರ್ಥಿಕ ಬಿಕ್ಕಟ್ಟಿನ ಬಗ್ಗೆ ಅವರ ರಾಜೀನಾಮೆಗೆ ಒತ್ತಾಯಿಸಿ ಕಾರ್ಮಿಕ ಸಂಘಟನೆಗಳು ಶುಕ್ರವಾರ ರಾಷ್ಟ್ರವ್ಯಾಪಿ ಮುಷ್ಕರ ನಡೆಸಲಾಗುತ್ತಿದೆ. ಈ ಹಿನ್ನೆಲೆ "ಸಾರ್ವಜನಿಕ ಕಾನೂನು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಕಠಿಣ ನಿಯಮಗಳನ್ನು ಜಾರಿಗೊಳಿಸಲಾಗಿದೆ ಎಂದು ಅಧ್ಯಕ್ಷ ಗೋಟಾಬಯ ರಾಜಪಕ್ಸೆಯವರ ವಕ್ತಾರರು ತಿಳಿಸಿದ್ದಾರೆ.

ಸರ್ಕಾರವನ್ನು ಕೆಳಗಿಳಿಯಬೇಕೆಂದು ಒತ್ತಾಯಿಸಿ ಟ್ರೇಡ್ ಯೂನಿಯನ್ ಮುಷ್ಕರದ ನಡುವೆಯೇ ಶ್ರೀಲಂಕಾದ ಸಂಸತ್ತಿಗೆ ಶುಕ್ರವಾರ ಮುತ್ತಿಗೆ ಹಾಕಲು ಪ್ರಯತ್ನಿಸಿದ ವಿದ್ಯಾರ್ಥಿಗಳ ಮೇಲೆ ಪೊಲೀಸರು ಅಶ್ರುವಾಯು ಮತ್ತು ಜಲ ಫಿರಂಗಿಗಳನ್ನು ಸಿಡಿಸಿದರು.

# ನ್ಯೂಯಾರ್ಕ್ ವಿಮಾನದ ರೆಕ್ಕೆಯ ಮೇಲೆ ನಡೆದ ಪ್ರಯಾಣಿಕ !




**ನ್ಯೂಯಾರ್ಕ್, ಮೇ6–** ಚಿಕಾಗೋದ ಓ'ಹೇರ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿಂತಿದ್ದ ವಿಮಾನದ ತುರ್ತು ನಿರ್ಗಮನ ಬಾಗಿಲನ್ನು ತೆರೆದು ವಿಮಾನದ ರೆಕ್ಕೆ ಮೇಲೆ ನಡೆದ 57 ವರ್ಷದ ಯುನೈಟೆಡ್ ಏರ್ ಲೈನ್ಸ್ ಪ್ರಯಾಣಿಕನನ್ನು ಬಂಧಿಸಲಾಗಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ತುರ್ತು ನಿರ್ಗಮನ ದ್ವಾರ ತೆರೆದ ಕ್ಯಾಲಿಫೋರ್ನಿಯಾ ವ್ಯಕ್ತಿಯನ್ನು ಗುರುವಾರ ವಶಕ್ಕೆ ತೆಗೆದುಕೊಳ್ಳಲಾಗಿದೆ ಎಂದು ಸಿಎನ್‌ಎನ್ ವರದಿ ಮಾಡಿದೆ. ಚಿಕಾಗೋ ಪೊಲೀಸ್ ಇಲಾಖೆಯ ಪ್ರಕಟಣೆಯ ಪ್ರಕಾರ, ಗೇಟ್ ಸಮೀಪ ನಿಂತಿದ್ದ ವಿಮಾನದ ತುರ್ತು ನಿರ್ಗಮನ ಬಾಗಿಲನ್ನು ತೆರೆದು ವಿಮಾನದ ರೆಕ್ಕೆಗೆ ನಡೆಯುತ್ತಿದ್ದ ವ್ಯಕ್ತಿಯನ್ನು ಗ್ರೌಂಡ್ ಸಿಬ್ಬಂದಿ ಕೆಳಗೆ ಇಳಿಸಿದ್ದಾರೆ ಎಂದು ಚಿಕಾಗೋ ಪೊಲೀಸರು ಸೇರಿಸಿದ್ದಾರೆ.

ಸ್ಯಾನ್ ಡಿಯಾಗೋದಿಂದ ಬರುತ್ತಿದ್ದ ಯುನೈಟೆಡ್ ಏರ್‌ಲೈನ್ಸ್ ಫ್ಲೈಟ್ 2478 ನಲ್ಲಿ ಈ ಘಟನೆ ಸಂಭವಿಸಿದ್ದು, ಅಜಾಗರೂಕ ನಡವಳಿಕೆ ಆರೋಪದ ಮೇಲೆ ರಾಂಡಿ ಫ್ರಾಂಕ್ ಡೇವಿಲಾ ಅವರ ವಿರುದ್ಧ ಕೇಸ್ ದಾಖಲಿಸಿ, ಬಂಧಿಸಲಾಗಿದೆ.ಗ್ರೌಂಡ್ ಸಿಬ್ಬಂದಿ ತುರ್ತು ನಿರ್ಗಮನ ಬಾಗಿಲು ತೆರೆದ ವ್ಯಕ್ತಿಯನ್ನು ವಿಮಾನದಿಂದ ಕೆಳಗೆ ಇಳಿಸಿದ್ದಾರೆ. ವಿಮಾನದಲ್ಲಿದ್ದ ಎಲ್ಲಾ ಪ್ರಯಾಣಿಕರು ಸುರಕ್ಷಿತವಾಗಿ ಕೆಳಗಿಳಿದರು ಎಂದು ಯುನೈಟೆಡ್ ಏರ್‌ಲೈನ್ಸ್ ಪ್ರಕಟಣೆಯಲ್ಲಿ ತಿಳಿಸಿದೆ.

# ಐಪಿಎಲ್ : ಇಂದು ಪಂಜಾಬ್ ಕಿಂಗ್ಸ್ , ರಾಜಸ್ತಾನ್ ರಾಯಲ್ಸ್ ನಡುವೆ ಪಂದ್ಯ



**ಮುಂಬೈ, ಮೇ 6–** ಶನಿವಾರ ನಡೆಯಲಿರುವ ಹದಿನೈದನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಎರಡು ಪಂದ್ಯಗಳ ಪೈಕಿ ಪ್ರಥಮ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಮತ್ತು ರಾಜಸ್ಥಾನ್ ರಾಯಲ್ಸ್ ತಂಡಗಳು ಮುಖಾಮುಖಿಯಾದರೆ, ಎರಡನೇ ಪಂದ್ಯದಲ್ಲಿ ಲಕ್ನೋ ಸೂಪರ್ ಜೈಂಟ್ಸ್ ಮತ್ತು ಕೋಲ್ಕತ್ತಾ ನೈಟ್ ರೈಡರ್ಸ್ ತಂಡಗಳು ಮುಖಾಮುಖಿಯಾಗಲಿವೆ.

ಪಂಜಾಬ್ ಕಿಂಗ್ಸ್ ಮತ್ತು ರಾಜಸ್ಥಾನ್ ರಾಯಲ್ಸ್ ತಂಡಗಳ ನಡುವಿನ ಪಂದ್ಯ ಟೂರ್ನಿಯ 52ನೇ ಪಂದ್ಯವಾಗಿದ್ದು, ಮುಂಬೈನ ವಾಂಖೆಡೆ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿದೆ. ರಾಜಸ್ಥಾನ್ ರಾಯಲ್ಸ್ ಮತ್ತು ಪಂಜಾಬ್ ಕಿಂಗ್ಸ್ ಎರಡೂ ತಂಡಗಳೂ ಸಹ ಪ್ಲೇ ಆಫ್ ರೇಸ್‌ನಲ್ಲಿರುವ ತಂಡಗಳಾದ ಕಾರಣ ಈ ಪಂದ್ಯದಲ್ಲಿ ಗೆಲ್ಲಲೇಬೇಕಾದ ಗುರಿಯನ್ನು ಹೊಂದಿವೆ. ಇನ್ನು ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ರಾಜಸ್ಥಾನ್ ಇಲ್ಲಿಯವರೆಗೂ ಒಟ್ಟು 10 ಪಂದ್ಯಗಳನ್ನಾಡಿ 6 ಪಂದ್ಯಗಳಲ್ಲಿ ಜಯ ಸಾಧಿಸಿ ಉಳಿದ 4 ಪಂದ್ಯಗಳಲ್ಲಿ ಸೋತು 12 ಅಂಕಗಳನ್ನು ಪಡೆ ದುಕೊಂಡು ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದರೆ, 10 ಪಂದ್ಯಗಳನ್ನಾಡಿ 5 ಪಂದ್ಯಗಳಲ್ಲಿ ಗೆದ್ದು ಉಳಿದ 5 ಪಂದ್ಯಗಳಲ್ಲಿ ಸೋತು 10 ಅಂಕಗಳನ್ನು ಪಡೆದುಕೊಂಡಿರುವ ಪಂಜಾಬ್ ಕಿಂಗ್ಸ್ ಅಂಕಪಟ್ಟಿಯಲ್ಲಿ ಏಳನೇ ಸ್ಥಾನದಲ್ಲಿದೆ.

ಈ ಪಂದ್ಯದಲ್ಲಿ ಕಣಕ್ಕಿಳಿಯಬಹುದಾದ ಆಡುವ ಬಳಗ ಮತ್ತು ಡ್ರೀಮ್ ಟೀಮ್ ಹೇಗಿದ್ದರೆ ಉತ್ತಮ ಎಂಬುದರ ಕುರಿತಾದ ಮಾಹಿತಿ ಈ ಕೆಳಕಂಡಂತಿದೆ.. ಸಂಭಾವ್ಯ ಆಡುವ ಬಳಗಗಳು: ಪಂಜಾಬ್ ಕಿಂಗ್ಸ್ ಸಂಭಾವ್ಯ ಆಡುವ ಬಳಗ: 1. ಮಯಾಂಕ್ ಅಗರ್ವಾಲ್ (ನಾಯಕ), 2. ಶಿಖರ್ ಧವನ್, 3. ಜಾನಿ ಬೈರ್‌ಸ್ಟೋ, 4. ಭಾನುಕಾ ರಾಜಪಕ್ಸೆ, 5. ಲಿಯಾಮ್ ಲಿವಿಂಗ್‌ಸ್ಟೋನ್, 6. ಜಿತೇಶ್ ಶರ್ಮಾ (ವಿಕೆಟ್ ಕೀಪರ್), 7. ರಿಷಿ ಧವನ್, 8. ಕಗಿಸೊ ರಬಾಡ, 9. ರಾಹುಲ್ ಚಾಹರ್ , 10. ಸಂದೀಪ್ ಶರ್ಮಾ, 11. ಅರ್ಷದೀಪ್ ಸಿಂಗ್. ರಾಜಸ್ಥಾನ್ ರಾಯಲ್ಸ್ ಸಂಭಾವ್ಯ ಆಡುವ ಬಳಗ: 1. ಜೋಸ್ ಬಟ್ಲರ್, 2. ದೇವದತ್ ಪಡಿಕ್ಕಲ್ / ಯಶಸ್ವಿ ಜೈಸ್ವಾಲ್, 3. ಸಂಜು ಸ್ಯಾಮ್ಸನ್ (ನಾಯಕ ಮತ್ತು ವಿಕೆ), 4. ರಿಯಾನ್ ಪರಾಗ್, 5. ಶಿಮ್ರಾನ್ ಹೆಟ್ಮೆಯರ್, 6. ಕರುಣ್ ನಾಯರ್, 7. ಆರ್ ಅಶ್ವಿನ್, 8. ಟ್ರೆಂಟ್ ಬೌಲ್ಟ್, 9. ಪ್ರಸಿದ್ಧ್ ಕೃಷ್ಣ, 10. ಯುಜ್ವೇಂದ್ರ ಚಹಾಲ್, 11. ಕುಲದೀಪ್ ಸೇನ್. ಡ್ರೀಮ್ ಟೀಮ್ಸ್: ರಾಜಸ್ಥಾನ್ ರಾಯಲ್ಸ್ ಮತ್ತು ಪಂಜಾಬ್ ಕಿಂಗ್ಸ್ ನಡುವಿನ ಪಂದ್ಯಕ್ಕಾಗಿ ಡ್ರೀಮ್ ಟೀಮ್ ರಚಿಸುವ ಕ್ರಿಕೆಟ್ ಪ್ರೇಮಿಗಳು ಈ ಕೆಳಕಂಡಂತೆ ತಂಡಗಳನ್ನು ರಚಿಸಿದರೆ ಉತ್ತಮ ಫ್ಯಾಂಟಸಿ ಅಂಕಗಳನ್ನು ಗಳಿಸಬಹುದು. ಡ್ರೀಮ್ ಟೀಮ್ 1: 1. ಶಿಖರ್ ಧವನ್, 2. ಜೋಸ್ ಬಟ್ಲರ್, 3. ಸಂಜು ಸ್ಯಾಮ್ಸನ್, 4. ಭಾನುಕಾ ರಾಜಪಕ್ಸೆ, 5. ಲಿಯಾಮ್ ಲಿವಿಂಗ್‌ಸ್ಟೋನ್, 6. ಜಿತೇಶ್ ಶರ್ಮಾ, 7. ಆರ್ ಅಶ್ವಿನ್, 8. ಯುಜ್ವೇಂದ್ರ ಚಾಹಲ್, 9. ರಿಷಿ ಧವನ್, 10. ಪ್ರಸಿದ್ಧ್ ಕೃಷ್ಣ, 11. ಕಗಿಸೊ ರಬಾಡ. **ನಾಯಕ:** ಸಂಜು ಸ್ಯಾಮ್ಸನ್, **ಉಪನಾಯಕ:** ಲಿಯಾಮ್ ಲಿವಿಂಗ್‌ಸ್ಟೋನ್, ವಿಕೆಟ್ ಕೀಪರ್: ಜಿತೇಶ್ ಶರ್ಮಾ.

